
ಕರ್ನಾಟಕ ಸರ್ಕಾರ
ಕನ್ನಡ ಮತ್ತು ಸಂಸ್ಕೃತಿ ಇಲಾಖೆ
ಕನ್ನಡ ಭಾಷಾಭಿವೃದ್ಧಿ ಯೋಜನೆ

ರಸ್ತಾಪೂರ ಭೀಮಕವಿ ವಿರಚಿತ ಡೋರನಹಳ್ಳಿ

ಶ್ರೀ ಮಹಾಂತೇಶ್ವರ ಪುರಾಣ

ಸಂಪಾದಕರು
ಡಾ. ಶಾಂತಪ್ಪ ಡಂಬಳ
ಪ್ರೊ. ಮಲ್ಲಪ್ಪ ಮಾನೇಗರ



ಕನ್ನಡ ಅಧ್ಯಯನ ಸಂಸ್ಥೆ
ಗುಲಬರ್ಗಾ ವಿಶ್ವವಿದ್ಯಾಲಯ, ಗುಲಬರ್ಗಾ-೫೮೫೧೦೬

BVP- 1143- 2|2|17
G-1124- 13|30

ರಸ್ತಾಪುರ ಭೀಮಕವಿ ವಿರಚಿತ

ಡೋರನಹಳ್ಳಿ

ಶ್ರೀ. ಮಹಾಂತೇಶ್ವರ ಪುರಾಣ

ಕರ್ನಾಟಕ ಸರ್ಕಾರ

ಕನ್ನಡ ಮತ್ತು ಸಂಸ್ಕೃತಿ ಇಲಾಖೆ
ಕನ್ನಡ ಭಾಷಾಭಿವೃದ್ಧಿ ಯೋಜನೆ
ಹಸ್ತಪ್ರತಿಗಳ ಸಂಗ್ರಹ, ಸಂರಕ್ಷಣೆ ಹಾಗೂ ಪ್ರಕಟನಾ
ಯೋಜನೆ – ೧

ರಸ್ತಾಪುರ ಭೀಮಕವಿ ವಿರಚಿತ

ಡೋರನಹಳ್ಳಿ

ಶ್ರೀ. ಮಹಾಂತೇಶ್ವರ ಪುರಾಣ

ಪ್ರಧಾನ ಸಂಪಾದಕರು

ಡಾ. ನಾಗಾಬಾಯಿ ಬಿ. ಬುಳ್ಳಾ

ಸಂಪಾದಕರು

ಡಾ. ಶಾಂತಪ್ಪ ಡಂಬಳ

ಪ್ರೊ ಮಲ್ಲಪ್ಪ ಮಾನೆಗರ

ಕನ್ನಡ ಅಧ್ಯಯನ ಸಂಸ್ಥೆ
ಗುಲಬರ್ಗಾ ವಿಶ್ವವಿದ್ಯಾಲಯ
ಗುಲಬರ್ಗಾ– ೨೮೨ ೧೦೬

RASTAPURA BHIMA KAVI VIRACHITA DORANAHALLI SHRI MAHANTESHWAR PURANA

Chief Editor: Dr. Nagabai B. Bulla
Institute of Kannada studies Gulbarga University,
Edited by: Dr. Shantappa Dambal and Prof : Mallappa Manegar
Funded by: Government of Karnataka
Published by : Institute of Kannada Studies Gulbarga University,
Gulbarga
© ISBN : 978-81-920449-6-5
Institute of Kannada Studies
First Impression : 2012
Total Pages : xxxiv + 124
Paper Used : 80 G. S.M.Maplitho
Price : Rs. 200.00
Cover Design by : Mahesh Shrigani

ರಸ್ತಾಪುರ ಭೀಮಕವಿ ವಿರಚಿತ ಡೋರನಹಳ್ಳಿ ಶ್ರೀಮಹಾಂತೇಶ್ವರ ಪುರಾಣ

ಪ್ರಧಾನ ಸಂಪಾದಕರು ಡಾ.ನಾಗಾಬಾಯಿ ಬಿ. ಬುಳ್ಳಾ, ಪ್ರಾಧ್ಯಾಪಕರು ಹಾಗೂ
ಮುಖ್ಯಸ್ಥರು ಕನ್ನಡ ಅಧ್ಯಯನ ಸಂಸ್ಥೆ, ಗುಲಬರ್ಗಾ ವಿಶ್ವವಿದ್ಯಾಲಯ,
ಗುಲಬರ್ಗಾ
ಸಂಪಾದಕರು ಡಾ.ಶಾಂತಪ್ಪ ಡಂಬಳ ಹಾಗೂ ಪ್ರೊ. ಮಲ್ಲಪ್ಪ ಮಾನೆಗರ
ಕೃತಿ ಸ್ವಾಮ್ಯ ಹಕ್ಕುಗಳು : ಕನ್ನಡ ಅಧ್ಯಯನ ಸಂಸ್ಥೆ
ಪ್ರಕಾಶಕರು : ಕನ್ನಡ ಅಧ್ಯಯನ ಸಂಸ್ಥೆ, ಗುಲಬರ್ಗಾ ವಿಶ್ವವಿದ್ಯಾಲಯ,
ಗುಲಬರ್ಗಾ
ಪ್ರಥಮ ಮುದ್ರಣ : ೨೦೧೨
ಪುಟಗಳು: xxxiv + ೧೨೪
ಬಳಸಿದ ಕಾಗದ : ೮೦ ಜಿ.ಎಸ್. ಎಮ್. ಮ್ಯಾಪಲಿಥೊ
ಬೆಲೆ : ರೂ. ೨೦೦.೦೦
ಕೃತಿ ದೊರೆಯುವ ಸ್ಥಳ : ಕನ್ನಡ ಅಧ್ಯಯನ ಸಂಸ್ಥೆ
ಮುದ್ರಕರು :
ಪ್ರಿಂಟ್ ಪಾರ್ಕ್
ಕ್ವಾಲಿಟಿ ಆಫ್ ಸೆಟ್ ಪ್ರಿಂಟರ್ಸ್
೧೪೯೬/೪, ೩ನೇ ಅಡ್ಡರಸ್ತೆ, ಮರಿಯಪ್ಪನಪಾಳ್ಯ
ಶ್ರೀರಾಂಪುರಂ ಅಂಚೆ,
ಬೆಂಗಳೂರು – ೫೬೦ ೦೨೧.

ಗುಲಬರ್ಗಾ ವಿಶ್ವವಿದ್ಯಾಲಯ, ಗುಲಬರ್ಗಾ

ಕನ್ನಡ ಭಾಷಾಭಿವೃದ್ಧಿ ಯೋಜನೆ ಸಮಿತಿ

ಅಧ್ಯಕ್ಷರು

ಪ್ರೊ. ಈ.ಟಿ. ಪುಟ್ಟಯ್ಯ

ಕುಲಪತಿಗಳು

ಉಪಾಧ್ಯಕ್ಷರು

ಪ್ರೊ. ಎಸ್.ಎಲ್. ಹಿರೇಮಠ

ಕುಲಸಚಿವರು

ಸಂಚಾಲಕರು

ಪ್ರೊ. ನಾಗಾಬಾಯಿ ಬಿ. ಬುಳ್ಳಾ

ಅಧ್ಯಕ್ಷರು, ಕನ್ನಡ ಅಧ್ಯಯನ ಸಂಸ್ಥೆ

ಸದಸ್ಯರು

ಡಾ. ಪಿ.ಕೆ.ಖಂಡೋಬಾ
ಡಾ. ವ್ಹಿ.ಜಿ.ಪೂಜಾರ
ಡಾ. ವೀರಣ್ಣ ದಂಡೆ
ಡಾ. ಎಚ್.ಟಿ.ಪೋತೆ
ಡಾ. ಜಯಶ್ರೀ ದಂಡೆ
ಡಾ. ಡಿ.ಬಿ.ನಾಯಕ
ಡಾ. ಬಸವರಾಜ ಸಬರದ
ಡಾ. ಬಿ.ಎಸ್. ಪೋಲಿಸ ಪಾಟೀಲ
ಡಾ. ಎಸ್.ಎಂ. ಹಿರೇಮಠ
ಡಾ. ರಾಜಪ್ಪ ದಳವಾಯಿ

ಡಿ.ವಿ.ಸದಾನಂದಗೌಡ
ಮುಖ್ಯಮಂತ್ರಿ
ಸಿಎಂ/ಪಿಎಸ್/57/11

ಕರ್ನಾಟಕ ಸರ್ಕಾರ

ವಿಧಾನಸೌಧ
ಬೆಂಗಳೂರು-560 001
ದಿ: 02.11.2011

ಶುಭ ಹಾರೈಕೆ

ನಮ್ಮ ಸರ್ಕಾರದ ಪ್ರಯತ್ನದ ಫಲವಾಗಿ ಕನ್ನಡಕ್ಕೆ ಶಾಸ್ತ್ರೀಯ ಭಾಷೆಯ ಸ್ಥಾನ ದೊರೆತಿದ್ದು, ಈ ಹಿನ್ನಲೆಯಲ್ಲಿ ಕನ್ನಡ ಭಾಷಾಭಿವೃದ್ಧಿ ಯೋಜನೆ ಕಾರ್ಯಕ್ರಮಗಳಿಗೆ ನಮ್ಮ ಸರ್ಕಾರ ವಿಶೇಷ ಅನುದಾನವಾಗಿ ರಾಜ್ಯದ ಎಲ್ಲಾ ವಿಶ್ವವಿದ್ಯಾಲಯಗಳಿಗೆ ತಲಾ ಎರಡು ಕೋಟಿ ರೂಪಾಯಿ ಅನುದಾನವನ್ನು ಮೀಸಲಿಟ್ಟು ಈಗಾಗಲೇ ಒಂದು ಕೋಟಿ ರೂಪಾಯಿ ಬಿಡುಗಡೆ ಮಾಡಲಾಗಿದೆ. ಗುಲಬರ್ಗಾ ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಸಂಸ್ಥೆಯೂ ಸೇರಿದಂತೆ ನಾಡಿನ ವಿಶ್ವವಿದ್ಯಾಲಯಗಳ ಕನ್ನಡ ವಿಭಾಗಗಳು ಈ ಕಾರ್ಯಯೋಜನೆಯನ್ನು ಅನುಷ್ಠಾನಗೊಳಿಸುವ ನಿಟ್ಟಿನಲ್ಲಿ ಕಾರ್ಯತತ್ಪರರಾಗಿರುವುದು ಮೆಚ್ಚತಕ್ಕ ಸಂಗತಿ.

ಕನ್ನಡ ಭಾಷೆ, ಸಾಹಿತ್ಯ, ಸಂಸ್ಕೃತಿ, ವಚನ ಸಾಹಿತ್ಯ, ದಾಸ ಸಾಹಿತ್ಯ ತತ್ವಪದ ಸಾಹಿತ್ಯ, ದಲಿತ-ಬಂಡಾಯ ಸಾಹಿತ್ಯ, ಜಾನಪದ, ಶಾಸನ, ಇತಿಹಾಸ, ಹಸ್ತಪ್ರತಿ, ಸಾಹಿತ್ಯ ಚರಿತ್ರೆ, ರಂಗಭೂಮಿ, ತಂತ್ರಜ್ಞಾನ, ಕನ್ನಡೇತರರಿಗೆ ಕನ್ನಡ ಪರಿಚಯ ಮೊದಲಾದ ವಿಷಯಗಳಿಗೆ ಸಂಬಂಧಿಸಿದಂತೆ ರೂಪಿಸಲಾದ ವಿವಿಧ ಕ್ರಿಯಾಯೋಜನೆಗಳು ಹೆಚ್ಚು ಉಪಯುಕ್ತಕಾರಿಯಾಗಿವೆ. ಕನ್ನಡ ಅಧ್ಯಯನ ಮತ್ತು ಸಂಶೋಧನಾ ವ್ಯಾಪ್ತಿಯನ್ನು ವಿಸ್ತರಿಸುವುದರ ಮೂಲಕ ಕನ್ನಡಕ್ಕೆ ಹೊಸ ಆಯಾಮಗಳನ್ನು ಜೋಡಿಸಿದೆ. ಈ ಕಾರ್ಯದಲ್ಲಿ ನಾಡಿನ ಅನೇಕ ಸಂಶೋಧನಾಸಕ್ತಕರು ಪಾಲುಗೊಂಡಿದ್ದು, ಅವರ ಎಲ್ಲ ಸಂಶೋಧನೆ, ಅಧ್ಯಯನ, ಪುಸ್ತಕ ರೂಪದಲ್ಲಿ ಪ್ರಕಟಗೊಳ್ಳುತ್ತಿರುವುದು ಶ್ಲಾಘನೀಯ.

ಕನ್ನಡ ಭಾಷೆಗೆ ಎರಡು ಸಾವಿರ ವರ್ಷಗಳ ಸುದೀರ್ಘ ಇತಿಹಾಸವಿದೆ. ಸಮೃದ್ಧವೂ, ಪ್ರಬುದ್ಧವೂ ಆದ ಕನ್ನಡ ಭಾಷಾ ಸಾಹಿತ್ಯ ತನ್ನ ಭಾಷಿಕ, ಸಾಂಸ್ಕೃತಿಕ, ಸಾಹಿತ್ಯಿಕ ಅನನ್ಯತೆಯಿಂದ ಜಾಗತಿಕ ಮಟ್ಟದಲ್ಲಿ ಗುರುತಿಸಿಕೊಂಡಿದೆ. ಈ ಬೆಳವಣಿಗೆಗೆ ಕನ್ನಡದ ಅಸಂಖ್ಯಾತ ಕವಿಗಳೂ, ಲೇಖಕರೂ, ಕಲಾವಿದರೂ ಕಾರಣರಾಗಿದ್ದಾರೆ. ಕನ್ನಡ ಭಾಷೆ ಸೃಜನಶೀಲವಾಗಿ ಮತ್ತು ಶಾಸ್ತ್ರೀಯವಾಗಿ ಶ್ರೇಷ್ಠ ಮಟ್ಟದ ಬೆಳವಣಿಗೆಯನ್ನು ಹೊಂದಿದೆ. ವೈವಿಧ್ಯಪೂರ್ಣವಾದ ಒಂದು ದೊಡ್ಡ ಪರಂಪರೆ

ನಮ್ಮ ಹಿಂದಿದೆ. ಈ ಮಹಾಪರಂಪರೆಯ ಮುಂಚೂಣಿಯಲ್ಲಿ ನಾವಿದ್ದೇವೆ. ಕನ್ನಡವನ್ನು ಇನ್ನೂ ಎತ್ತರಕ್ಕೆ ತೆಗೆದುಕೊಂಡು ಹೋಗುವ ಬಹುಮುಖ್ಯ ಜವಾಬ್ದಾರಿ ನಮ್ಮೆಲ್ಲರ ಮೇಲಿದೆ. ಕನ್ನಡ ಕಟ್ಟುವ ಈ ಮಹತ್ವದ ಕೈಂಕರ್ಯಕ್ಕೆ ಎಲ್ಲರೂ ಕೈಜೋಡಿಸಬೇಕಾಗಿದೆ.

ಗುಲಬರ್ಗಾ ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಸಂಸ್ಥೆಯ ಹಲವು ಯೋಜನೆಗಳಲ್ಲಿ ಹಸ್ತಪ್ರತಿಗಳ ಸಂಗ್ರಹ, ಸಂರಕ್ಷಣೆ ಹಾಗೂ ಪ್ರಕಟಣಾ ಯೋಜನೆಯು ಒಂದಾಗಿದೆ. ಹಲವಾರು ಅಪ್ರಕಟಿತ ಹಸ್ತಪ್ರತಿಗಳನ್ನು ಪ್ರಕಟಿಸಿದ ಪ್ರಧಾನ ಸಂಪಾದಕರಿಗೂ, ಸಂಪಾದಕರಿಗೂ ಅಭಿನಂದಿಸಿ, ಈ ಕೃತಿಗಳು ನಾಡಿನ ಸಹೃದಯರ ಮನ ಗೆಲ್ಲಲಿ ಎಂದು ಹಾರೈಸಿ ಶುಭ ಕೋರುತ್ತೇನೆ.

ಡಿ.ವಿ. ಸದಾನಂದಗೌಡ
ಮುಖ್ಯಮಂತ್ರಿಗಳು

ಗೋವಿಂದ. ಎಂ. ಕಾರಜೋಳ
ಸಣ್ಣ ನೀರಾವರಿ,
ಕನ್ನಡ ಮತ್ತು ಸಂಸ್ಕೃತಿ ಸಚಿವರು

ಕರ್ನಾಟಕ ಸರ್ಕಾರ

ನಂ. 330, 3ನೇ ಮಹಡಿ
ವಿಧಾನಸೌಧ
ಬೆಂಗಳೂರು- 560 001
ದಿ: 16.11.2011

ಶುಭಹಾರೈಕೆ

ಕನ್ನಡ ನಾಡು-ನುಡಿಗೆ ಸುದೀರ್ಘವಾದ ಇತಿಹಾಸವಿದೆ. ಭವ್ಯ ಪರಂಪರೆಯನ್ನು ಈ ನಾಡು ಹೊಂದಿದೆ. ಭಾರತೀಯ ಭಾಷೆಗಳಲ್ಲಿಯೇ ಅತೀ ಹೆಚ್ಚು ಜ್ಞಾನಪೀಠ ಪ್ರಶಸ್ತಿಗಳನ್ನು ಪಡೆದಿರುವ ಹೆಗ್ಗಳಿಕೆಗೆ ನಮ್ಮ ಭಾಷೆ ಪಾತ್ರವಾಗಿದೆ. ಈ ನಾಡಿನ ಕವಿಗಳು, ಸಾಹಿತಿಗಳು, ಕಲಾವಿದರು, ಸಂಶೋಧಕರು, ಶಿಕ್ಷಣತಜ್ಞರು, ವಿಜ್ಞಾನಿಗಳು ವಿಶ್ವದಾದ್ಯಂತ ಹೆಸರು ಮಾಡಿದ್ದಾರೆ.

ಕನ್ನಡ ನಾಡು-ನುಡಿಗೆ ಸಂಬಂಧಪಟ್ಟ ಮಾತುಗಳು ರಾಮಾಯಣ ಮಹಾಭಾರತಗಳಲ್ಲಿ ಕಂಡು ಬರುತ್ತವೆ. ಕ್ರಿಸ್ತಪೂರ್ವದಿಂದಲೇ ಕನ್ನಡ ಭಾಷೆಯ ಅಸ್ತಿತ್ವವನ್ನು ಸಂಶೋಧಕರು ಗುರುತಿಸಿದ್ದಾರೆ. ಕ್ರಿಸ್ತಶಕ 450 ರ ಹಲ್ಮಿಡಿಶಾಸನ ಕನ್ನಡದ ಉಪಲಬ್ದವಿರುವ ಮೊದಲ ಲಿಖಿತ ರೂಪದ ಶಾಸನ. ಕನ್ನಡದ ಆದಿ ಮಹಾಕವಿ ಪಂಪನಿಗಿಂತ ಹಿಂದೆಯೇ ಒಂದು ಸಮೃದ್ಧವಾದ ಸಾಹಿತ್ಯ ಪರಂಪರೆಯನ್ನು ಕನ್ನಡ ಕಂಡಿದೆ ಎಂಬುದಕ್ಕೆ ಸಂಶೋಧಕರು ಸಾಕಷ್ಟು ಪುರಾವೆಗಳನ್ನು ನೀಡಿದ್ದಾರೆ. ಶಾತವಾಹನರು, ಕದಂಬರು, ಚಾಲುಕ್ಯರು, ಗಂಗರು, ರಾಷ್ಟ್ರಕೂಟರು, ಹೊಯ್ಸಳರು, ವಿಜಯನಗರದ ಅರಸರು, ಮೈಸೂರು ಅರಸರು ಈ ನಾಡಿನ ಕಲೆ, ಸಾಹಿತ್ಯ, ವಾಸ್ತುಶಿಲ್ಪ, ಸಂಗೀತ ಮೊದಲಾದ ಕ್ಷೇತ್ರಗಳಲ್ಲಿ ಅಪೂರ್ವ ಕೊಡುಗೆ ನೀಡಿದ್ದಾರೆ.

ಇಂಥ ಅಪೂರ್ವ ಪರಂಪರೆ ಹೊಂದಿರುವ ಕನ್ನಡ ಭಾಷೆಯನ್ನು ಕೇಂದ್ರ ಸರ್ಕಾರ ಶಾಸ್ತ್ರೀಯ ಭಾಷೆ ಎಂದು ಘೋಷಿಸಿದೆ. ಕನ್ನಡದ ಕೆಲಸಕ್ಕೆ ಕೈ ಜೋಡಿಸಿರುವ ಕರ್ನಾಟಕ ರಾಜ್ಯ ಸರ್ಕಾರ 'ಕನ್ನಡ ಭಾಷಾಭಿವೃದ್ಧಿ ಯೋಜನೆ'ಗೆ ವಿಶೇಷ ಅನುದಾನ ಬಿಡುಗಡೆ ಮಾಡಿದೆ. ಈ ಹಿನ್ನೆಲೆಯಲ್ಲಿ ಕರ್ನಾಟಕದ ವಿವಿಧ ವಿಶ್ವವಿದ್ಯಾಲಯಗಳಲ್ಲಿ ಕನ್ನಡ ಕಟ್ಟುವ ಕೆಲಸ ಭರದಿಂದ ನಡೆದಿದೆ. ಕನ್ನಡದ ಇತಿಹಾಸ, ಭಾಷೆ, ಸಾಹಿತ್ಯ, ಪರಂಪರೆ, ಜಾನಪದ, ವಿಜ್ಞಾನ, ಮಾನವಿಕ ಇನ್ನಿತರ ಅಂಶಗಳನ್ನು ಕುರಿತ ಹೊತ್ತಿಗೆಗಳು ಸಿದ್ಧವಾಗುತ್ತಿವೆ. ಈ ಯೋಜನೆಯ ಹಲವು ಯೋಜನೆಯ ಅಡಿಯಲ್ಲಿ ಗುಲಬರ್ಗಾ ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಸಂಸ್ಥೆಯ ಹಸ್ತಪ್ರತಿಗಳ ಸಂಗ್ರಹ ಸಂರಕ್ಷಣೆ

ಹಾಗೂ ಪ್ರಕಟನಾ ಯೋಜನೆಯಲ್ಲಿ ಹಲವಾರು ಅಮೂಲ್ಯವಾದ ಅಪ್ರಕಟಿತ ಹಸ್ತಪ್ರತಿಗಳನ್ನು ಪ್ರಕಟಿಸಿದ ಪ್ರಧಾನ ಸಂಪಾದಕರಿಗೂ, ಸಂಪಾದಕರಿಗೂ ಅಭಿನಂದಿಸುವೆನು.

ಕನ್ನಡ ತೇರು ಎಳೆಯುವ ಮಹತ್ಕಾರ್ಯದಲ್ಲಿ ಎಲ್ಲಾ ವಿಶ್ವವಿದ್ಯಾಲಯಗಳ ಕನ್ನಡ ವಿಭಾಗಗಳು ಸಕ್ರಿಯವಾಗಿ ಪಾಲ್ಗೊಳ್ಳುವಂತೆ ಪ್ರೇರೇಪಿಸಿ, ಉತ್ತೇಜಿಸಿ ಆ ಎಲ್ಲ ವಿಶೇಷ ಯೋಜನೆಗಳನ್ನು ಕಾರ್ಯಗತಗೊಳಿಸುವಂತೆ ನಿರ್ದೇಶನ ನೀಡಿರುವ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಆಯುಕ್ತರಾದ ಶ್ರೀ ಮನು ಬಳಿಗಾರ್ ಅವರನ್ನು ಈ ಸಂದರ್ಭದಲ್ಲಿ ಅಭಿನಂದಿಸುತ್ತೇನೆ. ಈ ಮಾಲೆಯಲ್ಲಿ ಈ ಬಗೆಯ ಇನ್ನೂ ಅನೇಕ ಕೃತಿಗಳು ಕನ್ನಡಿಗರಿಗೆ ದೊರೆಯಲಿವೆ ಎಂಬ ವಿಚಾರ ತಿಳಿದಾಗಲಂತೂ ನನಗೆ ಇನ್ನಷ್ಟು ಮಹದಾನಂದವಾಗಿದೆ. ಇದರ ಪೂರ್ಣ ಪ್ರಯೋಜನವನ್ನು ನಾಡಿನ ಜನತೆ ಪಡೆಯುವಂತಾಗಲಿ.

ರಾಜ್ಯ ಸರ್ಕಾರದ ಈ ಯೋಜನೆ ಕನ್ನಡ ನಾಡು-ನುಡಿ ಸಂಸ್ಕೃತಿಯ ಪುನರುತ್ಥಾನಕ್ಕೆ ಕಾರಣವಾಗಿದೆ. ಈ ಮೂಲಕ ವಿವಿಧ ಜ್ಞಾನ ಶಿಸ್ತುಗಳಲ್ಲಿ ಕನ್ನಡಿಗರ ಅಧ್ಯಯನ ಆಸಕ್ತಿ ಬೆಳೆಯಲು ವಿವಿಧ ಕ್ರಿಯಾ ಯೋಜನೆಗಳು ಸಹಕಾರಿಯಾಗಿವೆ. ಇದರಿಂದ ಹೊಸ ಚೈತನ್ಯವನ್ನು ಹುಟ್ಟುಹಾಕುವ ಹೊಸ ಸಂಚಲನವನ್ನು ಉಂಟುಮಾಡುವ ಅನನ್ಯ ಪರಂಪರೆಯೊಂದಕ್ಕೆ ಚಾಲನೆ ಸಿಕ್ಕಂತಾಗಿದೆ.

ಈ ಪರ್ವಕಾಲದಲ್ಲಿ ನಾವಿದ್ದೇವೆ ಎನ್ನುವದು ಸಂತಸದ ಸಂಗತಿ. ಕನ್ನಡದ ಅಪೂರ್ವ ಪರಂಪರೆಯನ್ನು ಉಳಿಸಿ ಬೆಳೆಸುವ ಮಹತ್ಕಾರ್ಯದಲ್ಲಿ ಎಲ್ಲರೂ ಕೈ ಜೋಡಿಸಿದ್ದಾರೆ. ನಾಡು-ನುಡಿಯ ಅಭಿವೃದ್ಧಿ ವಿಚಾರದಲ್ಲಿ ಸರ್ಕಾರ ಸದಾ ಸಹಕಾರ ನೀಡುವದು. ಕನ್ನಡಿಗರಿಗೆ ಒಳಿತಾಗಲಿ, ಸರ್ವರೂ ಸುಖ ಶಾಂತಿಯಿಂದ್ದ ಬದುಕಿ ಬಾಳಲೆಂದು ಹೃದಯತುಂಬಿ ಹಾರೈಸುವೆ.

ಗೋವಿಂದ. ಎಂ. ಕಾರಜೋಳ

ಸಚಿವರು

ಬಿ. ಬಸವರಾಜು ಭಾ.ಆ.ಸೇ.
ಸರ್ಕಾರದ ಕಾರ್ಯದರ್ಶಿಗಳು
ಕನ್ನಡ ಮತ್ತು ಸಂಸ್ಕೃತಿ
ಹಾಗೂ ವಾರ್ತಾ ಇಲಾಖೆ

ಕರ್ನಾಟಕ ಸರ್ಕಾರ

2, ನೆಲಮಹಡಿ, ವಿಕಾಸ ಸೌಧ,
ಬೆಂಗಳೂರು– 560 001
☎ 22205781ಮ 2203400
ಫ್ಯಾಕ್ಸ್: 22353105
ಇ–ಮೇಲ್: secy-kc@karnataka. Gov.in

ದಿ: 24.10.2011

ಶುಭಹಾರೈಕೆ

ದ್ರಾವಿಡ ಭಾಷಾ ಪರಂಪರೆಯ ನಡುವೆ ಕನ್ನಡ ಭಾಷೆಯ ಶ್ರೀಮಂತಿಕೆ ಮತ್ತು ಅದರ ಸಾಂಸ್ಕೃತಿಕ ವೈವಿಧ್ಯತೆ ಎದ್ದುಕಾಣುವಂತಿದೆ. ತಮಿಳು ಭಾಷೆಯ ಪರಂಪರೆಗೆ ಸರಿಸಮಾನವಾಗಿಯೇ ಬೆಳೆದು ಬಂದಿರುವ ಕನ್ನಡಕ್ಕೆ ನಿಖರವಾಗಿಯೇ ಒಂದೂವರೆ ಸಾವಿರ ವರ್ಷಗಳಿಗೂ ಮೀರಿದ ಇತಿಹಾಸವಿದೆ. ಕ್ರಿ.ಶ.450ರ ಹಲ್ಮಿಡಿ ಶಾಸನದ ಕಾಲಕ್ಕೆ ಕನ್ನಡ, ಕರ್ನಾಟಕದಲ್ಲಿ ಬಳಕೆಯಲ್ಲಿತ್ತು. ವ್ಯಾಸಕೃತ ಮಹಾಭಾರತದಲ್ಲಿಯೇ ಕರ್ನಾಟಕದ ಪ್ರಸ್ತಾಪವಿದೆ. ಶಾತವಾಹನರು, ಕದಂಬರು ಇಲ್ಲಿನ ಪ್ರಾಚೀನ ಅರಸು ಮನೆತನದವರೆಂದು ಇತಿಹಾಸಕಾರರು ಗುರುತಿಸಿರುತ್ತಾರೆ. ಗ್ರೀಕ್ ಭೂಗೋಳಶಾಸ್ತ್ರದ ಟಾಲೆಮಿಯ ಪ್ರವಾಸಿ ಬರವಣಿಗೆಯಲ್ಲಿಯೇ ಕನ್ನಡ ನಾಡಿನ ಅನೇಕ ಪ್ರದೇಶಗಳ ಪ್ರಸ್ತಾಪ ಇರುವುದನ್ನು ಸಂಶೋಧಕ ಗೋವಿಂದ ಪೈ ಅವರು ಬೆಳಕಿಗೆ ತಂದರು. ಅಶೋಕನು ದಕ್ಷಿಣ ಭಾರತದಲ್ಲಿ ಹಾಕಿಸಿದ ಶಾಸನಗಳು ಮೊದಲು ದೊರಕಿರುವುದು ಕರ್ನಾಟಕದಲ್ಲಿಯೇ! ಚಿತ್ರದುರ್ಗದ ಸಿದ್ದಾಪುರ, ರಾಯಚೂರಿನ ಮಸ್ಕಿ ಭಾಗದಲ್ಲಿ ದೊರಕಿರುವ ಶಾಸನದಿಂದಲೇ ಅಶೋಕನಿಗೆ 'ದೇವನಾಂಪ್ರಿಯ' ಎಂಬ ಬಿರುದು ಇದ್ದಿತೆಂದು ತಿಳಿದುಬರುತ್ತದೆ. ಅಶೋಕನು ದಕ್ಷಿಣ ಭಾರತದ ಕರ್ನಾಟಕದಲ್ಲಿ ತನ್ನ ಶಾಸನಗಳನ್ನು ಹಾಕಿಸಿದನೆಂದರೆ ಕರ್ನಾಟಕದಲ್ಲಿಯ ಭಾಷಾಪ್ರದೇಶಗಳು ಚೆನ್ನಾಗಿಯೇ ನೆಲೆಯೂರಿದ್ದವೆಂದು ತಿಳಿಯಬಹುದಾಗಿರುತ್ತದೆ. ಇಷ್ಟೇ ಅಲ್ಲದೆ ಕಾಳಿದಾಸನ ಕಾಲ ನಿಗದಿ ಮಾಡುವುದರಲ್ಲಿಯೂ ಮೊದಲು ಸಹಾಯಕ್ಕೆ ಬಂದದ್ದು ಕರ್ನಾಟಕದ ಐಹೊಳೆಯ ಮೇಗುತಿ ದೇವಾಲಯದ ರವಿಕೀರ್ತಿಯ 5ನೇ ಶತಮಾನದ ಶಾಸನ. 'ಅಯ್ಯಾಹೊಳೆಯ' ಐನೂರು ಜನ ವ್ಯಾಪರಸ್ಥರು ದಕ್ಷಿಣ ಭಾರತದ ವ್ಯಾಪಾರವನ್ನೆಲ್ಲ ನಿಯಂತ್ರಿಸುತ್ತಿದ್ದರಂತೆ. ಅಂದರೆ ಭಾರತದ ಇತಿಹಾಸಕ್ಕೆ ತನ್ನದೇ ಆದ ಕಾಣಿಕೆ ನೀಡಿದ ಕರ್ನಾಟಕದ ಸಾಂಸ್ಕೃತಿಕ ಪರಂಪರೆಯ ಈ ಹೆಗ್ಗುರುತುಗಳನ್ನು ಇಲ್ಲಿ ಪ್ರಸ್ತಾಪಿಸುತ್ತಿರುವುದರ ಕಾರಣವೆಂದರೆ, ಭಾರತ ಸರಕಾರ ಕನ್ನಡಕ್ಕೆ ಶಾಸ್ತ್ರೀಯ ಭಾಷೆ ಸ್ಥಾನಮಾನವನ್ನು ನೀಡಿರುವುದು ಎಲ್ಲಾ ರೀತಿಯಿಂದಲೂ ಸಮಂಜಸ

ಹಾಗೂ ಸೂಕ್ತ ಎಂಬುವುದಕ್ಕಾಗಿ. 2009ರಲ್ಲಿ ಕನ್ನಡಕ್ಕೆ ಶಾಸ್ತ್ರೀಯ ಸ್ಥಾನಮಾನ ದೊರೆತ ಸಂದರ್ಭದಲ್ಲಿ ಕರ್ನಾಟಕದ ಅಂದಿನ ಮಾನ್ಯ ಮುಖ್ಯಮಂತ್ರಿಗಳಾದ ಶ್ರೀ ಬಿ.ಎಸ್.ಯಡಿಯೂರಪ್ಪ ನವರು ಕರ್ನಾಟಕದ ಎಲ್ಲಾ ವಿಶ್ವವಿದ್ಯಾಲಯಗಳ ಕನ್ನಡ ವಿಭಾಗಗಳಿಗೂ ಎರಡೆರಡು ಕೋಟಿ ಅನುದಾನವನ್ನು ಬಿಡುಗಡೆ ಮಾಡಿ ಅದರ ಅಡಿಯಲ್ಲಿ ಕನ್ನಡ ಸಾಹಿತ್ಯ ಸಂಸ್ಕೃತಿಯ ಸಂವರ್ಧನೆಯ ಯೋಜನೆಗಳು ನೆರವೇರುವಂತಾಗಲಿ ಎಂದು ತಿಳಿಸಿದ್ದರು. ಅದರಂತೆ ಕರ್ನಾಟಕದ ವಿವಿಧ ಭಾಗದ ವಿಶ್ವವಿದ್ಯಾಲಯದ ಕನ್ನಡ ವಿಭಾಗಗಳು ಕನ್ನಡ ಸಾಹಿತ್ಯ ಪರಂಪರೆ ಕುರಿತಾಗಿ ಅನೇಕ ಸಂಶೋಧನ ಯೋಜನೆಗಳನ್ನು ಕೈಗೆತ್ತಿಕೊಂಡಿರುತ್ತವೆ.

ಈ ಹಿನ್ನೆಲೆಯಲ್ಲಿ ಗುಲ್ಬರ್ಗಾ ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಸಂಸ್ಥೆಯು ವಿಭಿನ್ನ ಸಂಪುಟಗಳ ಪ್ರಕಟಣಾ ಯೋಜನೆಯನ್ನು ಹಮ್ಮಿಕೊಂಡು ಅದರಡಿಯಲ್ಲಿ **ಹಸ್ತ ಪ್ರತಿಗಳ ಸಂಗ್ರಹ ಸಂರಕ್ಷಣೆ ಹಾಗೂ ಪ್ರಕಟಣಾ ಯೋಜನೆಯಲ್ಲಿ ಹಲವಾರು ಅಪ್ರಕಟಿತ ಹಸ್ತ ಪ್ರತಿಗಳನ್ನು ಪ್ರಕಟಿಸಿದೆ.** ಕನ್ನಡ ಆಸಕ್ತರು ನಮ್ಮ ನಾಡು, ನುಡಿ, ಸಾಹಿತ್ಯ, ಸಂಸ್ಕೃತಿ, ಪರಂಪರೆ ಕುರಿತಂತೆ ಸಮಗ್ರ ಅರಿವನ್ನು ಪಡೆಯುವಂತೆ ರಚಿತವಾಗಿರುತ್ತವೆ. ಇಂಥದೊಂದು ಯೋಜನೆಯನ್ನು ಕೈಗೆತ್ತುಕೊಂಡು ಅದರ ಮೊದಲ ಹಂತದ ಕಾರ್ಯ ಮುಗಿಸಿ, ಮುಂದಿನ ಹಂತದಲ್ಲಿಯೂ ಈ ಬಗೆಯ ಇನ್ನಷ್ಟು ಗ್ರಂಥಗಳ ಪ್ರಕಟಣೆಯ ಯೋಜನೆಯನ್ನು ಕೈಗೆತ್ತಿಕೊಂಡು ಉತ್ಸಾಹದಿಂದ ಮುಂದುವರೆಸುತ್ತಿರುವ ಗುಲಬರ್ಗಾ ವಿಶ್ವವಿದ್ಯಾಲಯದ ಕುಲಪತಿ ಪ್ರೊ. ಈ.ಟಿ.ಪುಟ್ಟಯ್ಯ ಅವರನ್ನು ಮತ್ತು ಕುಲಸಚಿವ ಪ್ರೊ.ಎಸ್.ಎಲ್.ಹಿರೇಮಠ ಅವರನ್ನು ಈ ಸಂಪುಟದ ಪ್ರಧಾನ ಸಂಪಾದಕರೂ ಮತ್ತು ಕನ್ನಡ ಅಧ್ಯಯನ ಸಂಸ್ಥೆಯ ಅಧ್ಯಕ್ಷರಾದ ಡಾ. ನಾಗಾಬಾಯಿ ಬಿ. ಬುಳ್ಳಾ ಅವರನ್ನು ನಾನು ಕರ್ನಾಟಕ ಸರ್ಕಾರದ ಪರವಾಗಿ ಅಭಿನಂದಿಸುತ್ತೇನೆ.

ಬಿ. ಬಸವರಾಜು

ಕಾರ್ಯದರ್ಶಿ

ಮನು ಬಳಿಗಾರ್ ಕ.ಆ.ಸೇ
ಆಯುಕ್ತರು
ಕನ್ನಡ ಮತ್ತು ಸಂಸ್ಕೃತಿ ಇಲಾಖೆ

ಕರ್ನಾಟಕ ಸರ್ಕಾರ

ಕನ್ನಡ ಭವನ, ಜೆ.ಸಿ. ರಸ್ತೆ,
ಬೆಂಗಳೂರು- 560 001
ದಿ: 15.10.2011

ನಲ್ನುಡಿ

ಕನ್ನಡ ಸಾಹಿತ್ಯ ಮತ್ತು ಸಾಂಸ್ಕೃತಿಕ ಪರಂಪರೆಯೇ ಕುತೂಹಲಕರ ಮತ್ತು ವೈವಿಧ್ಯಮಯವಾದುದು. ಹತ್ತನೆಯ ಶತಮಾನ ಮತ್ತು ಅದರ ಪೂರ್ವಯುಗವನ್ನು 'ವೀರಯುಗ' ಎಂದು ವಿದ್ವಾಂಸರು ಕರೆದಿರುವುದಲ್ಲದೆ, ಆ ಕಾಲಕ್ಕೆ ಬಂದ ಕೃತಿಗಳೆಲ್ಲವೂ ಕ್ಷಾತ್ರಧರ್ಮ ಮತ್ತು ಅದರ ಮೌಲ್ಯಗಳನ್ನೇ ಹೇಳುವಂಥವಾಗಿರುತ್ತವೆ. ಪಂಪ ಬರೆದದ್ದು ವಿಕ್ರಮಾರ್ಜುನ ವಿಜಯವಾದರೆ ರನ್ನ ಬರೆದದ್ದು ಸಾಹಸಭೀಮ ವಿಜಯ. ಇದೆಲ್ಲಕ್ಕಿಂತ ಪೂರ್ವದಲ್ಲಿ ಕವಿರಾಜ ಮಾರ್ಗಕಾರನು ಕನ್ನಡ ನಾಡಿನ ಜನಗಳನ್ನು ಕಲಿಗಳೆಂದೂ, ಕವಿಗಳೆಂದೂ ಮುಕ್ತಕಂಠದಿಂದ ಪ್ರಶಂಸಿಸುತ್ತಾನೆ. ಕನ್ನಡ ನಾಡಿನ ಸಾಂಸ್ಕೃತಿಕ ಇತಿಹಾಸವನ್ನು ಕುರಿತು ಆರಂಭ ಕಾಲಕ್ಕೆ ಎಲ್ಲ ಕವಿಗಳು ಹೇಳುವ ಮಾತಿನಲ್ಲಿ ಆಶ್ಚರ್ಯಕರ, ಕುತೂಹಲಕರ ಹೊಂದಾಣಿಕೆ ಇದೆ. ಕವಿರಾಜ ಮಾರ್ಗಕಾರನು ಕನ್ನಡ ಜನರು ಕವಿಗಳೂ, ಕಲಿಗಳೂ ಆಗಿದ್ದರೆಂದರೆ, ಪಂಪ ತಾನೇ ಸತ್ಕವಿ, ಕಲಿ ಎಂದು ಹೇಳಿಕೊಳ್ಳುತ್ತಾನೆ. ಪಂಪ, ರನ್ನರ ಕೃತಿಗಳಲ್ಲಿ ಬರುವ ಸ್ತ್ರೀಪಾತ್ರಗಳು ಕೂಡ ಪುರುಷ ಪರಾಕ್ರಮವನ್ನು ಪುರಸ್ಕರಿಸಿ ಮಾತನಾಡುತ್ತವೆ. ಇದು ಕನ್ನಡ ನಾಡಿನ ಹತ್ತನೆಯ ಶತಮಾನ ಮತ್ತು ಅದರ ಪೂರ್ವ ವಿವರವಾದರೆ ಹನ್ನೆರಡನೆಯ ಶತಮಾನದ ಸಂಗತಿಯೇ ಬೇರೆ. ಅರಮನೆಯಲ್ಲಿ ಬೆಳೆದ ಸಾಹಿತ್ಯ ಸಾಮಾನ್ಯರ ನಡುವೆ ಬಂದು ಚಳುವಳಿಯ ರೂಪ ಪಡೆದುಕೊಂಡಿತು. ಪಾಂಡಿತ್ಯಪೂರ್ಣ ಸಾಹಿತ್ಯ ಸೃಷ್ಟಿಗಿಂತ ಜನಸಾಮಾನ್ಯರಿಗೆ ಅರ್ಥವಾಗುವ ಸಂಗತಿ ಮುಖ್ಯವೆಂಬ ಧೋರಣೆಯ ವಚನಕಾರರು ಪ್ರಭುತ್ವವನ್ನೇ ಪ್ರತಿಭಟಿಸಿ ಹೊರಬಂದದ್ದು ಆಶ್ಚರ್ಯಕರ ಬೆಳವಣಿಗೆ, ಬಸವಣ್ಣ, ಅಕ್ಕಮಹಾದೇವಿ, ಹರಿಹರ, ರಾಘವಾಂಕ ಇವರೆಲ್ಲ ಅರಸನ ವೈಭವದ ಆಸ್ಥಾನವನ್ನು ಬಿಟ್ಟು ಬಂದವರೆ. ತಮ್ಮ ಸಾಹಿತ್ಯ ಕೃತಿಗಳಲ್ಲಿ ಮಾನವೀಯತೆ, ಸರ್ವಸಮಾನತೆ, ಭಕ್ತಿ ಮತ್ತು ಅಧ್ಯಾತ್ಮವನ್ನು ಸಂಸ್ಥಾಪಿಸಿದವರು; ಅದಕ್ಕನುಗುಣವಾದ ಕಥೆ ಹಾಗೂ ಪಾತ್ರಗಳನ್ನೇ ಸೃಷ್ಟಿಸಿದರು.

ವಚನಕಾರರ ಕಾಲಕ್ಕೆ ಸಾಮಾನ್ಯ ಜನರ ನಡುವೆ ಬಂದ ಸಾಹಿತ್ಯವು

ದಾಸವರೇಣ್ಯರ ಕಾಲಕ್ಕೆ ಜನಸಮೂಹದ ಅಂತರಂಗವನ್ನು ರಾಗ, ತಾಳಗಳ ಮುಖೇನ ಕಾಂತಾಸಮ್ಮಿತ ಭಾವದ ಮೂಲಕವೇ ಮುಟ್ಟತೊಡಗಿತು. 'ವೀರನಾರಾಯಣನೇ ಕವಿ, ಲಿಪಿಕಾರ ಕುವರವ್ಯಾಸ, ಕೇಳುವ ಸೂರಿಗಳೆ ಜಂಗಮ ಜನಾರ್ಧನರು' ಎನ್ನುತ್ತಾನೆ ಕುಮಾರವ್ಯಾಸ. ಹೀಗೆ ಅರಮನೆಯಿಂದ ಜನಸಾಮಾನ್ಯರ ಕಡೆಗೆ ಪ್ರವಹಿಸಿದ ಕನ್ನಡ ಸಾಹಿತ್ಯ ಪರಂಪರೆಯೇ ವೈವಿಧ್ಯಮಯವಾದುದು. ಆಧುನಿಕ ಕನ್ನಡ ಸಂದರ್ಭದ ಕವಿ, ಕಥೆಗಾರ, ಕಾದಂಬರಿಕಾರರ ಪ್ರತಿಭಾನ್ವಿತ ಬರವಣಿಗೆಯಂತೂ ಸಮಸ್ತ ಕನ್ನಡಿಗರ ಅರಿವಿಗೆ ಬಂದಿರುವಂಥದ್ದೆ. ಹೀಗೆ ಒಂದೂವರೆ ಸಾವಿರ ವರ್ಷಗಳ ಸ್ಪಷ್ಟ ಮತ್ತು ಸಮಗ್ರ ಇತಿಹಾಸವಿರುವ ಕನ್ನಡ ಭಾಷಾ ಶ್ರೀಮಂತಿಕೆಗೆ 2009ರಲ್ಲಿ ಭಾರತ ಸರ್ಕಾರ ಶಾಸ್ತ್ರೀಯ ಸ್ಥಾನಮಾನ ನೀಡಿತು. ಈ ಸಂದರ್ಭದಲ್ಲಿ ಕರ್ನಾಟಕ ಸರ್ಕಾರವೂ ಕೂಡ ಕನ್ನಡನಾಡಿನ ಎಲ್ಲ ವಿಶ್ವವಿದ್ಯಾಲಯಗಳ ಕನ್ನಡ ವಿಭಾಗಗಳಿಗೆ ತಲಾ ಎರಡು ಕೋಟಿ ರೂಪಾಯಿಗಳ ಅನುದಾನವನ್ನು ಬಿಡುಗಡೆ ಮಾಡಿತು. ಈಗ ಎಲ್ಲ ವಿಶ್ವವಿದ್ಯಾಲಯಗಳು ಕನ್ನಡ ಸಾಹಿತ್ಯ, ಸಂಸ್ಕೃತಿ ತತ್ಸಂಬಂಧದ ಸಂಶೋಧನೆಯ ಯೋಜನೆಗಳಲ್ಲಿ ತೊಡಗಿಸಿಕೊಂಡಿವೆ. ಈ ನಿಟ್ಟಿನಲ್ಲಿ ಗುಲಬರ್ಗಾ ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಸಂಸ್ಥೆಯು ಹಲವು ಸಂಪುಟಗಳ ಪ್ರಕಟಣಾ ಯೋಜನೆಯನ್ನು ಕೈಗೆತ್ತಿಕೊಂಡು ಅದರ ಅಡಿಯಲ್ಲಿ ಅದರಡಿಯಲ್ಲಿ ಹಸ್ತಪ್ರತಿಗಳ ಸಂಗ್ರಹ, ಸಂರಕ್ಷಣೆ ಹಾಗೂ ಪ್ರಕಟನಾ ಯೋಜನೆಯಲ್ಲಿ ಹಲವಾರು ಹಸ್ತಪ್ರತಿಗಳನ್ನು ಪ್ರಕಟಿಸಿದೆ. ಈ ಯೋಜನೆಯ ಯಶಸ್ಸಿಗೆ ಕಾರಣರಾದ ಗುಲಬರ್ಗಾ ವಿಶ್ವವಿದ್ಯಾಲಯದ ಕುಲಪತಿಗಳಾದ ಪ್ರೊ ಈ.ಟಿ.ಪುಟ್ಟಯ್ಯ ಅವರಿಗೆ, ಕುಲಸಚಿವರಾದ ಪ್ರೊ ಎಸ್.ಎಲ್. ಹಿರೇಮಠ ಅವರಿಗೆ, ಕನ್ನಡ ಅಧ್ಯಯನ ಸಂಸ್ಥೆಯ ಅಧ್ಯಕ್ಷರೂ ಹಾಗೂ ಈ ಪ್ರಕಟಣಾ ಯೋಜನೆಯ ಪ್ರಧಾನ ಸಂಪಾದಕರಾದ ಡಾ. ನಾಗಾಬಾಯಿ ಬಿ. ಬುಳ್ಳಾಅವರಿಗೆ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಪರವಾಗಿ ನಾನು ಹೃತ್ಪೂರ್ವಾಕವಾಗಿ ಅಭಿನಂದನೆಗಳನ್ನು ಸಲ್ಲಿಸುತ್ತೇನೆ.

ಮನು ಬಳಿಗಾರ್

ಆಯುಕ್ತರು

ಪ್ರೊ. ಈ.ಟಿ. ಪುಟ್ಟಯ್ಯ
ಕುಲಪತಿಗಳು

ಕಾರ್ಯಸೌಧ
ಗುಲಬರ್ಗಾ ವಿಶ್ವವಿದ್ಯಾಲಯ,
ಗುಲಬರ್ಗಾ
ದಿ: 25.10.2011

ಕುಲಪತಿಗಳ ನುಡಿ

ಗುಲಬರ್ಗಾ ವಿಶ್ವವಿದ್ಯಾಲಯವು ಹೈದ್ರಾಬಾದ ಕರ್ನಾಟಕ ಪ್ರದೇಶದ ಹೆಮ್ಮೆಯ ವಿದ್ಯಾಸಂಸ್ಥೆಯಾಗಿದೆ. 1970–71ರಲ್ಲಿ ಇದು ಕರ್ನಾಟಕ ವಿಶ್ವವಿದ್ಯಾಲಯದ ಒಂದು ಸ್ನಾತಕೋತ್ತರ ಕೇಂದ್ರವಾಗಿ, ಮುಂದೆ 1980ರಲ್ಲಿ ಸ್ವತಂತ್ರ ವಿಶ್ವವಿದ್ಯಾಲಯವಾಗಿ ಮಾರ್ಪಟ್ಟಿತು. ಕಳೆದ ಮೂವತ್ತು ವರ್ಷಗಳಿಂದ ಈ ವಿಶ್ವವಿದ್ಯಾಲಯವು ಬೋಧನೆ, ಸಂಶೋಧನೆ ಹಾಗೂ ಪ್ರಕಟನೆಗಳ ಮೂಲಕ ಜನಮನ್ನಣೆಯನ್ನು ಗಳಿಸಿದೆ. ಈ ವಿಶ್ವವಿದ್ಯಾಲಯದ ಬೌದ್ಧಿಕ ಆಸ್ತಿ ಬೋಧನೆ ಮತ್ತು ಸಂಶೋಧನೆ. ಇವು ಸಾಕಾರಗೊಳ್ಳುವುದು ಪ್ರಕಟನೆಗಳ ಮೂಲಕವೇ. ಗುಲಬರ್ಗಾ ವಿಶ್ವವಿದ್ಯಾಲಯದ ಪ್ರಸಾರಾಂಗವು ಅನೇಕ ಮೌಲಿಕವಾದ ಪ್ರಕಟಣೆಗಳನ್ನು ಪ್ರಕಟಿಸಿದೆ. ಕನ್ನಡ ಅಧ್ಯಯನ ಸಂಸ್ಥೆಯ ಪ್ರಾಧ್ಯಾಪಕರುಗಳು ಇದುವರೆಗೆ ನಾಲ್ಕು ನೂರಕ್ಕೂ ಹೆಚ್ಚು ಪುಸ್ತಕಗಳನ್ನು ಪ್ರಕಟಿಸಿದುದು ತುಂಬ ಹೆಮ್ಮೆಯ ಸಂಗತಿಯಾಗಿದೆ. ಕನ್ನಡ ಅಧ್ಯಯನ ಸಂಸ್ಥೆಯ ಸಂಶೋಧನ ವಿದ್ಯಾರ್ಥಿಗಳು ಬರೆದ ಸಂಶೋಧನ ಲೇಖನಗಳ ಸಂಕಲನ 'ಜ್ಞಾನ ಗಂಗಾ' ಸಂಚಿಕೆಗಳಂತೂ ತುಂಬ ಜನಪ್ರಿಯವಾಗಿವೆ. ಒಟ್ಟಿನಲ್ಲಿ ಕನ್ನಡ ಅಧ್ಯಯನ ಸಂಸ್ಥೆಯು ತನ್ನ ಅಪೂರ್ವ ಪ್ರಕಟನೆಗಳ ಮೂಲಕ ಜನಮೆಚ್ಚುಗೆಯನ್ನು ಪಡೆದಿದೆ.

ಕರ್ನಾಟಕ ಸರ್ಕಾರವು ಸುವರ್ಣ ಮಹೋತ್ಸವದ ಸಂದರ್ಭದಲ್ಲಿ ಕನ್ನಡ ಭಾಷೆ, ಸಂಸ್ಕೃತಿ ಮತ್ತು ಸಾಹಿತ್ಯಕ್ಕೆ ಸಂಬಂಧಿಸಿದಂತೆ ಉನ್ನತ ಸಂಶೋಧನೆ ನಡೆಸಲೆಂಬ ಧ್ಯೇಯವನ್ನಿರಿಸಿಕೊಂಡು ನಮ್ಮ ವಿಶ್ವವಿದ್ಯಾಲಯಕ್ಕೆ ವಿಶೇಷ ಅನುದಾನವನ್ನು ನೀಡಿದೆ. ಕನ್ನಡ ಭಾಷಾಭಿವೃದ್ಧಿ ಯೋಜನೆಯಡಿ ಕರ್ನಾಟಕ ಸರ್ಕಾರದ ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯವು ನೀಡಿದ ಅನುದಾನ ಪಡೆದು ನಮ್ಮ ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಸಂಸ್ಥೆಯ ಪ್ರಾಧ್ಯಾಪಕರು ಬಸವಾದಿ ಶರಣರ ಸ್ಮಾರಕಗಳು, ತತ್ವಪದಕಾರರ ಸ್ಮಾರಕಗಳು, ಕೀರ್ತನಕಾರರ ಸ್ಮಾರಕಗಳು, ಹೈದ್ರಾಬಾದ ಕರ್ನಾಟಕ ಸಾಂಸ್ಕೃತಿಕ ವಿಷಯಕೋಶ, ಹೈದ್ರಾಬಾದ ಕರ್ನಾಟಕದ ಸಾಹಿತ್ಯ ಚರಿತ್ರೆ, ಆಧುನಿಕ ನಾಟಕಗಳು, ಹಸ್ತಪ್ರತಿಗಳ ಸಂರಕ್ಷಣೆ ಹಾಗೂ ಪ್ರಕಟನೆ, ಶರಣಸಾಹಿತ್ಯ ವಿಮರ್ಶಾ ಸಂಪುಟಗಳ ಪ್ರಕಟನೆ ಈ ಮುಂತಾದ

ಮಹತ್ವದ ಸಂಶೋಧನಾ ಯೋಜನೆಗಳನ್ನು ಕೈಗೆತ್ತಿಕೊಂಡು ಅಧ್ಯಯನ ನಡೆಸುತ್ತಿರುವರು. ಇವುಗಳಲ್ಲಿ ಹಸ್ತ ಪ್ರತಿಗಳ ಸಂಗ್ರಹ, ಸಂರಕ್ಷಣೆ ಹಾಗೂ ಪ್ರಕಟನಾ ಯೋಜನೆಯೂ ಒಂದಾಗಿದೆ. ಈ ಯೋಜನೆಯಲ್ಲಿ ಹಲವಾರು ಮಹತ್ವದ ಅಪ್ರಕಟಿತ ಹಸ್ತ ಪ್ರತಿಗಳನ್ನು ಪ್ರಕಟಿಸಿದ್ದಾರೆ. ಹಸ್ತಪ್ರತಿಗಳನ್ನು ಸಂಪಾದನೆ ಮಾಡಿ ಕೊಟ್ಟಿರುವ ಸಂಪಾದಕರಿಗೂ ಈ ಸಂಪುಟದ ಪ್ರಧಾನ ಸಂಪಾದಕರೂ ಹಾಗೂ ಕನ್ನಡ ಅಧ್ಯಯನ ಸಂಸ್ಥೆಯ ಅಧ್ಯಕ್ಷರಾದ ಡಾ. ನಾಗಾಬಾಯಿ ಬಿ. ಬುಳ್ಳಾ ಅವರಿಗೂ, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಕಾರ್ಯದರ್ಶಿಗಳಾದ ಶ್ರೀ. ಬಿ.ಬಸವರಾಜು ಅವರಿಗೂ, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಆಯುಕ್ತರಾದ ಶ್ರೀ ಮನು ಬಳಿಗಾರ ಅವರಿಗೂ ಅಲ್ಲದೆ ಇತರ ಅಧಿಕಾರಿ ವರ್ಗದವರಿಗೂ ವಿಶೇಷ ಕೃತಜ್ಞತೆಗಳು ಸಲ್ಲುತ್ತವೆ.

ಪ್ರೊ. ಈ.ಟಿ. ಪುಟ್ಟಯ್ಯ
ಕುಲಪತಿಗಳು

ಪ್ರಧಾನ ಸಂಪಾದಕರ ನುಡಿ

ಹಸ್ತ ಪ್ರತಿಗಳು ನಮ್ಮ ನಾಡಿನ ಅಮೂಲ್ಯ ಆಸ್ತಿಗಳಾಗಿವೆ. ಪ್ರಾಚೀನ ಕಾಲದಲ್ಲಿ ತಾಳೆಗರಿಗಳ ಮೇಲೆ, ಬೂರ್ಜ್ವಪತ್ರಗಳ ಮೇಲೆ ಬರೆಯುತ್ತಿದ್ದರು. ನಂತರದ ಅವಧಿಯಲ್ಲಿ ಕೋರಿ ಕಾಗದಗಳಲ್ಲಿ ಬರೆಯತೊಡಗಿದರು. ಹತ್ತನೆಯ ಶತಮಾನದ ಹಳಗನ್ನಡ ಕಾವ್ಯಗಳಿಂದ ಹಿಡಿದು ನಡುಗನ್ನಡದ ವಚನ ಸಾಹಿತ್ಯ, ದಾಸರಕೀರ್ತನೆಗಳು, ತತ್ವಪದಗಳು, ವ್ಯಾಕರಣ ಗ್ರಂಥಗಳು, ಜ್ಯೋತಿಷ್ಯ, ವೈದ್ಯಶಾಸ್ತ್ರ ಹಾಗೂ ಅನೇಕ ಧಾರ್ಮಿಕ ಗ್ರಂಥಗಳು ಹಸ್ತಪ್ರತಿಗಳಲ್ಲಿ ಇವತ್ತಿಗೂ ದೊರಕುತ್ತಿವೆ. ಆದರೆ ನಮ್ಮ ಅಲಕ್ಷ, ಅಜ್ಞಾನ ಹಾಗೂ ಮೂಢನಂಬಿಕೆಗಳಿಂದಾಗಿ ಹಲವಾರು ಮಠಗಳಲ್ಲಿ, ಮನೆಗಳಲ್ಲಿ ಪೂಜೆಗೊಳ್ಳುತ್ತ ದಯನೀಯ ಸ್ಥಿತಿಯಲ್ಲಿವೆ. ಕೆಲವೆಡೆ ನೈಸರ್ಗಿಕ ವಿಪತ್ತುಗಳಿಂದಲೂ ಹಸ್ತಪ್ರತಿಗಳು ನಶಿಸಿ ಹೋಗುತ್ತಿವೆ. ಇವುಗಳ ಸಂಗ್ರಹ ಸಂರಕ್ಷಣೆ ಹಾಗೂ ಅಪ್ರಕಟಿತ ಗ್ರಂಥಗಳ ಪ್ರಕಟಣೆ ಮಾಡುವ ಅವಶ್ಯಕತೆಯಿದೆ. ಕಲ್ಯಾಣ ಕರ್ನಾಟಕದ ಜಿಲ್ಲೆಗಳಲ್ಲಿ ಇದುವರೆಗೆ ದೊರೆತಿರುವ ೬೦೦೦ ಹಸ್ತಪ್ರತಿಗಳನ್ನು ಗುಲಬರ್ಗಾ ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಸಂಸ್ಥೆಯಲ್ಲಿ ಸಂರಕ್ಷಿಸಿ ಇಡಲಾಗಿದೆ. ಈ ಪ್ರದೇಶದ ಸಾಹಿತ್ಯ ಹಾಗೂ ಸಂಸ್ಕೃತಿಯನ್ನು ಬಿಂಬಿಸುತ್ತಿರುವ ಈ ಹಸ್ತಪ್ರತಿಗಳ ಅಧ್ಯಯನ ಮಾಡಿ ಪ್ರಕಟಿಸುವ ಕಾರ್ಯ ಅತ್ಯಂತ ತ್ವರಿತಗತಿಯಲ್ಲಿ ನಡೆಯಬೇಕಾಗಿದೆ.

ಈ ಹಿನ್ನಲೆಯಲ್ಲಿ ಕನ್ನಡ ಭಾಷೆಗೆ ಶಾಸ್ತ್ರೀಯ ಭಾಷೆಯ ಸ್ಥಾನಮಾನ ಲಭಿಸಿದ ಶುಭ ಸಂದರ್ಭದಲ್ಲಿ ಕರ್ನಾಟಕ ಸರ್ಕಾರವು ಕನ್ನಡ ಭಾಷಾ ಅಭಿವೃದ್ಧಿ ಅನುದಾನದ ಅಡಿಯಲ್ಲಿ ಗುಲಬರ್ಗಾ ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಸಂಸ್ಥೆಯು ಹಮ್ಮಿಕೊಂಡ ಹಲವು ಸಂಶೋಧನ ಯೋಜನೆಗಳಲ್ಲಿ **"ಹಸ್ತಪ್ರತಿ ಸಂಗ್ರಹ ಸಂಪಾದನೆ ಹಾಗೂ ಪ್ರಕಟಣಾ ಯೋಜನೆ ಭಾಗ-೧"** ಕೂಡ ಒಂದು. ಈ ಯೋಜನೆಯಲ್ಲಿ ಗಾಜೇಶಲಿಂಗನಲೀಲೆ, ಭೋಗೇಶ್ವರ ಪುರಾಣ, ಮಹಾಂತೇಶ್ವರ ಪುರಾಣ, ವೀರಸೇನನ ಚಾರಿತ್ರ್ಯ, ಕುಸನೂರ ಸಿದ್ಧೇಶ್ವರ ಪುರಾಣ, ಸಾಂಗತ್ಯ ಸಂಪುಟ -೧, ಶತಕ ಸಂಪುಟ, ಹಾಗೂ ಹಸ್ತಪ್ರತಿಗಳಲ್ಲಿ ಚಿತ್ರಕಲೆ'ಗಳ ಮುದ್ರಣ ಕಾರ್ಯವನ್ನು

ಪ್ರಥಮ ಹಂತದಲ್ಲಿ ಕೈಗೆತ್ತಿಕೊಳ್ಳಲಾಗಿದೆ. ಈಗಾಗಲೇ ಕನ್ನಡ ಅಧ್ಯಯನ ಸಂಸ್ಥೆಯಲ್ಲಿ ೧೯೯೪ರಲ್ಲಿ ಹಸ್ತಪ್ರತಿ ಸಂಗ್ರಹ ಕಾರ್ಯವು ಪತ್ರಾಗಾರ ಇಲಾಖೆಯಿಂದ ನಡೆದಿತ್ತು, ಆ ಹಸ್ತಪ್ರತಿ ಸಂಗ್ರಹದೊಳಗಿನ ಒಂದೆರಡು ಹಸ್ತಪ್ರತಿಗಳನ್ನು ಹಾಗೂ ಬೇರೆ ಬೇರೆ ಕಡೆಗಳಿಂದ ಕೆಲವು ಹಸ್ತ ಪ್ರತಿಗಳನ್ನು ಸಂಗ್ರಹಿಸಿ ಸಂಪಾದನಾ ಕಾರ್ಯವನ್ನು ವಹಿಸಿಕೊಟ್ಟು ಅಪ್ರಕಟಿತ ಪುಸ್ತಕಗಳನ್ನು ಪ್ರಕಟಿಸಲು ಸಿದ್ಧತೆ ಮಾಡಿಕೊಳ್ಳಲಾಗಿದೆ.

ಪ್ರಸ್ತುತ ಕೃತಿ "ಮಹಾಂತೇಶ್ವರ ಪುರಾಣ"ವನ್ನು ಡಾ. ಶಾಂತಪ್ಪ ಡಂಬಳ ಹಾಗೂ ಪ್ರೊ ಮಲ್ಲಪ್ಪ ಮಾನೆಗರ ಅವರು ಸಂಪಾದಿಸಿ ಕೊಟ್ಟಿದ್ದಾರೆ ರಸ್ತಾಪುರ ಭೀಮಕವಿ ವಿರಚಿತ ಡೋರನಹಳ್ಳಿ ಮಹಾಂತೇಶ್ವರ ಪುರಾಣವು ಒಂಭತ್ತು ಸಂಧಿಗಳಿಂದ ಕೂಡಿದೆ. ಕೃತಿಯ ಪ್ರಸ್ತಾವನೆಯಲ್ಲಿ ಕವಿ ಕಾವ್ಯ ವಿಚಾರಗಳನ್ನು ಹಾಗೂ ಎಲ್ಲ ಸಂಧಿಗಳ ಕಥಾಸಾರಾಂಶವನ್ನು ವಿವರವಾಗಿ ಸಂಪಾದಕರು ನೀಡಿದ್ದಾರೆ. ಹಸ್ತಪ್ರತಿ ಯೋಜನೆಯವತಿಯಿಂದ ಸಂಪಾದಕರಿಗೆ ಹೃತ್ಪೂರ್ವಕ ಕೃತಜ್ಞತೆಗಳನ್ನು ಅರ್ಪಿಸುವೆನು. ಈ ಹಸ್ತಪ್ರತಿಯನ್ನು ಪರಿಶೀಲಿಸಿದ ಪ್ರೊ ಶಾಂತಿನಾಥ ದಿಬ್ಬದ ಅವರಿಗೂ, ಈ ಯೋಜನೆಯು ರೂಪುಗೊಳ್ಳುವಲ್ಲಿ ಸೂಕ್ತ ಮಾರ್ಗದರ್ಶನ ಮಾಡಿದ ನಮ್ಮ ವಿಶ್ವವಿದ್ಯಾಲಯದ ಕುಲಪತಿಗಳಾದ ಪ್ರೊ ಈ.ಟಿ. ಪುಟ್ಟಯ್ಯನವರಿಗೂ ಕುಲಸಚಿವರಾದ ಪ್ರೊ. ಎಸ್. ಎಲ್. ಹಿರೇಮಠಅವರಿಗೂ ಹಾಗೂ ಅಧಿಕಾರಿಗಳಿಗೂ ಕೃತಜ್ಞಳಾಗಿರುವೆನು.

ಈ ಕೃತಿಯ ಅಕ್ಷರ ಸಂಯೋಜನೆ ಹಾಗೂ ಮುದ್ರಣವನ್ನು ಸುಂದರವಾಗಿ ಮಾಡಿರುವ ಬೆಂಗಳೂರಿನ ಮೆ॥ ಪ್ರಿಂಟ್ ಪಾರ್ಕ್ ಮಾಲೀಕರಾದ ಶ್ರೀ ಜಿ.ಬಿ. ಪಾಟೀಲ್ ಇವರಿಗೆ ಕೃತಜ್ಞತೆಗಳು.

ಡಾ. ನಾಗಾಬಾಯಿ ಬಿ.ಬುಳ್ಳಾ

ಪ್ರಧಾನ ಸಂಪಾದಕರು

ಪ್ರಸ್ತಾವನೆ

ಕವಿಯ ಪರಿಚಯ :

ಕನ್ನಡ ನಾಡಿನ ಕಾವ್ಯಾರಾಮದಲ್ಲಿ ಎಲೆಮರೆಯ ಕಾಯಿಯಂತೆ ಇದ್ದು ಕರ್ನಾಟಕ ಕವಿವನದೊಳು ಪೊಕ್ಕು ಮೆಲ್ಲ ಮೆಲ್ಲನೆ ದಾರಿ ಸಾಗುತ್ತಾ ಷಡಕ್ಷರಿ ಮಂತ್ರದೊಂದಿಗೆ ವೀರಶೈವ ತತ್ವಗಳನ್ನು ಜನಸಾಮಾನ್ಯರಿಗೆ ಮುಟ್ಟಿಸುತ್ತಾ ಸಾಗಿದ ಪಂಡಿತ ಮಹನೀಯರಲೊಬ್ಬನು ರಸ್ತಾಪುರ ಭೀಮಕವಿ. ಕನ್ನಡ ಸಾರಸ್ವತ ಲೋಕದ ಕನ್ನಡಾಂಬೆಯ ದೇವಸ್ಥಾನದ ದ್ವಾರ ಬಾಗಿಲಲ್ಲಿಯೇ ನಿಂತು ಬಯಲಾಟದ ಸೇವೆಯನ್ನು ಮಾಡುತ್ತ ಕೇವಲ ಸೂತ್ರದಾರ ಅಥವಾ ಸಾರಥಿಯಾಗಿರದೆ, ಆ ಕನ್ನಡಾಂಬೆಯ ಸಾನಿಧ್ಯವನ್ನು ಸೇರಿದ ಶುದ್ಧೋಪಾಸಕ. ಇವರು ಯಾದಗಿರಿ ಜಿಲ್ಲೆಯ ಶಹಾಪುರ ತಾಲೂಕಿನ ರಸ್ತಾಪೂರದವರು ತಂದೆ ಜಂಬಣ್ಣ ತಾಯಿ ಭೀಮವ್ವ, ಇವರ ಜನನ ಕ್ರಿ.ಶ.ಸು. ೧೮೭೭. ಇವರ ಮೊದಲ ಹೆಸರು ಭೀಮಶ್ಯಾ ತದನಂತರ ಭೀಮಶ್ಯಾ ಮಾಸ್ತರ, ಭೀಮನಾಯಕ, ಭೀಮಾಖ್ಯ, ಭೀಮಕವಿ ಎಂಬ ಹೆಸರುಗಳು ಬಂದಿವೆ.

ಅಂದು ಹೈದ್ರಾಬಾದ್ ನಿಜಾಂಶಾಹಿಗಳ ಕಾಲದಲ್ಲಿ ಕನ್ನಡ ಶಾಲೆಗಳೇ ಇಲ್ಲದಂತಹ ಪರಿಸ್ಥಿತಿಯಲ್ಲಿ ರಸ್ತಾಪುರದ ಅಯ್ಯನವರು ಸ್ಥಾಪಿಸಿದ ಪಾಠಶಾಲೆಯಲ್ಲಿ ಭೀಮ ಕವಿಗಳ ಅಕ್ಷರಾಭ್ಯಾಸ. ಈ ಪಾಠ ಶಾಲೆ ನಿಜಾಂಶಾಹಿಗಳ ಕಣ್ಣಿಗೆ ಬಿದ್ದು ಮುಚಲ್ಪಟ್ಟಿತು. ಆದರೆ ಭೀಮಕವಿ ಲಖನಾಪುರದ ಹನುಮಂತರೆಡ್ಡಿ ಗೌಡರ ಹತ್ತಿರ ಅಭ್ಯಾಸ ಪ್ರಾರಂಭಿಸಿದರು. ಮುಂದೆ ಇವರೇ ವಿದ್ಯಾಗುರುಗಳಾದರು. ಭೀಮಕವಿಯಲ್ಲಿ ಅಡಗಿದ್ದ ಸುಪ್ತ ಪ್ರತಿಭೆಯನ್ನು ಗಮನಿಸಿದ ಹನುಮಂತರೆಡ್ಡಿಗೌಡರು ಬಾಲಕನನ್ನು ಸರಿಯಾದ ದಾರಿಯಲ್ಲಿ ಮುನ್ನಡೆಸಿದರೆ ಉನ್ನತ ಸ್ಥಾನಕ್ಕೆ ಬರಬಹುದೆಂದು ಅರಿತರು. ಅದಕ್ಕೆ ತಕ್ಕ ಸಂಸ್ಕಾರವನ್ನು ನೀಡಿದರು. ಒಳ್ಳೆಯ ಸಾಹಿತ್ಯಿಕ ಮತ್ತು ಸಾಮಾಜಿಕ ಸುಸಂಸ್ಕøತ ಪರಿಸರದಲ್ಲಿ ಬೆಳೆಸತೊಡಗಿದರು. ಹಳ್ಳಿಯ ಸುಸಂಸ್ಕೃತವಾದ ಜನ ಜೀವನದ ಮಧ್ಯೆ ಓಡಾಡುವುದರಿಂದ ಆ ಸುಂಸ್ಕೃತ ವಾತಾವರಣ ಇವರ ಮೇಲೆ ಗಾಢವಾದ ಪ್ರಭಾವ ಬೀರಿರುವುದರಲ್ಲಿ ಸಂಶಯವಿಲ್ಲ. ದೇವಸ್ಥಾನಗಳಲ್ಲಿ, ಗುಡಿಗುಂಡಾರಗಳಲ್ಲಿ, ಚಾವಡಿಗಳಲ್ಲಿ ಕಾಲಕಾಲಕ್ಕೆ ನಡೆಯುವ

ಪುರಾಣ ಪುಣ್ಯಕಥೆಗಳು, ಪುರಾಣ ಪುಣ್ಯ ಪುರುಷರ ಕಥಾನಕಗಳನ್ನು ಆಡಿ ತೋರಿಸುವ ಬಯಲಾಟಗಳು, ಹಳ್ಳಿಯ ಜೀವನದಲ್ಲಿ ನಡೆಯುತ್ತಿರುವ ಸಾಂಸ್ಕೃತಿಕ ಮೇಳಗಳು ಕೂಡಾ ವಿಶೇಷವಾದ ಪರಿಣಾಮವನ್ನುಂಟು ಮಾಡಿರಬೇಕು. ಇಂತಹ ಸಾಂಸ್ಕೃತಿಕ ಪರಿಸರದಲ್ಲಿ ಬೆಳೆದ ಭೀಮಕವಿಗಳಿಗೆ ಗುರು ತೋರಿದ ದಾರಿ ಸುಗಮವಾಗಿ ಕಾಣತೊಡಗಿತು. ಮಹಾಭಾರತ, ರಾಮಾಯಣ ಜೈಮಿನಿ ಭಾರತ ವೇದ ಉಪನಿಷತ್ತುಗಳ ಕಡೆಗೆ ಗಮನಹರಿಸುತ್ತ ಮನವೊಲಿಸಿ ಶಿಷ್ಯನನ್ನು ಅಧ್ಯಯನದಲ್ಲಿ ತೊಡಗಿಸಿದರು. ಮಹಾಭಾರತ, ರಾಮಾಯಣದ ಒಂದೊಂದೇ ಸನ್ನಿವೇಶಗಳನ್ನು ತೆಗೆದುಕೊಂಡು ನಾಟಕ-ಬಯಲಾಟಗಳನ್ನು ರಚಿಸುವಂತೆ ಹೇಳುತ್ತಾ ತಿದ್ದುತ್ತಾ ಪ್ರೋತ್ಸಾಹಿಸಿದುದರ ಫಲವಾಗಿಯೇ ೨೦ಕ್ಕೂ ಹೆಚ್ಚು ಬಯಲಾಟ ಹಾಗೂ ಹತ್ತು ನಾಟಕಗಳು ರಚನೆಗೊಂಡಿವೆ. ಕರಿಬಂಟ ಕಮಲಾಕ್ಷಿ ಎಂಬ ಬಯಲಾಟ ಮತ್ತು ರಾಮರಾಜ್ಯ ವಿಯೋಗ ಎಂಬ ನಾಟಕ ಮಾತ್ರ ಲಭಿಸಿವೆ.

ಪಂಡಿತ ಪ್ರಿಯವಾದ ಶಬ್ದಾಲಂಕಾರ, ಪ್ರಾಸ ಚಮತ್ಕಾರ ಕಾವ್ಯಮಯವಾದ ಪ್ರೌಢ ಬಂಧಗಳಿಂದ ಪ್ರಾಚೀನ ಸಮುದಾಯದಲ್ಲಿ ಮಾತ್ರ ದೊರೆಯಬಹುದಾದ ಅಪೂರ್ವವಾದ ಶಬ್ದ ಪುಂಜಗಳನ್ನು ಬಳಸಿ ಹಲವಾರು ಮಹತ್ತರವಾದ ಕೃತಿ ರತ್ನಗಳನ್ನು ಹೊರತಂದಿದ್ದಾರೆ.

ಕೃತಿಗಳು :

ಪುರಾಣ : ೧) ಹಾಲ್ಮತೋತ್ತೇಜಕ ಪುರಾಣ (ಪ್ರಕಟಿತ)

೨) ರಸ್ತಾಪುರ ಶರಭಲಿಂಗೇಶ್ವರ ಪುರಾಣ (ಪ್ರಕಟಿತ)

೩) ಡೋರನಹಳ್ಳಿ ಮಹಾಂತೇಶ್ವರ ಪುರಾಣ (ಅಪ್ರಕಟಿತ)

೪) ಶಹಾಪುರ ಚರಬಸವೇಶ್ವರ ಪುರಾಣ (ಅಪ್ರಕಟಿತ)

೫) ಮೈಲಾರಲಿಂಗೇಶ್ವರ ಪುರಾಣ (ಉಪಲಬ್ದವಿಲ್ಲ)

ನಾಟಕಗಳು :

ಕಾಳಿದಾಸವ್ಯಾಖ್ಯಾನ, ನಳಚರಿತೆ, ಲವಕುಶರ ಕಾಳಗ, ಸಿದ್ಧರಾಮಚರಿತೆ, ಸತ್ಯಶೀಲ ಕಲ್ಪಿತ ಕಥಾ, ರಾಮರಾಜ್ಯವಿಯೋಗ, ಬೊಂಬಾಯಿ ವ್ಯಾಪಾರ ಚಲತಿದುನಿಯಾ.

ಆಧ್ಯಾತ್ಮಿಕ ಕೃತಿ : ಶಂಕರ ಕೈವಲ್ಯ ಕಲ್ಪಧ್ರುಮ

ಇವು ಅಲ್ಲದೆ ಬೀರೇಶ್ವರ ಸುಪ್ರಭಾತ, ಚರಬಸವೇಶ್ವರ ಅಷ್ಟೋತ್ತರ ಶತನಾಮಾವಳಿ, ಸುರಪುರ ರಾಣಿ ರಂಗಮ್ಮನವರ ಕುರಿತು ಚೌಪದಿಗಳನ್ನು ರಚಿಸಿರುವರು.

ರಸ್ತಾಪುರದ ಶರಭಲಿಂಗೇಶ್ವರ ಮಠದ ಅಯ್ಯನವರು ಹಾಗೂ ಲಖನಾಪುರದ ಹನುಮಂತರೆಡ್ಡಿ ಗೌಡರು ವಿದ್ಯಾಗುರುಗಳಾದರೆ, ರಸ್ತಾಪುರದ ಶರಭಲಿಂಗೇಶ್ವರ ಹಾಗೂ ಪೋಲ್ಚಿಂತಿ ಶಂಕರಗುರುಗಳು ಆಧ್ಯಾತ್ಮ ಗುರುಗಳು.

ಭೀಮಕವಿಗಳ ಸಾಂಸಾರಿಕ ವಿಷಯ ಕುರಿತು ಹೇಳಬೇಕೆಂದರೆ ಇವರಿಗೆ ಮೂವರು ಹೆಂಡತಿಯರು ಮೊದಲನೆಯವಳು ಕೃಷ್ಣಮ್ಮ, ಎರಡನೆಯವಳು ಚಂದಮ್ಮ, ಮೂರನೆಯವಳು ಚನ್ನಮ್ಮ. ಕೃಷ್ಣಮ್ಮಳಿಗೆ ಎರಡು ಮಕ್ಕಳು ಜನಿಸಿದವು. ದುರ್ದೈವದಿಂದ ಬದುಕಲಿಲ್ಲ. ಭೀಮಕವಿ ವಂಶೋದ್ಧಾರಕ ಮಕ್ಕಳನ್ನು ಪಡೆಯಲಿಲ್ಲ ಮಾನಸ ಪುತ್ರರನೇಕರನ್ನು ಪಡೆದಿದ್ದಾರೆ. ಭೀಮಕವಿಯ ವಾರಸುದಾರನಾಗಿ ಖಂಡಪ್ಪಗೌಡರಿದ್ದಾರೆ.

ರಸ್ತಾಪುರ ಭೀಮಕವಿಗಳು ಕನ್ನಡ ಶಾಲೆಗಳನ್ನು ಪ್ರಾರಂಭಿಸಿ ಶಾಲಾ ಶಿಕ್ಷಕರಾಗಿಯೂ ಸೇವೆ ಸಲ್ಲಿಸಿದ್ದಾರೆ. ಶಹಾಪೂರ ತಾಲೂಕಿನ ಐಕೂರಿನಲ್ಲಿ ಕನ್ನಡ ಶಾಲೆಯನ್ನು ಪ್ರಾರಂಭಿಸಿ ಶಿಕ್ಷಕರಾಗಿ ಸೇವೆ ಸಲ್ಲಿಸುವಾಗ ಒಮ್ಮೆ ಸುರಪುರ ದೊರೆಗಳಾದ ರಾಣಿ ರಂಗಮ್ಮ ಮತ್ತು ಕೃಷ್ಣಪ್ಪ ನಾಯಕರು ಆಗಮಿಸುತ್ತಿರುವುದನ್ನು ತಿಳಿದು 'ಶ್ರೀಮಂತ ವರರಾಣಿ ರಂಗಮ್ಮನವರು' ಎಂಬ ಪದ್ಯವನ್ನು ರಚಿಸಿ ಅಲ್ಲಿನ ಶಾಲಾ ಬಾಲಕರಿಂದ ಸುಶ್ರಾವ್ಯವಾಗಿ ಹಾಡಿಸಿದರು. ರಸ್ತಾಪುರದಲ್ಲಿ ಕನ್ನಡ ಪಾಠಶಾಲೆಯನ್ನು ಶರಭಲಿಂಗೇಶ್ವರ ಮಠದಲ್ಲಿಯೇ ಪ್ರಾರಂಭಿಸಿ ಶಿಕ್ಷಕರಾಗಿ ಸೇವೆ ಸಲ್ಲಿಸಿರುವರು. ಕಲಾನಿಪುಣ, ಪ್ರಸಿದ್ಧ ಪಾತ್ರದಾರಿ ಜನಪ್ರಿಯ ನಾಟಕಕಾರ, ಪುರಾಣಕಾರ ಹಾಗೂ ಆದರ್ಶ ಶಿಕ್ಷಕನಾದ ಭೀಮಶ್ಯಾ ಮಾಸ್ತರರಿಗೆ ಸುರಪುರ ದೊರೆಗಳಿಂದ 'ಭೀಮಕವಿ' ಎಂಬ ಬಿರುದು ಲಭಿಸಿದೆ. ಇವರ ವಾಕ್ಚಾತುರ್ಯ ಮತ್ತು ವಿದ್ವತ್ತನ್ನು ಗಮನಿಸಿದ ಬಿ.ಎಂ.ಶ್ರೀ ಗಳು "ಅಭಿನವ ಕಾಳಿದಾಸ" ಎಂಬ ಬಿರುದನ್ನು ನೀಡಿ ಗೌರವಿಸಿರುವರು.

ಭೀಮಕವಿ ಪುರಾಣಕಾರನಾಗಿ, ನಾಟಕಕಾರನಾಗಿ, ಬಯಲಾಟ ಮಾಸ್ತರನಾಗಿ ಶಿಕ್ಷಕ ಸಹಜವಾದ ಬುದ್ಧಿಯೊಂದಿಗೆ ಕವಿ ಸಹಜವಾದ ಹೃದಯವನ್ನು ಮೇಳವಿಸಿಕೊಂಡು ಸಾಹಿತ್ಯಾಕಾಶದಲ್ಲಿ ಜನಪದ ಮತ್ತು ಶಿಷ್ಟ ಸಾಹಿತ್ಯಕ್ಕೆ ಅಮೋಘವಾದ ಕೊಡುಗೆಗಳನ್ನು ನೀಡಿರುವುದು ಅವರ ವ್ಯಕ್ತಿತ್ವಕ್ಕೆ ಹಿಡಿದ

ಕನ್ನಡಿಯಾಗಿದೆ. ಆಶುಕವಿ, ವರಕವಿ, ಅಭಿನವ ಕಾಳಿದಾಸ, ಕರ್ನಾಟಕ ಕವಿಭೂಷಣ, ಕರ್ನಾಟಕ ಕವಿಚಂದ್ರ, ಷಟ್ಚರಣಕವಿ ಎಂಬ ಬಿರುದುಗಳ ಖ್ಯಾತಿಯನ್ನು ಹೊತ್ತು ಪುರಾಣ ಪುಣ್ಯಕಥೆಗಳನ್ನು ಪಾರಮಾರ್ಥಿಕ ನೆಲೆಗಟ್ಟಿನಲ್ಲಿಟ್ಟುಕೊಂಡು ಪಂಡಿತ ಪಾಮರರ ಹೃದಯದಲ್ಲಿ ಸ್ಥಾನಗಳಿಸಿರುವ ಅಪ್ರತಿಮ ಪ್ರತಿಭಾವಂತ ಈ ಭೀಮಕವಿ. ಇವರು ಕ್ರಿ.ಶ.ಸು. ೧೯೪೪ ರಲ್ಲಿ ಕನ್ನಡ ಸಾಹಿತ್ಯ ಲೋಕದಿಂದ ಮರೆಯಾದರು.

ಕೃತಿ ಪರಿಚಯ :

ಸಗರನಾಡಿನ ಷಟ್ಚರಣ ಕವಿ ಎಂಬ ಖ್ಯಾತಿಯನ್ನು ಹೊಂದಿದವರು ರಸ್ತಾಪುರ ಭೀಮಕವಿ. ಇವರು ಷಟ್ಪದಿ ಸಾಹಿತ್ಯದಲ್ಲಿ ಹಲವಾರು ಪುರಾಣ ಕಾವ್ಯಗಳನ್ನು ರಚಿಸಿರುವರು. ಅವುಗಳಲ್ಲಿ ಈ ಮಹಾಂತೇಶ್ವರ ಪುರಾಣವು ಒಂದು. ಈ ಪುರಾಣವು ;

ಮಿರಗುವಷ್ಟಾದಶ ಶತವ ಮೇ ।
ಲ್ಮೆರೆವ ಪಂಚತ್ರಿಂಶತಿಯವ ।
ತ್ಸರದ ಚೈತ್ರದೊಳ ಪೂರ್ವದ ಪಕ್ಷಪ್ರತಿಪದದಿ ॥
ಗುರುಭಕುತಿ ಭೀಮಾಖ್ಯ ಕವಿತಾ ।
ಗುರುವರನ ಸ್ಮರಿಸುತ ಸಿರಿ ಗುರು ।
ವರ ಮಹಂತನ ಚರಿತ ಗುರುವಾದೊಳು ತೀರ್ಚಿದೆ ॥ (೯-೧೪೪)

೧೯೧೩ರಲ್ಲಿ ರಚನೆಗೊಂಡಿದೆ ಎಂಬುವದು ತಿಳಿದು ಬರುತ್ತದೆ. ಈ ಪುರಾಣ ಕಾವ್ಯವು ಭಾಮಿನಿಷಟ್ಪದಿಯ ಒಂದು ಸುಂದರ ಕಾವ್ಯ. ಈ ಕಾವ್ಯವು 9 ಸಂಧಿಗಳ ೫೩೧ ಪದ್ಯಗಳನ್ನೊಳಗೊಂಡಿದೆ. ಈ ಕಾವ್ಯದ ನಾಯಕ ಮಹಾಂತೇಶ್ವರ. ಇವರು ೧೬ನೇ ಶತಮಾನದ ಉತ್ತರಾರ್ಧ ೧೭ನೇ ಶತಮಾನದ ಪೂರ್ವಾರ್ಧದಲ್ಲಿ ಬಾಳಿ ಹೋದ ಒಬ್ಬ ಮಹಿಮಾಪುರುಷ. ಈಶ್ವರನ ಪ್ರತಿರೂಪ. ಶಿವನ ಸತ್ವಗಳನ್ನು ತುಂಬಿಕೊಂಡ ಆದರ್ಶ ಮೂರ್ತಿ. ಇವರು ಗೈದ ಸಾಧನೆಯನ್ನು ಪವಾಡಗಳನ್ನಾಗಿ ಸೃಷ್ಟಿಸಿ ಕಾವ್ಯರೂಪವನ್ನು ನೀಡಿದ್ದಾರೆ. ಈ ಪುರಾಣ ಕಾವ್ಯದಲ್ಲಿ ಗುರು-ಶಿಷ್ಯರಿಬ್ಬರ ಚರಿತ್ರೆ ಇದೆ. ಶ್ರೀಚಂದ್ರಶೇಖರರ ಚರಿತ್ರೆಯು ಸಂಧಿ ೩ರ ಕೊನೆಯಿಂದ ಪ್ರಾರಂಭಗೊಂಡು ಸಂಧಿ ೯ರ ಮಧ್ಯದವರೆಗೂ ಚಾರಿತ್ರಿಕ ವಿವರಗಳಿಂದ ಕೂಡಿದೆ. ಮಹಾಂತೇಶ್ವರರ ಅನಂತ ಮಹಿಮೆಗಳು ಕಾಣಿಸಿಕೊಂಡಿವೆ. ಈ ಮಹಾತ್ಮರು ಸಾಧಿಸಿದ ಸಾಧನೆಗಳೇ ಈ ಕಾವ್ಯದ ಮುಖ್ಯ ತಿರುಳು.

ಪ್ರಾರ್ಥನೆ, ಗುರುಸ್ತುತಿ ಕಾವ್ಯದ ಅಗ್ಗಳಿಕೆ ಕುಕವಿನಿಂದೆ ಇತ್ಯಾದಿ ಸಾಂಪ್ರದಾಯಿಕ ರೀತಿಯಲ್ಲಿಯೇ ಕೃತಿಯು ಪ್ರಾರಂಭವಾಗಿದೆ. ಈ ಪುರಾಣ ಕಾವ್ಯದ ಕಥಾನಾಯಕನ ತಂದೆ ಸೋಮಯ್ಯ ತಾಯಿ ಸಾಧ್ವಿ ಸುಮಂಗಲೆ. ಊರು

ಬೇವಿನಹಳ್ಳಿ. ಸತಿಪತಿಗಳೊಂದಾಗಿ ಹಿತದಿಂದ ಕಾಲ ಕಳೆಯುತ್ತಿದ್ದರು. ಇವರಿಗೆ ಸಂತಾನ ಭಾಗ್ಯದ ಕೊರತೆ ಎದ್ದು ಕಾಣುತ್ತಿತ್ತು. ಮಗುವಿಗಾಗಿ ಹಂಬಲಿಸುವ ದುಃಖ ಈ ಕಾವ್ಯದಲ್ಲಿ ದುಃಖದ ಮಡುವಾಗಿ ಮೂಡಿ ಬಂದಿದೆ. ಸತಿ ಮಕ್ಕಳಿಗಾಗಿ ಹಂಬಲಿಸುವ ಪರಿಯನ್ನು ಗಮನಿಸಿ ಸಮಾಧಾನಗೊಳಿಸುವುದು ಪತಿಯ ಕೆಲಸ. ಸತಿ ಸುಮಂಗಲೆಯನ್ನು ಸಮಾಧಾನಿಸಿ ಉಮೇಶನ ಕರುಣೆಯೊಂದಿದ್ದರೆ ನಮಗೆ ಸಂತಾನ ಭಾಗ್ಯಲಭಿಸುತ್ತದೆ. ಪುರಾತನರು ಶಿವನನ್ನು ಮೆಚ್ಚಿಸಿ ಹರವ್ರತವನ್ನು ಮಾಡುತ್ತ ಪುತ್ರರನ್ನು ಪಡೆದ ಸಂಗತಿಯನ್ನು ತಿಳಿಸುತ್ತಾರೆ. ರಂಭಾಪುರದ ಶಿವಯೋಗಿ ಶ್ರೀ ಚಂದ್ರಶೇಖರ ಸ್ವಾಮಿಗಳು ನಮಗೆ ಕುಲಗುರು. ಬೇಡಿದ ವರವನ್ನು ನೀಡುವ ವ್ಯಕ್ತಿ. ವ್ಯಸನವನ್ನು ಬಿಡು ರಂಭಾಪುರಿಗೆ ಹೋಗಿ ಅವರ ಆಶೀರ್ವಾದದಿಂದ ಮಗುವನ್ನು ಪಡೆದು ಜೀವನವನ್ನು ಸಾಗಿಸಬಹುದು ಎಂದು ಹೆಂಡತಿಗೆ ಹೇಳುತ್ತಾನೆ. ಈ ಮಾತುಗಳನ್ನು ಕೇಳಿದ ಸುಮಂಗಲೆ ಶ್ರೀ ಗುರುವರನ ಮಹಿಮೆಗಳನ್ನು ಅಡಿಗಡಿಗೆ ನೆನೆಯುತ್ತಾ ಗಂಡನ ಪಾದಕ್ಕೆ ವಂದಿಸಿದಳು. ಸತಿ–ಪತಿಗಳಿಬ್ಬರೂ ಕಾಲು ನಡಿಗೆಯಲ್ಲಿ ಐದು ದಿನಗಳಲ್ಲಿಯೇ ರಂಭಾಪುರಿಯನ್ನು ತಲುಪಿದರು.

ಕವಿಗಳು ರಂಭಾಪುರದ ವರ್ಣನೆ ತುಂಬಾ ಸೊಗಸಾಗಿ ಮಾಡಿರುವರು. ರಂಭಾಪುರದ ಸೀಮೆಯಲ್ಲಿ ಸತಿ–ಪತಿಗಳಿಬ್ಬರು ತೆಂಗು, ಕದಳಿ ರಸಾಲ ಮುಂತಾದವುಗಳು ರಂಜಿಸುತ್ತಿರುವುದನ್ನು ನೋಡುತ್ತಾ ಸಂತಸ ಪಡುತ್ತ ರಂಭಾಪುರವನ್ನು ಪ್ರವೇಶ ಮಾಡಿದರು. ಬೀದಿಗಳನ್ನು ಗುಡಿ–ಗೋಪುರಗಳನ್ನು ನೋಡುತ್ತ ಸರಸ ಸಲ್ಲಾಪದೊಂದಿಗೆ ಬರುತ್ತಿರುವಾಗ ವೇಶ್ಯೆಯರ ಮನೆಗಳು ಕಾಣಿಸಿಕೊಂಡವು. ' ಸ್ಮರನ ರಾಣಿಯ ಚಲ್ವಿಕೆಯ ಕಿನ್ನರ ವಧುವಿನ ಸುಗಾನದಿಂದಿರೆ ಮೆರೆವ ವೇಶ್ಯೆ ಮಂಡಲವನ್ನು ನೋಡಿ ಅಚ್ಚರಿಗೊಳ್ಳುತ್ತಾನೆ. ವೇಶ್ಯೆಯರ ವರ್ಣನೆಗಾಗಿ ಸುಮಾರು ೧೫ ಪದ್ಯಗಳನ್ನು ಮೀಸಲಾಗಿಟ್ಟಿದ್ದಾರೆ. ಸತಿಪತಿಗಳಿಬ್ಬರು ರಂಭಾಪುರ ಮಠವನ್ನು ಪ್ರವೇಶಿಸಿ ಗುರು ಚಂದ್ರಶೇಖರಿಗೆ ವಂದಿಸಿ ಕೈಮುಗಿದು ವೃದ್ಧಾಪ್ಯ ಸಮೀಪಿಸುತ್ತಿದೆ ಸಂತತಿ ಇಲ್ಲದ್ದಕ್ಕಾಗಿ ಕೊರಗುತ್ತಿರುವ ವಿಷಯವನ್ನು ತಿಳಿಸುತ್ತಾರೆ. ಕಣ್ಣಿಗೆ ಕಾಣದ ದುಃಖದ ಸಾಗರದಲ್ಲಿ ಮುಳುಗಿರುವೆವು. ಅವಳ ಕಣ್ಣುಗಳು ಕುಗ್ಗಿವೆ. ಅದಕ್ಕಾಗಿ ನೀವುಗಳು ಈ ಇಂಗಿತವನ್ನು ಈಡೇರಿಸಬೇಕೆಂದು ಭಕ್ತಿಯಿಂದ ಬೇಡಿಕೊಳ್ಳುತ್ತಾರೆ. ಸುಮಂಗಲೆ ಚಂದ್ರಶೇಖರ ಸ್ವಾಮಿಗಳ ಪಾದಗಳ ಮೇಲೆ ಬಿದ್ದು ಶಿವ ಪೂಜೆ ಸಲ್ಲಿಸುತ್ತಾಳೆ. ಗುರು ಚಂದ್ರಶೇಖರ ಈಕೆಯ ಮನೋಗತವನ್ನು ಪೇಳೆಂದು ಕೇಳುತ್ತಾರೆ. ಆಗ ;

ಭುವನ ಭಕ್ತೋದ್ಧಾರ ನಾಲಿಸು
ಕುವರ ನಿಲ್ಲದ ಭಾಗ್ಯವಿಲ ಸ
ತ್ಕವಿತೆಯಿಲ್ಲದ ಜಾಣ್ಮೆರಂಜಿಪುದೆಂತು ಚಿದ್ರೂಪ ॥ ೩–೩೧ ॥

ಮಕ್ಕಳಿಲ್ಲದವರು ಅನುಭವಿಸುವ ಅಪಾರ ನೋವನ್ನು ಕವಿ ಇಲ್ಲಿ ತನ್ನ ಬದುಕಿಗೂ ಅನ್ವಯಿಸಿಕೊಂಡು ಸುಮಂಗಲೆ ಹಲಬುವ ಪರಿಯನ್ನು ಪರಿಣಾಮಕಾರಿಯಾಗಿ ವ್ಯಕ್ತಪಡಿಸಿದ್ದಾರೆ.

ಮಕ್ಕಳಿಲ್ಲದ ಮನುಜರಿಗೆ ಗತಿ
ಸಿಕ್ಕದೆಂದುಸುರಿರ್ಪ ಶೃತಿ ನುಡಿ
ಪುಕ್ಕಟವೇ ಪೇಳೆನ್ನ ಗರ್ಭದಿ ಮಕ್ಕಳಿಲ್ಲದಕೆ
ಕಕ್ಕುಲತೆಯಿಂ ಬಂದು ಬೇಡಿದೆ
ತಕ್ಕ ಮಗುವನ್ನಿತ್ತು ನಿಜವಂ
ಶಕ್ಕೆ ಶೋಭೆಯಗೈದು ರಕ್ಷಿಸುವದೆಂದು ಹಲುಬಿದಳು ॥ ೩-೩೨ ॥

ಆಗ ಗುರು ಚಂದ್ರಶೇಖರರು 'ಸುತವಿಹೀನರಿಗಮಳತದ ಸದ್ಗತಿಯ ದಿಲ್ಲೆಂಬುದು ಪುರಾಣೋಕ್ತಿ ' ಎಂದು ಹೇಳಿದಾಗ ಅವಳು ಕಳವಳದ ದುಃಖದ ಸಾಗರದಲ್ಲಿ ಮುಳುಗುತ್ತಾಳೆ. ಆ ಸಂದರ್ಭದಲ್ಲಿಯೇ ಆಶೀರ್ವದಿಸಿ ಶಿವವ್ರತ ಮಾಡಲು ತಿಳಿಸುತ್ತಾ ಹಲವಾರು ಚರರು ಮಕ್ಕಳು ಪಡೆದಿರುವುದರ ಕುರಿತು ಸತಿ-ಪತಿಗಳಿಗೆ ವಿವರಿಸಿದರು. ನಿಮಗೆ ಇಬ್ಬರು ಪುತ್ರರು ಜನಿಸುವರು. ಹಿರಿಯ ಮಗನಿಗೆ ಮಹಾಂತ ಶಿವಮುನಿ ಎಂದು ಹೆಸರಿಸಲು ಗುರುಗಳು ತಿಳಿಸುತ್ತಾರೆ. ತಕ್ಷಣವೇ ಆನಂದಿತರಾಗಿ ಸತಿ-ಪತಿಗಳಿಬ್ಬರೂ ಗುರುವಿನ ಪಾದಕ್ಕೆ ಬಿದ್ದು ವಂದಿಸಿದರು. ಗುರು ಚಂದ್ರಶೇಖರರು ನಿಮ್ಮಿಷ್ಟ ಸಿದ್ದಿಸಲಿ ಎಂದು ಹರಸಿದರು.

ಸಂಧಿ ೫ರಲ್ಲಿ ಹರವ್ರತಗಳನ್ನು ಮಾಡುವುದು, ಈರ್ವರು ಸುತರನ್ನು ಪಡೆಯುವುದು, ಓರ್ವಸುತನನ್ನು ಮಠಕ್ಕೆ ತಂದು ಬಿಡುವ ವಿಷಯಗಳು ಇಲ್ಲಿ ಸಂಗ್ರಹಗೊಂಡಿವೆ. ಗುರು ಚಂದ್ರಶೇಖರರು ಹೇಳಿದಂತೆ ಶಿವವ್ರತಗಳನ್ನು ಮಾಡುತ್ತ ಕಾಲಕಳೆಯುತೊಡಗಿದಳು. ಸುಮಂಗಲೆಗೆ ಗರ್ಭಧರಿಸಿದ ಚಿಹ್ನೆಗಳು ಮೂಡತೊಡಗಿದವು. ಈ ವಿಷಯವನ್ನು ಹೇಳುವುದಕ್ಕಾಗಿಯೇ ಕವಿ ಸುಮಾರು ೮ ಪದ್ಯಗಳನ್ನು ಮೀಸಲಾಗಿಟ್ಟಿರುವರು. ಗರ್ಭವತಿಯಾಗುವ ಲಕ್ಷಣಗಳು ತೋರುತ್ತಿರುವಂತೆ ಶಿವನ ಕಥೆ ಕೇಳುವ ಬಯಕೆ ತೀವ್ರಗೊಂಡಿತು. ನವಮಾಸಗಳು ತುಂಬಿದವು. ಆಗ ಸುಮಂಗಲೆ ತನ್ನ ಬಂಜೆತನವನ್ನು ಹೋಗಲಾಡಿಸಿದ ಎಂದು ಶಿವ-ಶಿವೆಯರನ್ನು ಸ್ಮರಿಸತೊಡಗಿದಳು. ನಮ್ಮ ಜನಪದ ಗರತಿಯರು ಕೂಡಾ ಬಂಜೆತನ ಎಂಬ ಶಬ್ದ ಹೋಗಲಾಡಿಸುವ ಸಲುವಾಗಿ 'ಮುಂಜಾನೆ ಹುಟ್ಟಲಿ ಸಂಜೀಕಿ ಸಾಯಲಿ ಬಂಜೆಯೆಂಬ ಶಬ್ದ ಬೇಕಾಗಿಲ್ಲ' ಎನ್ನುವಂತೆ ಇಲ್ಲಿ ಸುಮಂಗಲೆ ಕೂಡಾ ಬಂಜೆತನವನ್ನು ಹೋಗಲಾಡಿಸಿದ ಶಿವ-ಶಿವೆಯರನ್ನು ಕುರಿತು ಪ್ರಾರ್ಥಿಸುತ್ತಾಳೆ.

ಇಂತು ಮಂಗಲದೇವಿ ಮನದಿ ನಿ
ರಂತರದಿ ಶಿವಸ್ಮರಣೆಯೊಳು ತಾ
ಸಂತಸದಿ ಮನೆಗೆಲಸ ನಡಿಸುತ ಚರರ ತೃಪ್ತಿಸುವ ।
ಚಿಂತನೆಯೊಳಿರುತಿರಲು ಬೇನೆಯ
ದಂತಳೆದು ಶುಭತಾರೆಯೋಗದಿ
ಕಂತುಮರ್ದನನೊಂದಿ ಪುತ್ರ ಪ್ರಸವಿಸಿದಳಾಗ ॥ ೫-೧೮ ॥

ಇತ್ತ ಸುಮಂಗಲೆ ಮಗುವನ್ನು ಹೆತ್ತಳು. ಅತ್ತ ರಂಭಾಪುರದಲ್ಲಿ ಗುರುಚಂದ್ರಶೇಖರರು ಪೂಜೆಗೆ ಕುಳಿತಿದ್ದಾಗ ಲಕ್ಷ್ಯದೊಳು ಇತ್ತಾ ಸುಮಂಗಲ ದೇವಿಸುತನಂ ಪೆತ್ತುದದನರಿದಾಕ್ಷಣದಿ ಕಳೆವೆತ್ತು ಗಣಸಹಿತಾಗಮಿಸಿದರು ಸೋಮನಪುರಕ್ಕೆ(೫-೧೯) ಶಿಶುವನ್ನು ನೋಡುತ್ತ ;

ಪರಮ ಚಿನ್ನದ ಬೊಂಬೆಯಂತುರೆ
ಮೆರೆವ ಶಿಶುವಿನ ಮಸ್ತಕದಿಖಿಲ
ಕರಕಮಲವನ್ನೇರಿ ಪಣೆಯೊಳು ಭಸಿತವನ್ನಿಟ್ಟು ।
ಶರೀರದೊಳು ಶಿವಲಿಂಗವನು ತಾ
ಧರಿಸಿ ಮೂಲ ಪ್ರಣವ ಕರ್ಣಕೆ
ಅರುಪಿ ದೀಕ್ಷೆಯನಿತ್ತು ಸದ್ಗುರು ಚಂದ್ರಶೇಖರನು ॥ ೫-೨೧ ॥
ತರುಣನಂ ಪಿಡಿದೆತ್ತಿ ಮೋಹದಿ
ವರಕಳೆಯ ಬರವನ್ನಿರೀಕ್ಷಿಸಿ
ಮರುಕದಿಂ ಮುಂದಾಡಿ ಮುದ್ದಿಸಿ ಪಠಿಸಿ ಪದುಳದೊಳು ।
ಧರೆಯ ಜನರರಿವಂತೆವಗೆ ಪರ
ತರ ಮಹಂತನೆನಿಪ್ಪ ಪೆಸರಂ
ಕರೆದು ಪಾಲಿಪುದೆಂದುಸುರ ಗುರು ನಡೆದನುತ್ಸವದಿ ॥ ೫-೨೨ ॥

ಗುರು ಚಂದ್ರಶೇಖರರು ರಂಭಾಪುರಿಗೆ ಪ್ರಯಾಣ ಬೆಳೆಸಿದರು. ಇತ್ತ ಮಗುವಿಗೆ ೧೨ ದಿವಸಕ್ಕೆ ವಿದ್ಯುಕ್ತವಾಗಿ 'ಮಹಿಮ ಮಹಾಂತ'ನೆಂದು ನಾಮಕರಣ ಮಾಡಿದರು ಮಗು ಅತ್ಯಂತ ವೈಭವದಿಂದ ಬೆಳೆಯಿತು. ಐದು ವರ್ಷಗಳು ತುಂಬಿದವು. ಶಿಕ್ಷಣವು ಗುರು ಚಂದ್ರಶೇಖರರ ಹತ್ತಿರವೇ ಪ್ರಾರಂಭವಾಯಿತು.

ಸಂಧಿ ಆರು ಮಹಾಂತನ ಶಿಕ್ಷಣಕ್ಕಾಗಿ ಮತ್ತು ಪಂಚಾಕ್ಷರಿಯ ಮಂತ್ರಕ್ಕಾಗಿಯೇ ಮೀಸಲಾಗಿದೆ. ಸಂಧಿ ಏಳರಲ್ಲಿ ಭಸಿತದ ಮಹತ್ವವನ್ನು ಹೇಳಿರುವರು ಈ ಮಠಕ್ಕೆ ೯೭ ಶಾಖಾ ಮಠಗಳಿದ್ದವು. ಮೈಸೂರು ಅರಸರು ಈ ಮಠದ

ಶಿಷ್ಯರು ಸುತ್ತಲಿನ ಗ್ರಾಮಗಳಿಂದ ಈ ಮಠಕ್ಕೆ ೪೦ ಸಾವಿರ ಹಣ ಬರುತ್ತದೆ. ಮಠದ ಸೇವೆಗಾಗಿಯೇ ಈ ಹಣವನ್ನು ಖರ್ಚು ಮಾಡಲಾಗುತ್ತದೆ. ಈ ಮಠದಲ್ಲಿ ಒಂದು ಮುದ್ರಾಖೋಲಿಯನ್ನು ಕಟ್ಟಿಸಿ ಗುರು ಶಿಷ್ಯರಿಬ್ಬರು ಅಧ್ಯಯನ, ಕಾಯಕದೊಂದಿಗೆ ಕಾಲ ಕಳೆಯತೊಡಗಿದರು ಎಂಬ ಚಾರಿತ್ರಿಕ ವಿವರಗಳನ್ನು ನೀಡಲಾಗಿದೆ.

ಒಂದು ದಿನ ಮೈಸೂರು ಅರಸನ ಮಡದಿಯರು ಗುರು ದರ್ಶನವನ್ನು ಪಡೆಯಲು ರಂಭಾಪುರಿಗೆ ಆಗಮಿಸಿದರು. ಶಿವಾಲಯವನ್ನು ನೋಡುತ್ತ ಗುರುಗಳ ದರ್ಶನವನ್ನು ಪಡೆದು ಶಿವಲಿಂಗ ನೋಡಲು ಮುದ್ರಾಖೋಲಿಗೆ ಪ್ರವೇಶಿಸುತ್ತಾರೆ;

ಗುರುವರನ ಪದಕೆರಗಿ ಮಠದೊಳ
ಗಿರುವ ಶಿವಲಿಂಗಗಳ ನೋಡುತ
ಹರನ ಧ್ಯಾನದೊಳ್ಳೈತರಲು ಮುದ್ರಾಸುಮಂದಿರಕೆ
ಬರೆಮಹಾಂತನು ರಾಣಿಯರನೊಳ
ಕರೆದು ಕರಗಳ ಪಿಡಿದುಕುಳ್ಳಿರಿ
ಸಿರದೆ ಮಂತ್ರವನೋದಿ ಮುದ್ರೆಯನಿಡಿಸಿ ತೋರಿಸಿದ ॥ ೭-೩೧ ॥

ಈ ಮಹಾಂತನು ರಾಣಿಯ ಕೈ ಹಿಡಿದು ಕುಳ್ಳಿರಿಸಿದ ಈ ಘಟನೆಯೇ ಗುರು-ಶಿಷ್ಯರೀರ್ವರೂ ಮಠ ಬಿಡಲು ಕಾರಣವಾಯಿತು. ಇಲ್ಲಿಗೆ ಸಂಧಿ ಏಳು ಮುಕ್ತಾಯವಾಗುತ್ತದೆ. ಮೈಸೂರು ಅರಸರ ಸೈನ್ಯ ತಕ್ಷಣವೇ ರಂಭಾಪುರಿಗೆ ಹೊರಟಿತು.

ಈ ಸುದ್ದಿಯನ್ನು ದಿವ್ಯದೃಷ್ಟಿಯಿಂದ ಅರಿತ ಚಂದ್ರಶೇಖರರು ಶಿಷ್ಯನನ್ನು ಕರೆದುಕೊಂಡು ವಾರಣಾಸಿಯ ದಾರಿಯನ್ನು ತುಳಿಯತೊಡಗುವುದರೊಂದಿಗೆ ಸಂಧಿ ಎಂಟು ಪ್ರಾರಂಭವಾಗುತ್ತದೆ. ವಾರಣಾಸಿಯ ಮೂಲಕ ಕಲ್ಯಾಣಪುರಕ್ಕೆ ಬಂದು ತಲುಪಿದರು ಅಲ್ಲಿಂದ ನೇರವಾಗಿ ಭೀಮಾ ನದಿಯನ್ನು ದಾಟಿ ಶಿರಿವಾಳವೆಂಬ ಗ್ರಾಮವನ್ನು ತಲುಪಿದರು ಎರಡು ದಿನಗಳ ಕಾಲ ಊರ ದೇವಾಲಯದಲ್ಲಿದ್ದು, ನಂತರ ಬೇವಿನಾಳ ಗ್ರಾಮದ ಮೂಲಕ ಡೋರನಳ್ಳಿಗೆ ಬಂದು ತಲುಪಿದರು. ಇಲ್ಲಿಯೇ ಸುವಿಚಾರ ಗೋಷ್ಠಿಗಳನ್ನು ನಡೆಸುತ್ತಾ ಶಿಷ್ಯರೊಂದಿಗೆ ಇರತೊಡಗಿದರು. ಡೋರನಳ್ಳಿಯ ಗೌಡನು ಡೋರ ಕುಲದವನು ಅವನಿಗೆ ಕುಷ್ಟರೋಗ ಇರುತ್ತದೆ. ಅದನ್ನು ತಮ್ಮ ದಿವ್ಯ ದೃಷ್ಟಿಯ ಜಲದಿಂದ ಹೋಗಲಾಡಿಸಿದರು. ಚಂದ್ರಶೇಖರರು ಡೋರನಳ್ಳಿಯನ್ನು ಬಿಟ್ಟು ಶಹಾಪೂರ ಗುಡ್ಡದ ಮಂದಾಕಿನಿಯಲ್ಲಿ ನೆಲೆಸಿದರು. ಈ ಸುದ್ದಿಯನ್ನು ಅರಿತ ಡೋರನಳ್ಳಿಯ ಗೌಡರು ಅಲ್ಲಿಗೆ ಹೋಗಿ ವಂದನೆಗೈದು

ಡೋರನಳ್ಳಿಗೆ ಬರಲು ವಿನಂತಿಸಿಕೊಳ್ಳುತ್ತಾರೆ. ಗುರು–ಶಿಷ್ಯರಿಬ್ಬರೂ ಡೋರನಳ್ಳಿಗೆ ಬರುತ್ತಾರೆ. ಗೌಡನು ಮಠವನ್ನು ಕಟ್ಟಿಸಿಕೊಡುತ್ತಾನೆ. ಈ ಮಠದಲ್ಲಿಯೇ ಶಿಷ್ಯನೊಂದಿಗೆ ಊರಗೌಡನಿಗೂ ಭಸಿತ, ರುದ್ರಾಕ್ಷಿಗಳ ಮಹತ್ವವನ್ನು ತಿಳಿಸಿಕೊಡುವುದರೊಂದಿಗೆ ಸಂಧಿ ೮ ಮುಕ್ತಾಯವಾಗುತ್ತದೆ.

ಸಂಧಿ ಒಂಬತ್ತು ಮಹಾಂತನ ಅನಂತ ಮಹಿಮೆಗಳಿಂದ ತುಂಬಿಕೊಂಡಿದೆ. ಇಲ್ಲಿ ಮಹಾಂತನು ಮೈಸೂರು ರಾಣಿಯರನ್ನು ಕೈ ಹಿಡಿದುದರ ಘಟನೆಯಿಂದ ಮೈಸೂರು ಅರಸರು ರಂಭಾಪುರಿಗೆ ಆಗಮಿಸಿ ಮಠವನ್ನು ತಮ್ಮ ವಶಕ್ಕೆ ತೆಗೆದುಕೊಂಡರು. ಮಠದ ಉಸ್ತುವಾರಿಯನ್ನು ಶೃಂಗೇರಿಪುರದ ಸ್ವಾಮಿಗಳಿಗೆ ಒಪ್ಪಿಸಿದರು. ಆದರೆ ಮಹಾಂತ ಮತ್ತು ಚಂದ್ರಶೇಖರರ ದಿವ್ಯ ದೃಷ್ಟಿ ಅವರ ಮೇಲೆ ಇಲ್ಲದ್ದಕ್ಕಾಗಿ ಮೈಸೂರು ಅರಸ ಅಸು ನೀಗಿದರು. ರಾಣಿಯರು ದುಃಖಾಬ್ಧಿಯಲ್ಲಿ ಮುಳುಗಿದರು. ಗುರು ಚಂದ್ರಶೇಖರರನ್ನು ಮಠ ಬಿಡಿಸಿದ್ದಕ್ಕಾಗಿ ಹೀಗೆಲ್ಲ ಆಯಿತು ಎಂಬುದನ್ನು ಅರಿತ ರಾಣಿಯರು ಅವರನ್ನು ಹುಡುಕಿಸಲು ಪ್ರಯತ್ನಪಟ್ಟರು. ಗುರುಗಳನ್ನು ಕರೆದುಕೊಂಡು ಬರುವುದಕ್ಕಾಗಿ ದಶದಿಕ್ಕುಗಳಿಗೂ ಸೈನ್ಯವನ್ನು ಅಟ್ಟಿದರು. ಸೈನ್ಯ ಡೋರನಹಳ್ಳಿಗೆ ಬಂದು ತಲುಪಿತು. ಚಂದ್ರಶೇಖರ ಗುರು ಇರುವುದನ್ನು ಅರಿತು ಅತೀವ ಸಂತಸಗೊಂಡರು. ಗುರುಗಳ ಹತ್ತಿರ ಬಂದು ರಾಣಿಯರ ಪತ್ರವನ್ನು ಗುರು ಚಂದ್ರಶೇಖರರಿಗೆ ತೋರಿಸಿದರು. ಅದರಲ್ಲಿ ಬಿರುದಾವಳಿ ಹಾಗೂ ಮಠದ ಸಂಪತ್ತನ್ನು ಮರಳಿಕೊಡುತ್ತೇವೆ. ನಮ್ಮ ತಪ್ಪನ್ನು ಮನ್ನಿಸಬೇಕೆಂದು ಬರೆದ ಪತ್ರವನ್ನು ಓದಿ ಚಂದ್ರಶೇಖರರು ಮೈಸೂರಿಗೆ ಪ್ರಯಾಣ ಬೆಳೆಸಲು ಮುಂದಾದರು ಡೋರನಹಳ್ಳಿ ಗೌಡನನ್ನು ಕರೆಯಿಸಿ ಮಠದ ಪಟ್ಟಾಧಿಕಾರಿಯನ್ನಾಗಿ ಮಹಾಂತನನ್ನು ಮಾಡುವ ವಿಷಯ ತಿಳಿಸಿಪಟ್ಟಾಧಿಕಾರಿಯನ್ನಾಗಿ ಮಾಡಿದರು. ಷಟ್ಸ್ಥಲ, ಷಡ್ಲಿಂಗಗಳ ಮಹಿಮೆಗಳನ್ನು ತಿಳಿಸಿದರು. ಬಸವನನ್ನು ಕರೆದು ತಮ್ಮಾಶ್ರಯದಲ್ಲಿದ್ದ ಹಸುಗಳಿಗೆ ಪೋಷಿಸುವ ಜವಾಬ್ದಾರಿಯನ್ನು ಒಪ್ಪಿಸಿದರು. ಊರ ಜನರೆಲ್ಲರನ್ನು ಕರೆದು ಈ ರೀತಿಯಾಗಿ ಹೇಳಿದರು ;

ನೆರೆದ ಭಕ್ತವ್ರಜಕೆ ಪೇಳ್ವಕು
ವರ ಮಹಾಂತ ಮುನೀಂದ್ರ ಮಹಿಮಾ
ಕರನೆನಿಸಿ ರಂಜಿಪನಿಹದಿ ಸಾಮಾನ್ಯನಲ್ಲ ನಿವಂ
ಧರೆಯೊಳಗೆ ಧ್ಯಾನಿಸುವ ಸದ್ಭ
ಕ್ತರಿಗೆ ಘನಸುರಧೇನು ಚಿಂತಿಸು ।
ವರಿಗೆ ಚಿಂತಾರತ್ನನೆನಿಸುವ ತಿಳಿದು ವರ್ತಿಸಿರಿ ॥ ೯–೩೦ ॥

ಇಲ್ಲಿಂದಲೇ ಮಹಾಂತರ ಮಹಿಮೆಗಳು ಗೋಚರಿಸತೊಡಗಿದವು. ಕಾಯಕದ ಬಗ್ಗೆ ತಿಳಿದ ಮಹಾಂತನು ಗಣತೃಪ್ತಿಯನ್ನುಗೊಳಿಸಿದ. ಪುತ್ರರಿಲ್ಲದವರಿಗೆ ಪುತ್ರ ಸಂತಾನವನ್ನು ಕರುಣಿಸಿದ. ನಾನಾ ತರಹದ ರೋಗಿಗಳು ಬಂದು ಪ್ರಾರ್ಥಿಸಲು ಅವರ ರೋಗಗಳನ್ನು ಕಳೆಯತೊಡಗಿದ. ಭೂತ ಹಿಡಿದವರನ್ನು ಕೂಡಾ ಬಿಡಿಸಿದ. ಹಸಿವಿನಿಂದ ಬಳಲಿಬಂದ ಭಕ್ತರನ್ನು ಅನ್ನೋದಕದಿಂದ ಸಂತೃಪ್ತಿಗೊಳಿಸತೊಡಗಿದ. ಒಂದೊಂದಾಗಿ ಇವರ ಮಹಿಮೆಗಳು ಗೋಚರಿಸತೊಡಗಿದವು. ಇವರ ಮಹಿಮೆಗಳನ್ನು ಕೇಳಿದ ಮತ್ತು ನೋಡಿದ ೭೭೫ ಮಠದ ಸ್ವಾಮಿಗಳು ಬಂದು ಮಹಾಂತಯೋಗಿಯ ಪಾದಕ್ಕೆರಗಿ ಶಿಷ್ಯರಾದರು.

ಅಪಾರವಾದ ಗೋ ಸಂಪತ್ತು ಮಹಾಂತ ಶಿವಯೋಗಿಗಳಲ್ಲಿರುವದನ್ನು ಅರಿತ ಬಿಜಾಪುರದ ಆದಿಲ್‌ಶಾಹಿಯು ಗೋವುಗಳನ್ನು ತರುವುದಕ್ಕೆ ಸೈನ್ಯವನ್ನು ಕಳುಹಿಸಿದ. ಸೈನ್ಯ ಡೋರನಹಳ್ಳಿಗೆ ಬಂದು ತಲುಪಿತು. ಗೋವುಗಳಿರುವ ಸ್ಥಳವನ್ನು ಅರಿತುಕೊಂಡು ಮುತ್ತಿಗೆ ಹಾಕಿದರು. ಗೋವುಗಳನ್ನು ಹೊಡೆದುಕೊಂಡು ಹೋಗಲು ಹವಣಿಸಿದರು. ಸೈನಿಕರೆಲ್ಲರೂ ಬಳಲಿದರು. ಗೋವುಗಳು ಮುಂದೆ ಹೋಗದೇ ಇರುವುದನ್ನು ಕಂಡು ಮುಂದೆ ಏನು ಮಾಡಬೇಕು ಎಂಬುದು ತೋಚದಂತಾಯಿತು. ಆಗ ಅವರು ಗೋವುಗಳನ್ನು ಕಾಯುವ ವ್ಯಕ್ತಿಯನ್ನು ಅಂಜಿಸಿ ಉಪಾಯವನ್ನು ಕೇಳಿದರು. ಆಗ ಆತ ಪ್ರಾತಃಕಾಲದಲ್ಲಿ ಲಿಂಗಾರ್ಚನೆ ಮಾಡುತ್ತಿರುವ ಸಮಯದಲ್ಲಿ ಮಹಾಂತನನ್ನು ಬಂಧಿಸಿದರೆ ಎಲ್ಲವೂ ಸಾಧ್ಯವೆಂದು ತಿಳಿಸುತ್ತಾನೆ. ಅದರಂತೆ ಭಟರೆಲ್ಲರೂ ಮಠಕ್ಕೆ ಮುತ್ತಿಗೆ ಹಾಕಿದರು. 'ಜಂಗಮಕು ಪಕಡೋ' ಎನ್ನುತ್ತ ಮಠದೊಳಗೆ ಪೊಕ್ಕರು. ಆಗ ಮಹಿಮ ಮಹಾಂತನಿಂತೆಂದನು. ಹಣ ಗಳಿಸಿರುವೆನು ಮಠದಲ್ಲಿಡಲು ಭಯವೆಂದರಿದು ಮೊರಡಿಯೊಳಿಟ್ಟಿರುವೆ. ನಾಳೆ ಉದಯ ಕಾಲದಿ ತೋರಿಸುವೆನೆಂದರು. ಅದಕ್ಕೆ ಸೇನಾಪತಿ ಸಮ್ಮತಿಯನ್ನು ಸೂಚಿಸಿದ. ಮಠದ ಹೊರ ಭಾಗದಲ್ಲಿ ಸೈನಿಕರೆಲ್ಲರೂ ಕೈಯಲ್ಲಿ ಕತ್ತಿಯನ್ನು ಹಿಡಿದುಕೊಂಡು ಕಾಯತೊಡಗಿದರು. ಮಹಾಂತನು ಬಸವನ ಜೊತೆಗೂಡಿ ಮಠದ ತಲೆಬಾಗಿಲನ್ನು ಮುಚ್ಚುತ್ತ ಕೀಲಿಯ ನೊತ್ತಿ ಬಂಧಿಸಿದ. ರಾತ್ರಿಯ ಸಮಯದಲ್ಲಿ ಬಹು ಜಾಗ್ರತೆಯಿಂದ ಸೈನಿಕರಿಗೆ ಕಾಣದಂತೆ ಮಹಾಂತ ಬಸವರೀರ್ವರು ಮಠದಿಂದ ಹೊರನಡೆದು ದೇವಿ ಮಂದಿರವನ್ನು ಅರಸುತ್ತ ಗಾಡಾಂಧಕಾರದಲ್ಲಿ ನಡೆದು ದೇವಾಲಯವನ್ನು ತಲುಪಿದರು. ದೇವಾಲಯದ ಹೊರಗೆ ಬಸವನನ್ನು ನಿಲ್ಲಿಸಿ ತಾನು ಮಾತ್ರ ಗರ್ಭಗುಡಿಯುನ್ನು ಪ್ರವೇಶಿಸಿ ಪದ್ಮಾಸನವನ್ನು ಹಾಕಿ ಭಕ್ತಿಯಿಂದ ಶಾಂಭವಿಯನ್ನುಪೂಜಿಸತೊಡಗಿದ. ಶಾಂಭವಿ ತನ್ನ ನಿಜರೂಪ ತೋರಿದಳು. ಆಗ ಮಹಾಂತ ತನ್ನ ಇಷ್ಟಾರ್ಥವನ್ನು ಪೂರೈಸೆಂದು ಮೊರೆಯಿಡುತ್ತಾನೆ. ಈ

ನಶ್ವರವೆನಿಪ ಭೂಲೋಕ ಸಾಕು ನನಗೆ ಐಕ್ಯದ ಸ್ಥಳವನ್ನು ತೋರಿಸೆಂದು ದೇವಿಯಲ್ಲಿ ಕೇಳಿದನು. ಆಗ ಶಾಂಭವಿ ಶಿವಗಿರಿಗೆನ್ನುತ್ತ ಬಯಲಾದಳು.

ಮಠದೊಳಗೆ ಮಹಾಂತನನ್ನು ಬಂಧಿಸಲು ಕಾಯುತ್ತ ನಿಂತ ಭಟರು ಬಾಗಿಲು ತೆಗೆಯದಿರುವುದನ್ನು ಕಂಡು ನೀಚ ಸ್ವಾಮಿಯನ್ನು ಶೋಧಿಸಿರೆನುತ ತಮ್ಮ ತಮ್ಮೊಳಗೆ ಯೋಚನೆ ಮಾಡತೊಡಗಿದರು. ಮಠದ ಎಲ್ಲಾ ಕೋಣೆಗಳ ಮೂಲೆ ಮೂಲೆಗಳಲ್ಲಿ ಹುಡುಕಿದರು. ಕಾಣದೇ ಇದ್ದಾಗ ವ್ಯಸನಗೊಂಡರು. ಮಠದಿಂದ ಹೊರಹೋದ ಮಹಾಂತೇಶ್ವರರು ದೇವಿಯ ದರ್ಶನವನ್ನು ತೆಗೆದುಕೊಂಡು ಭಟರಿಗೆ ಕಾಣದಂತೆ ಚತುರತನದಿಂದ ಮಠದೊಳಗೆ ಪ್ರವೇಶಿಸಿ ಬಸವನನ್ನು ಕುಳ್ಳಿರಿಸಿಚರಪಟ್ಟಾಧಿಕಾರವನ್ನು ಒಪ್ಪಿಸಿದನು. ತದನಂತರ ಪರುಷ ಬಟ್ಟಲವನ್ನು ಜೋಕೆಯಿಂದ ಬಸವನ ಕೈಗಿತ್ತನು. ಲಿಂಗದ ಮಹತ್ವ, ಕಾಯಕ, ದಾಸೋಹದ ಮಹತ್ವವನ್ನು ಬೋಧಿಸಿ ಮುಂದೆ ಈ ಮಠಕ್ಕೆ ಚಲುವ ಜಂಗಮನೊಬ್ಬನು ಬರುವನು. ಅವನಿಗೆ ಅಯ್ಯಾಚಾರವನ್ನು ಮಾಡಿ ನಿರ್ಮಲ ಮನದಿ ಚರಪಟ್ಟಾಧಿಕಾರವನ್ನು ಕೊಡು ಎಂದು ಬಸವನಿಗೆ ತಿಳಿಸುತ್ತಾ ;

ಸ್ಥೂಲವಾದೀ ತನುವಿನಿಂ ಕಲಿ
ಕಾಲದೊಳು ಮಹಿಮನು ತೋರ್ಪಡೆ
ಕಾಲಹರನಿಗಸಾಧ್ಯವದರಿಂ ಬೇಗಧಿಂ ನಾನು
ಮೇಲು ಮಾತಿನ್ನೇನು ತುರುಕರ
ಜಾಲ ವಿಸ್ಮಯ ಪಡುವತೆರ ಸ
ಲ್ಲೀಲೆಯಂ ಲಿಂಗೈಕ್ಯನಾಗುವ ಸರ್ವರರಿವಂತೆ ॥ ೯–೧೦೪ ॥

ಎಂದು ಹೇಳಿದಾಗ ಬಸವನು ಹೆದರುತ್ತಾನೆ. ಆಗ ಮಹಾಂತನು 'ಬೆದರಿದಿರು ನಿನಗೆ ಬಂದ ವಿಘ್ನಗಳೆಲ್ಲವನ್ನು ಪ್ರತ್ಯಕ್ಷ ಬಂದು ಪರಿಹರಿಸುತ್ತಿಹೆನು' ಧೈರ್ಯ ಬಿಡಬಾರದು. ಪಶುಗಳನ್ನು ಪಾಲನೆ ಮಾಡಬೇಕು ಎಂದು ಒತ್ತಿ ಹೇಳಿದನು. ಇತ್ತ ಸೈನಿಕರೆಲ್ಲರೂ ಮಹಾಂತನನ್ನು ಹುಡುಕಿ ಹುಡುಕಿ ಬೇಸತ್ತರು. ಆಗ ಮಹಾಂತನು ತನ್ನ ನಿಜಶಕ್ತಿಯನ್ನು ಅವರಿಗೆ ತೋರಿಸಲು ಮುಂದಾಗುತ್ತಾನೆ ನೀವೆಲ್ಲರೂ ದೂರದಲ್ಲಿ ನಿಲ್ಲಿರಿ. ನಿಮಗರಿಯದಂತೆ ಮಂತ್ರ ಪ್ರೇರಣೆಯಿಂದ ತಕ್ಷಣದಿ ಹಾವಿನ ರೂಪವನ್ನು ತಾಳಿ ಹೋಗಿ ನಿಮಗೆ ಧನವನ್ನು ತಂದುಕೊಡುವೆ ಎಂದು ಹೇಳಿದರು. ಆಗ ತುರುಕರು ಮಹಾಂತನ ಮಹಿಮೆ ನೋಡತೊಡಗಿದರು ;

ಮತ್ತಮಾ ಗುರು ಮಾಂತನಾಗಳೆ
ಉತ್ತರೀಯವ ಪೊದ್ದು ಗುಪ್ತ ವಿ

ಚಿತ್ತ ಶುದ್ಧದೊಳಿಪ್ಪ ಲಿಂಗಾರ್ಚನೆಯನೆಸಗುತ್ತ ॥
ಉತ್ತಮೋತ್ತಮ ಲಿಂಗದಲ್ಲಿ ಮನ
ವಿತ್ತು ಲಕ್ಷವ ಬಲಿಸಿ ಮುಳುಗಿಸ
ಲೆತ್ತರದ ಸಿಲೆಯೊಂದುಗಡ ಬಾಯ್ದೆರೆದು ನಿಲ್ಲಲ್ಕೆ ॥ ೯-೧೧೨॥

ಲಿಂಗದಲ್ಲಿ ಬಯಲಾದುದನ್ನು ಕಂಡರು. ಆದರೂ ಸಹಿತ ಧೈರ್ಯದಿಂದ "ಸಿಲೆಯ ನೋಡ್ಯತಿ ಕಂಗೆಡುತ" ಎಡಬಲಗಳಲ್ಲಿ ಸೈನ್ಯವನ್ನು ನಿಲ್ಲಿಸಿದರು. ಏಳು ದಿವಸಗಳವೆರೆಗೆ ಕಾಯ ತೊಡಗಿದರು. ತಪೋಮಹಿಮ ಮಹಾಂತ ಮರಳಿ ತನ್ನ ಮಹಿಮೆಯನ್ನು ತುರುಕರಿಗೆ ತೋರಿಸಬೇಕೆಂದು ಮೊರಡಿಯ ಮೇಲೆ ಪ್ರತ್ಯಕ್ಷನಾದ. ಆಗ ತುರುಕರು ಹಿಡಿಯಿರಿ, ಕೊಲ್ಲಿರಿ ಎಂದು ಅರ್ಭಟಿಸತೊಡಗಿದರು. ಆಗ ಮಹಾಂತ ಮತ್ತೆ ಬಯಲಾಗಿ ಗುಪ್ತ ಶರಗಳು ತುರುಕರ ಎದೆಯೊಳು ತಾಗಿದವು. ಅವರು ರಕ್ತಕಾರಿ ಅಸುವಳಿದರು. ತಮ್ಮ ಸೈನಿಕರ ಹೆಣವನ್ನು ನೋಡಿದ ಸೇನಾಪತಿ ವಿಸ್ಮಯಗೊಂಡು ಹಸುಗಳಾಸೆಯ ಬಿಟ್ಟು ಬಲು ಕಸಿವಿಸಿಗೊಂಡು ಡೋರನಹಳ್ಳಿಯ ಬಿಟ್ಟು ವಿಜಾಪುರದ ದಾರಿಯನ್ನು ಹಿಡಿದನು.

ಇತ್ತ ಮಹಾಂತನು ಕೂಡಾ ಗುಡ್ಡಕ್ಕೆ ಪೋಗಿ ಲಿಂಗದೊಳು ಬಯಲಾದನು. ಈ ಸುದ್ದಿಯನ್ನು ತಿಳಿದ ಊರ ಜನರೆಲ್ಲರೂ ಬಂದು ಕರ ಮುಗಿದು ವಂದಿಸಿ ಮಹಿಮನನ್ನು ನೆನೆದು ದುಃಖ ಸಾಗರದಲ್ಲಿ ಮುಳುಗಿದರು. ಪರಿಪರಿಯಾಗಿ ಹಲವು ವಿಧದಿಂದ ಗುರುವನ್ನು ತಂದೇ ನೀನೆ ತಾಯಿ ನೀನೆ ಬಾ ಬಾ ಎಂದು ಪ್ರಲಾಪಿಸುತ್ತಾರೆ. ಇಡೀ ಊರ ಜನರೆಲ್ಲರೂ ಬಂದು ಮಹಾಂತನನ್ನು ಬೇಡಿಕೊಂಡಾಗ ಪ್ರತ್ಯಕ್ಷನಾಗುತ್ತಾನೆ.

ಇನಿತು ಭಕ್ತರ ದೀನ ನುಡಿಗೇ
ಳ್ದನುಪಮಚರಿತ್ರನು ತವಕದಿಂ
ತನುಸಹಿತ ಪ್ರತ್ಯಕ್ಷ ತೋರಿಸಿ ದೂರದೊಳ್ನಿಂದು
ಜನಸಮೋಹಕ್ಕಂದ ನೈ ನಿ
ಮ್ಮನು ಪೊರೆವೆ ನಾ ಗುಪ್ತದಿಂದನು
ಮಾನವಳಿದು ಸ್ವಗೃಹಕೆ ಚರಿಸರಿಯೆಂದು ಬೈಲಾದ ॥ ೯-೧೨೪॥

ಬೈಲಾಗಿ ಪ್ರತಿ ಅಮವಾಸಿ ಬೈಲಾಗಿರ್ಪಲ್ಲಿಗೆ ಬಂದು ಪೂಜಿಸಿದರೆ ನಿಮಗೊದಗುವ ವಿಘ್ನಗಳನ್ನು ದೂರ ಮಾಡುವೆ. ಶ್ರಾವಣದ ಶಶಿವಾರದೊಳಗೆ ಅರ್ಚಿಸಿದರೆ ಇಷ್ಟಾರ್ಥಗಳ ಪೂರೈಸುವೆ ಎಂದು ಗೌಪ್ಯದಿ ಹೇಳಿದ ನುಡಿಗಳನ್ನು ಕೇಳಿ ಜನರೆಲ್ಲರೂ ಗುಹೆಗೆ ವಂದಿಸುತ್ತ ತಮ್ಮಯ ಮನೆಗಳಿಗೆ ತೆರಳುತ್ತಿದ್ದರು. ಆಗ ಮಹಾಂತನು ಕೂಗಿ ;

ಆಗ ಮನೆಗೈದುವ ಜನಕ್ಕೊಳಿ
ತಾಗಿ ಕೇಳಿಸುವಂತ ದೃಶದಿಂ
ಕೂಗಿದನು ಗುರುವರನು ಶ್ರೀಮದ್ರೇವಣಾರಾಧ್ಯ
ಮಾಗನಾಗೇಳ್ನೂರು ವತ್ಸರ
ಹೇಗೆ ತಾನಿಲ್ಲರ್ದನದರಂ
ತೀಗ ನಾ ಮೂನ್ನೂರು ಮೇಲೈವತ್ತು ವರುಷಗಳ ॥ ೯-೧೨೭॥

ಉಸುರಿದ ನುಡಿಗಳನ್ನು ಕಿವಿತೆರೆದು ಆಲಿಸಿದರು. ಆಗಸಕ್ಕೆ ಮುಖವೆತ್ತಿ ದೈನ್ಯದೊಳು ಕರಮುಗಿದು ತೆರಳಿದರು ಊರ ಜನರೆಲ್ಲರು.

ಮಹಾಂತನು ಐಕ್ಯನಾದ ಆದರೂ ಅವನ ಘನ ಮಹಿಮೆಗಳು ಒಂದೊಂದಾಗಿ ನಡಿಯತೊಡಗಿದವು. ಇಲ್ಲಿ ಗುರು ಮಹಾಂತನ ಅನಂತ ಮಹಿಮೆಗಳನ್ನು ತೋರಿಸಿರುವುದನ್ನು ಕೇವಲ ಒಂಬತ್ತನೆಯ ಸಂಧಿಯ ೧೪೫ ಪದ್ಯಗಳಲ್ಲಿಯೇ ಇಡೀ ಪುರಾಣದ ಚಿತ್ರಣವಿದೆ. ಒಟ್ಟಿನಲ್ಲಿ ಇದು ಮಹಾಂತನ ಸಾಧಕ ಜೀವನದ ಒಂದು ಘಟ್ಟ. ಮಹಾಂತನ ಸಾಧಕ ಬದುಕಿನ ಏಳು-ಬೀಳುಗಳ ಜೀವನದ ಜೊತೆಗೆ ಪರಿಪಕ್ವದ ಮನಸ್ಸು, ಗಟ್ಟಿಗೊಂಡ ಆತ್ಮವಿಕಾಸ, ಹಾಗೂ ಜ್ಞಾನೋದಯ ಈ ಕಾವ್ಯದಲ್ಲಿ ಮೂಡಿ ಬಂದಿದೆ. ಕವಿಕೂಡಾ ಸಿಹಿಯಾದ ಮಕರಂದವನ್ನು ಹೀರಿ ಸವಿಯಾದ ಮಧುವನ್ನೇ ನೀಡುವುದರ ಮೂಲಕ ಸದ್ಗುರು ಮಹಾಂತೇಶ್ವರ ಪುರಾಣವೆಂಬ ಕಾವ್ಯಾಮೃತವನ್ನು ನಿರಪೇಕ್ಷೆಯಿಂದ ನೀಡಿರುವುದು ಸಂತೋಷದ ಸಂಗತಿ.

ಡಾ. ಶಾಂತಪ್ಪ ಎನ್. ಡಂಬಳ

ಪ್ರೊ. ಮಲ್ಲಪ್ಪ ಮಾನೆಗ್ಗರ

ಪರಿವಿಡಿ

ಡೋರನಹಳ್ಳಿ ಮಹಾಂತೇಶ್ವರ ಪುರಾಣ

೧ನೇ ಸಂಧಿ

ಶ್ರೀ ವಿಹಿತ ಗುರುನಾಥ ನಿತ್ಯನಿ
ರಾವರಣ ನಿರ್ದ್ವಂದ್ವ ನಿರುಪಮ
ಭಾವ ಶೂನ್ಯ ಪರಬೊಮ್ಮ ಜ್ಞಾನಕರನುಮೆಂದು
ಪಾವನಾಂಬಕ ಹರಿವಿರಂಚಿ ಸು
ರಾವಳಿಯು ನರರಕ್ಕಸರು ಬಿಡ
ದಾವಗುಂ ಧ್ಯಾನಿಸುವರಾ ಪರಿ ನುತಿಸುವೆಂ ಪೊರೆಯೈ ೧

ವಾಮದೇವ ನಿರಾಮಯ ಸುಗುಣ
ಧಾಮ ಶಿವಭವ ಭೀಮ ಸನ್ನುತ
ನಾಮ ಮೃಡಸುರ ಪಾಮರಾರ್ಚಿತ ಶ್ಯಾಮಲಗ್ರೀವ
ಸೋಮಶೇಖರ ತಾಮಸ ರಹಿತ
ಕಾಮಪುರ ನಿರ್ಧೂಮ ಮಹಿಮೋ
ದ್ದಾಮ ಯೆನ್ನಂ ಪ್ರೇಮದಿಂ ಪೊರೆ ಕಾಮಿತವನಿತ್ತು ೨

ಮಾರಹರನರ್ಧಾಂಗಿ ಗಣಪ ಕು
ಮಾರ ಜನನಿ ಮೃಗೇಂದ್ರವಾಹಿ ಉ
ಮಾರಮಾ ವಾಗ್ದೇವಿ ಪೂಜಿತೆ ನಿರುಪಮ ಸುಚರಿತೆ
ನಾರದಾದಿ ಮುನಿ ನುತೆ ಯನ್ನನ
ನಾರತಂ ಪೊರೆ ನಿನ್ನ ಚರಣ ಘ
ನಾರವಿಂದ ದ್ವಯಕೆರಗಿ ಸ್ಮರಿಸುವೆನು ಶಾಂಕರಿಯೇ ೩

ಶ್ರೀ ಗುರುವೆ ಸಕಲಾಗುರುವೆ ರ
ಕ್ಷಾ ಗುರುವೆ ಬೋಧಾ ಗುರುವೇ ಸು

ಧೀ ಗುರುವೆ ಮೋಕ್ಷಾ ಗುರುವೇ ಮದ್ಗುರುವೆ ನಿನ್ನನಿಶಂ
ಭೂ ಗಗನ ಪಾತಾಳ ನರಸುರ
ನಾಗಕಿನರರು ಗುರುವಧಿಕ ನೆಂ
ಬಾಗಮವನೋದುವರು ಗುರು ಶಂಕರನೆ ಪೊರೆಯನ್ನ ೪

ಪರಮ ಸದ್ಭಕ್ತಾಬ್ಧಿ ಚಂದಿರ
ದುರಿತತಿಮಿರೌಘ ಪ್ರಭಾಕರ
ಹರಿಯಜ ಸುರ ಪ್ರಮುಖ ನುತಪರತರ ಚರಿತನಿಕರ
ಕರಿವದನ ಹೇರಂಭ ಲಂಬೋ
ದರ ವಿನಾಯಕ ವಿಘ್ನಹರ ಶುಭ
ಕರ ನಿರಂತರ ಪಾಲಿಸೆನ್ನಂ ಪಾರ್ವತೀ ಕುವರ ೫

ರುದ್ರನಕ್ಷಿಯೋಳುದ್ಭವಿಸಿಯಾ
ರುದ್ರರೂಪದಿಯಾಗಕೆ ನಡೆದು
ರುದ್ರಭಾಗವ ಬೇಡೆ ಕೊಡದಿರೆ ದಕ್ಷ ಶಿರವರಿದು
ರುದ್ರ ಸಖ ಮುಖ್ಯಾಮರ ಗಣವು
ರುದ್ರಗೊಪ್ಪಿಸಿ ಮೆರೆದ ಪ್ರಳಯದ
ರುದ್ರನೆನಿಸಿದ ವೀರಭದ್ರಗೆ ಭಕ್ತಿಯಿಂ ನಮಿಪೆ ೬

ಕೆಟ್ಟ ದಾನವರೊಟ್ಟುಗೂಡುತ
ಕಟ್ಟಿ ಸುರರನು ಕುಟ್ಟುತಿರಲಾ
ಪೆಟ್ಟಿಗವರೆದೆಗೆಟ್ಟು ಪುರವನು ಬಿಟ್ಟು ಶಂಕರಗೆ
ಆಟ್ಟುಳಿದು ಮೊರೆಯಿಟ್ಟು ನುತಿಸು
ತ್ತಿಟ್ಟನೇ ತಾಂ ಪುಟ್ಟಿ ತಾರಕ
ನಟ್ಟಿ ಕೊಲ್ಲಿದಧಿಷ್ಟ ಷಣ್ಮುಖಗಿಷ್ಟದಿಂ ನಮಿಪೆ ೭

ವಾಣಿ ಪುಸ್ತಕ ಪಾಣಿ ಪನ್ನಗ
ವೇಣಿ ಮಂಜುಳ ವಾಣಿ ಸದ್ಗುಣ
ಶ್ರೇಣಿ ಬ್ರಹ್ಮನ ರಾಣಿ ತ್ರಿಭುವನ ಜಾಣಿ ಕಲ್ಯಾಣಿ
ಮಾಣದೀ ಕೃತಿಗೂಣಿ ಯೆಸಗದ
ತ್ರಾಣವಿತ್ತು ಪ್ರವೀಣೆಯೆನ್ನನು
ಕ್ಷೋಣಿಯೊಳು ಪೊರೆ ಕೇಣಗಳನಳಿಸುತ್ತಲನುದಿನದಿ ೮

ಧನಕನಕ ವಾಹನ ತನೂಭವ
ತನುಧರಾ ಮೊದಲಾದ ವಸ್ತುವ
ಮನಸಿಜಾಂಬಕ ಭಕ್ತಿಯಿಂ ಗುರುಲಿಂಗ ಜಂಗಮಕೆ
ಅನುನಯದೊಳಿತ್ತತ್ತು ಶಿವಕೃಪೆ
ಯನು ಪಡೆದು ಹರಲೋಕಕ್ಕೈದಿದ
ಘನ ಮಹಿಮರರುವತ್ತು ಮೂರು ಪುರಾತನರ ನುತಿಪೆಂ ೯

ಧರಣಿಯೊಳು ಶಿವಭಕ್ತಿ ಕ್ಷೀಣಿಸ
ಲಿರದೆ ಮೃಡನಪ್ಪಣೆಯೊಳುದಿಸೀ
ಶ್ವರನ ಧ್ಯಾನದೊಳಿರ್ದುಗಡ ಪರಮತವ ಖಂಡಿಸುತಂ
ಹರನ ಭಕ್ತಿಯನಾಂತು ಪರಮೇ
ಶ್ವರನ ಮಹಿಮವ ತೋರಿ ಶಂಕರ
ಪುರಿಗೆ ತೆರಳಿದ ಬಸವ ಮುಖ್ಯ ಪ್ರಮಥರನುತಿಸುವೆನು ೧೦

ವೀರಶೈವ ಸುಧರ್ಮವೆಂಬಾ
ಚಾರವೃದ್ಧಿಸಲೋಸುಗಂ ಮಾ
ರಾರಿಯಪ್ಪಣೆಯಿಂದುದಿಸಿ ಬಿಜ್ಜಳನ ಗರ್ವವನುಂ
ಸೂರಿಗೈದಷ್ಟಾವರಣಗಳ
ಸಾರ ಮಹಿಮಂಗಳನು ಲೋಕಕೆ
ತೋರಿ ಬೆಳಗಿದ ಗುರು ಬಸವನೆಮಗೀಗೆ ಭಕ್ತಿಯನು ೧೧

ಹರನಲಿಂಗಮುಖದಿ ಜನಿಸಿ ಮುನಿ
ವರನೆನಿಪಗಸ್ತ್ಯನಿಗೆ ಪರಮೇ
ಶ್ವರನ ದೀಕ್ಷೆಯನಿತ್ತು ಶಿವಸಿದ್ಧಾಂತವನು ತಿಳಿಸಿ
ಅರಿತು ಸಪ್ತ ಶತಾಬ್ದ ಭುವನದೊ
ಳರಿಯದೇಳ್ನೂರ್ವರ್ಷ ಬಾಳ್ದುರು
ತರ ಮಹಿಮೆಗಳ ತೋರ್ದ ರೇವಣಸಿದ್ಧನಂ ನುತಿಪೆ ೧೨

ಮೂರು ತಿಂಗಳು ಜನನಿ ಗರ್ಭದೊ
ಳಾರು ತಿಂಗಳ ಭುವನ ಮಧ್ಯದಿ
ಸೇರಿ ಜನಿಸುತ ತಂದೆ ರೇವಣಸಿದ್ಧನಾಜ್ಞೆಯೊಳು

ಧೀರ ಕಲ್ಲಯ್ಯಂಗೆ ಶಿವ ದೀ
ಕ್ಷಾರಚಿಸಿ ರಂಭಾಪುರಿಯ ಗುರು
ಸಾರ ಪಟ್ಟವನಾಂತ ರುದ್ರ ಮುನೀಂದ್ರಗೆರಗುವೆನು ೧೩

ನಡೆದುದೇ ಸನ್ಮಾರ್ಗ ಪ್ರೀತಿಲಿ
ನುಡಿದುದೇ ಶಿವಮಂತ್ರ ಮನದಿಂ
ಪಿಡಿದುದೇ ಸದ್ವ್ರತ ವಿಧಾನವು ಇವರ ದರ್ಶನವ
ಪಡೆದನೇ ಬಹು ಧನ್ಯ ಮುಡಿದುದ
ಮುಡಿದನೇ ಕೃತಕೃತ್ಯ ಪದಜಲ
ಕುಡಿದನೇ ಸನ್ಮುಕ್ತನಿಂಥ ಮಹಾತ್ಮರನು ನುತಿಪೆಂ ೧೪

ಮೆರೆವ ಮಲ್ಹಣ ಬಾಣ ರಾಘವ
ಹರಿಹರ ಹಲಾಯುಧ ಸುಮತಿ ಭೀ
ಮರಸ ಸೋಮಾರಾಧ್ಯ ಕವಿವರ ಕಾಳಿದಾಸಾಖ್ಯ
ಪರಮ ಪಂಡಿತ ಮಲ್ಲಣಾರ್ಯ ಸು
ಕರ ನಿಜಗುಣಾರಾಧ್ಯ ಉದ್ಭಟ
ವರ ಮಯೂರಾದ್ಯಖಿಳ ಶಿವಕವಿಗಳ್ಗೆ ನಮಿಸುವೆನು ೧೫

ಚತುರರಂತಲೆದೂಗಿಪಂತಿದು
ಕೃತಿಸದಿರ್ದರೆ ಭೂಮಿಯೊಳಗೀ
ಕೃತಿಗೆ ಭಂಗಮದೆಂದು ಮದ್ಗುರುನಾಥ ಶಂಕರನು
ಹಿತದಿ ಹೃದ್ವನಜದೊಳು ವಾಸಿಸಿ
ಮತಿಗೆ ಮಂಗಲವಿತ್ತು ನುಡಿಸಿದ
ಗತಿಯೊಳಿದನುಸುರಿದೆನು ಪಂಡಿತರಾಲಿಸುವದೊಲಿದು ೧೬

ಕೃತಿಯ ಪೆಸರು ಮಹಂತ ಚರಿತವು
ಕೃತಿಗೊಡೆಯನಾವರ ಮಹಂತನು
ಕೃತಿಯ ರಸ್ತಾಪುರದ ಶರಭೋಪಾಸಕನೆನಿಸುವ
ಕ್ಷಿತಿಯೊಳಗೆ ಭೀಮಾಖ್ಯ ಕವಿತಾ
ಹಿತದೊಳೀ ಪೌರಾಣ ರಚಿಸಿದ
ಸತತ ಸಾಸಿರದಳದೊಳಿಹ ಗುರು ಶಂಕರನ ಬಲದಿ ೧೭

ಮೊಡವಿಯೊಳುಗೀರ್ವಾಣ ಭಾಷೆಯ
ತೊಡಕುಗಳ ನಾನರಿಯೆ ಬಿಡುಗ
ನ್ನಡದಿ ರಚಿಸಿದೆ ಬಲ್ಲನಿತರೊಳು ಚತುರರೀಕೃತಿಯ
ಬಿಡದೆ ಕೈಕೊಂಡೋದಿದಡೆ ಹೃ
ಜ್ಜಡ ಜರೆದು ರವಿಯೆನಿಸದೇ ಕಿವಿ
ಗೊಡುವದೆದರ್ಥಿಯೊಳು ಸತ್ಪುರುಷರ್ಗೆ ನಮಿಸುವೆನು ೧೮

ಕವಿಯೆನಿಸಿಕೊಂಬುವ ಭ್ರಮೆಗೆ ಈ
ಕವಿತೆಯನ್ನುತ್ಸವದಿ ಪೇಳಿದ
ನವನಿಜನರಿದನವಧರಿಸುದವಂತೆಂಬುದನು ಮರೆದು
ಶಿವನ ವರದಿಂದವತರಿಸಿದಾ
ಶಿವಸ್ವರೂಪಿಗಳಮಲಚಾರಿ
ತ್ರವನಿದಂ ಭಕ್ತಾದಿಗಳು ಸನ್ಮನದೊಳಾಲಿಪುದು ೧೯

ಧರಣಿಯೊಳು ಛಂದಸ್ಸು ಲಕ್ಷಣ
ಪರಮ ಯತಿ ಪ್ರಾಸಾದಿಗಳಿಗನು
ಸರಿಸಿ ಬಲ್ಲಂತುಸುರಿದೆನಿದಂ ಸರ್ವರರಿವಂತೆ
ಮರವೆಯಿಂ ತಪ್ಪಾದ ಶಬ್ದಗ
ಳಿರಲವಂ ನೋಡ್ದೊಡನೆ ವಿಲಸ
ತ್ಕರುಣದಿಂ ತಿದ್ದಿಪುದೆನುತ ವಿಬುಧರ್ಗೆ ವಂದಿಸುವೆ ೨೦

ಇಂತು ಕವಿಭೀಮಾಖ್ಯ ಪೇಳ್ದಮ
ಹಾಂತ ಮಾಹೇಶನ ಚರಿತ ಸಲೆ
ಸಂತಸದಿ ಬರದೋದಿ ಕೇಳಿದವರ್ಗೆ ಪೇಳ್ದರ್ಗೆ
ಸಂತತಂ ಘನಭೋಗಭಾಗ್ಯಮ
ನಂತಮಿತ್ತಿಹ ಪರದಿಕೃತಿಕ
ರ್ತಂತವಕದಿಂ ಪಾಲಿಸಲಿ ಅತ್ಯಂತ ಹರುಷದಲಿ ೨೧

ಅಂತು ಸಂಧಿಯೊಂದಕ್ಕುಂ ಪದವು ೨೧ ಕ್ಕುಂ

ಮಂಗಲ ಮಂಗಲಂ

೨ನೇ ಸಂಧಿ

ಸೂಚನೆ: ಸತಿಸುಮಂಗಲೆಯನ್ನು ಕರಕೊಂ
ಡತಿ ಭರದಿ ರಂಭಾಪುರಿಗೆ ವರ
ಸುತನ ಪಡೆಯುವೆನೆಂದು
ಚರಸೋಮಾಖ್ಯಗಮಿಸಿದನು

ಕರುಣ ಶರಧಿ ಸುಧಾಕರಂ ಸುರ
ನರವಿನುತ ಸುಗುಣಾಕರಂ ಶಂ
ಕರ ಶಿವಾಧವ ಶ್ರೀಕರಂ ಶಶಿಮೌಳಿ ಶೂಲಧರಂ
ದುರಿತ ತಿಮಿರ ಪ್ರಭಾಕರಂ ಪರ
ತರ ಸುಕೃತರತ್ನ ಕರಂ ಉರು
ತರರುಜಾಳಿಯ ಭೀಕರಂ ಕುಡುಗೆಮಗೆ ಮಂಗಲಮಂ ೧

ಶಿವ ಕಥೆಯನಾಲಿಸುತ ಸಂತತ
ಶಿವ ಪುರಾಣವ ರಚಿಸುತಂ ಪರ
ಶಿವ ಭಕುತರಾಶ್ರೈಸುತಂ ಶಿವಲಿಂಗ ಪೂಜಿಸುತೆ
ಶಿವಮತಾಂಬುಧಿ ಚಂದ್ರನೆನಿಸುತ
ಶಿವ ಶರಣರನು ನೋಡಿ ಹಿಗ್ಗುತ
ಶಿವ ವ್ರತದಿ ಸೋಮಯ್ಯ ದೇವನಪಳ್ಳಿಯಲ್ಲಿರ್ದ ೨

ಅತ್ರಿಮುನಿಗನುಸೂಯ ಕೈರವ
ಮಿತ್ರನಿಗೆ ರೋಹಿಣಿಯು ಪೂಶರ
ಶತೃವಿಗೆ ಶಿವೆಯಂತೆಯಾ ಸೋಮಯ್ಯ ಸುಚರಂಗೆ
ಚಿತ್ರಬೊಂಬೆಯೊಲೆಸೆವ ಸುಕಮಲ
ನೇತ್ರೆ ಮಂಗಲೆಯೆಂಬ ಸತಿಯು ಧ
ರಿತ್ರಿಯೊಳು ಮೆರದಿರ್ದಳಾಪತಿ ಸೇವೆಯೊಳು ನಿರುತಂ ೩

ಸತಿಸುಮಂಗಲೆಯನ್ನು ಕೂಡ್ದಾ
ಪತಿಯೆನಿಪ ಸೋಮಯ್ಯ ತಾಂ ಸಂ
ಸ್ಕೃತಿಯೊಳಿರಲೊಂದಿನದಿ ಸುದತೀಮಣಿಯಳನು ಕರೆದು
ಗತಿಗೆ ಯೋಗ್ಯ ಸುಪುತ್ರನೋರವ
ಕ್ಷಿತಿಯೊಳೆಮ್ಮಗೆ ಜನಿಸಲಿಲ್ಲದ
ಕತಿ ವೆಸನಮಾಯ್ತಕಟ ಮಾನವ ಜನ್ಮಸುಡಲೆಂದು ೪

ಅಂದ ನುಡಿಗಳ ಕೇಳ್ದು ಮಂಗಲೆ
ದಂದುಗದಿ ಪ್ರಿಯಗೆರಗಿ ನುಡಿದಳು
ಇಂದುಧರನ ಕಟಾಕ್ಷವೆಮ್ಮೊಳಗಿಲ್ಲದಂತಾಯ್ತು
ಸುಂದರಾಂಗನೆ ಚಲ್ವಣುಗನಂ
ಚಂದದಿಂ ಪಿಡಿದೆತ್ತದಿರ್ಪರ
ವಿಂದನಾಳ್ಪಮದೋಳ್ಗಳಲ್ಲವು ಬಾಗಿಲೆಯ ತೋಳು ೫

ಕುವರನಂ ಪಿಡಿದೆತ್ತಿ ಸರ್ವಾಂ
ಗವನಿರೀಕ್ಷಿಸದಿರ್ದಲರ್ಗ
ಣ್ಗವನಿಯೊಳಗಲ್ಲಲ್ಲಿ ವೀಸುವ ಬಲೆಯಗಣ್ಣುಕಣ
ತವೆ ಕುತೂಹಲವೆತ್ತು ಶಿಶುವಿನ
ತವಕದಿಂ ಮುಖ ನೋಡಿ ಮುದ್ದಿ
ಕ್ಕುವದಿರದ ಬಾಯಲ್ಲ ಕಾಂತನೆ ಬಿಲದ ಬಾಯಿ ತಿಳಿ ೬

ಮಗನ ನೋಡ್ದು ಮಹಾವಿಭವದಿಂ
ಮೊಗಕೆ ಮುದ್ದಿಟ್ಟವಸರದಿ ಪುಟ
ನೆಗಿಸುತಾಗಳೆ ಮಾತನಾಡಿಸಿ ಕರತಳಗಳೊಡ್ಡಿ
ಮಿಗೆ ಹರುಷದಿಂ ಪಿಡಿದು ತನ್ನಯ
ಬಗಲೊಳೆತ್ತುತ ಮೂಲೆಗುಡಿಸಿ ಮೃದು
ನಗಿಸಿ ತೊಟ್ಟಿಲಕಿಡುವ ಸತಿಯೇ ನೋಡಿ ನೋಂತಿಹಳೊ ೭

ನಳಿನಮಂ ತಳಿಯದ ಕೊಳಂ ಮೇ
ಣಳಿಯನುಂ ತಳಿಯದ ಸರೋರುಹ
ಗಿಳಿಯನುರೆ ತಳಿಯದರ ಸಾಲದ್ರುಮಂಮರಾಳವನುಂ

ತಳಿಯದ ಸರೋವರ ಸುಗರ್ಭದ
ಕಳೆಯ ತಳಿಯದ ಸತಿಯ ಪೊಡೆ ಭೂ
ತಳದಿ ವ್ಯರ್ಥಮದಲ್ತೆ ವಿವೇಕದಿಂ ನೋಡು ೮

ಮಣಿಯನಿಲ್ಲದ ಮೇಖಲೆಯು ದಿನ
ಮಣಿಯನಿಲ್ಲದ ಗಗನ ಮಂಡಲ
ಹಣವನಿಲ್ಲದ ಬಾಳ್ವೆ ಕಳೆಯಿಲ್ಲದ ಸತಿಯರನ್ನೆ
ಗುಣಮದಿಲ್ಲದ ಸಿರಿಯು ಮೂಲ
ಪ್ರಣವ ವಿಲ್ಲದ ಮಂತ್ರಮೂಲವಿಂ
ಕುಣಿಯುವರ್ಭಕನಿಲ್ಲದರಸು ಮನೆಯೇಂ ಮಂಜುಳಮೇ ೯

ಧನಕನಕ ವಸ್ತ್ರಾಭರಣ ಸಂ
ಜನಿತ ಮಾದೊಡದೇಂ ವಿರಾಜಿಪ
ಮನೆಯದಿರ್ದೊಡದೇಂ ಮನಕ್ಕತಿ ಸಂತಸಗೊಳಿಪುದೇ
ತನುಜರುದಯಿಸದಿರ್ವಡೆಳೆಯೊಳು
ಮನುಜರಿಗೆ ಸುಖಮೆಲ್ಲಿ ಪರದೊಳು
ಘನತರದ ಗತಿಯೆಲ್ಲಿ ತಿಳಿಯೊಮ್ಮದೀಯ ವಲ್ಲಭನೆ ೧೦

ಜಗದೊಳಗೆ ಮಾದೇವಿಯಮ್ಮಾ
ವ್ವೆಗಳು ಮಕ್ಕಳ ಮೋಹದಿಂದ್ಯೆ
ಮೊಗನ ಸದ್ಭಕ್ತಿಯೊಳು ಧ್ಯಾನಿಸಲಾಗಲಾಶಿವನು
ಬಗೆದು ಮಗು ರೂಪದಿ ಬರಲ್ಕವ
ರಗಣಿತಾನಂದಂಬಡುತ ತವೆ
ಬಗಿಸ ನಿಜಸುತನಂತೆ ಪಾಲಿಸಲಿಲ್ಲವೇಕಾಂತ ೧೧

ಇಂದು ಇಲ್ಲದ ಇರುಳು ಮೇಣರ
ವಿಂದ ಸಖನಿಲ್ಲದ ಜಗಂ ನೆರೆ
ಕಂದನಿಲ್ಲದ ಮನೆಯ ಕಣ್ಗೆ ವಿರಾಜಿಸುವದೆಂತು
ಹಿಂದೆ ಸತ್ಪುರುಷರನು ಕಂಡಾಂ
ನಿಂದಿಸಿರುವೆನೊ ತಿಳಿಯದಕ್ಕಟ
ಬಂದಿತೆನಗೀ ಬಂಜೆತನವೆಂದಳಲ್ದಳಾ ಸತಿ ೧೨

ತರುಣಿಯಾಡಿದ ನುಡಿಗಳನು ಕೇ
ಳ್ದಿರದೆ ತತ್ಪ್ರತಿ ನುಡಿದ ನೆಲೆ ನಿ
ನ್ನಿರವದೇಂ ಬಿಡು ಬಿಡು ಉಮೇಶನ ಕರುಣವೊಂದಿರದೆ
ನರರಿಗಾತ್ಮಜರುದ್ಭವಿಸುವರೆ
ಮರುಳರಂದದಿ ಬರಿದೆ ಮನದೊಳು
ಮರುಗುವದಿದೊಳ್ಳಿತವೆಸೈರಿಸಿಸುಮ್ಮನಿರುಯೆಂದ ೧೩

ಪರಿಪರಿಯೊಳಾ ದಂಪತಿಗಳಾ
ಲ್ಪರಿದುದು ಗುಹದೊಳಿರುತಿರಲರ
ಸಿರುಹ ಸಖನಿವರಳಲ ನೋಡ್ದಿರಲಾರೆನೆಂಬಂತೆ
ಭರದಿ ಪಶ್ಚಿಮಗಿರಿಗಿಳಿಯಲಾ
ತರುಣಿ ಮಂಗಲೆಯಳ್ಗೆ ತತ್ಪ್ರತಿ
ಮರುಕದಿಂ ಹಿತ ನುಡಿಯ ಬೋಧಿಸಿ ಸ್ವಗೃಹದೊಳಿರ್ದ ೧೪

ಬಳಲಿದವು ವರ ಚಕ್ರವಾಕಗ
ಳಳಲಿದವು ಕಮಲಂಗಳಾಗಳೆ
ತೊಳಲಿದವು ಖಗವೃಂದದಿನಕರ ವತ್ತಗಿರಿಗಿಳಿಯೇ
ಇಳೆಯೊಳೆತ್ತೆತ್ತೆತ್ತಲುಂತಮ
ಬೆಳೆದು ವ್ಯಾಪಿಸಿ ರಾತ್ರಿಯಂಗನೆ
ತಳೆದಮಣಿ ದೀಪಗಳೊಯೆಂಬಂತುಡುಗಣಂ ಮಿಸುಗೆ ೧೫

ಸತಿವೆರಸಿ ಸೋಮಯ್ಯನಿರುಳಲಿ
ಸಿತಿಗಳನ ನಾಮಸ್ಮರಣೆಯನು
ಹಿತದಿಗೈಯುತ ಲಿಂಗಪೂಜೆಯ ತೀರ್ಚಿ ಸಮ್ಮುದದಿ
ಗತಿಗೆ ಯೋಗ್ಯನೆನಿಪ್ಪ ನಿರ್ಮಲ
ಸುತನೊಗೆದಪನೊ ಇಲ್ಲವೋ ಯೆಂ
ದತಿಶಯಾಲೋಚನೆಗೆ ತನುವನುಮಾಡಿ ಕುಳ್ಳಿರಲು ೧೬

ಸರಸಿಜಭವಂ ಸಕಲ ಭ್ರೂ ಭೂ
ಮಿರುಹ ದೇವಾಲಯ ಸರೋವರ
ಗಿರಿಗಳನು ಬಳ್ಳಿಯೊಳು ವಿರಚಿಸಿದಂತೆ ಬೆಳ್ಳಾಗಿ

ಮಿರುಗುತಿಹ ಮೌಕ್ತಿಕಗಳನು ತೀ
ವಿರುವ ಸ್ಫಟಿಕದ ಭರಣಿಯೆಂದದಿ
ವರಪ್ರಕಾಶದಿ ಪೂರ್ವದಿಶೆಯೊಳು ಮೂಡಿದನು ಶಶಿಯು ೧೭

ಸರಸಿಜಾಂತಕ ನಮೃತರಂಜಿತ
ನುರುಕುಮುದ ಭಾಂಧವನು ದೋಷಾ
ಕರನು ಸತ್ಕರಣಾವಲಂಬಿತನೆನ್ನೊಳುದಿಸಿದನು
ಧರೆಯೊಳೆನ್ನಂತಿಂಪು ತೋರ್ಪನೊ
ಅರಿಯಬೇಕೆಂದಿಂಗಡಲು ತಾ
ನಿರಹೆ ಬರ್ಪಂತಮಿತಿ ಚಂದ್ರಿಕೆ ಬಿಡದೆ ಪಸರಿಸಿತು ೧೮

ನಲಿದವಾಗಳೆ ಕುಮುದಗಳ್ತವೆ
ಯೊಲಿದವಾಗಳೆ ಕೋರಕಂಗಳು
ಬಲಿದವಾಗಳೆ ತರುಲತಾದಿ ಸಸಿಗಳ ತಂಡಗಳು
ಚಲಿಸಿದರು ವಿರಹಿಗಳುಗಡಮೂ
ದಲಿಸಿದರು ಚೋರರು ತುಹಿನಕರ
ಸಲೆನಭೋ ಮಾರ್ಗದಿ ಗಮಿಸಲಿಂತಾಂಬತಾಕ್ಷಣದಿ ೧೯

ತನ್ನ ಸತಿಯಳಿಗಿಂದುವಿನ ವರ
ಜೊನ್ನದೊಳ್ನಡೆದತಿ ವಿಚಿತ್ರಗ
ಳನ್ನು ತೋರುತ್ತವಳ ಮನಸಿನ ವೆಸನಮಳಿಸುತಲಿ
ಪನ್ನಗಾಭರಣನ ಸುಭಕ್ತಿಲಿ
ಸನ್ನುತಿಯಗೈದಾಲಯದಿ ಪರ
ಮಾನ್ನ ಭಕ್ಷಿಸಿ ಪವಡಿಸಿದರತ್ಯುತ್ಸವದಿಗೂಡಿ ೨೦

ವರ ಸರಸ್ವತಿ ಪತಿರಮಾಪತಿ
ಪರಮ ಪಾರ್ವತಿ ಪತಿ ತ್ರಿಮೂರ್ತಿಗ
ಳಿರವ ತನ್ನೋಳ್ತಳೆದುರವಿ ಬೊಮ್ಮಂಡ ಪೊರೆವುದಕೆ
ಬರುವನೆಂದು ಭಟರ್ಜನಕ್ಕೆ
ಚ್ಚರಿಸಿದಂತಾ ಪುರದಿಕುಕ್ಕುಟ
ಸ್ವರವನೆತ್ತಿ ಸರಾಗದಿಂ ಕೂಗಿದವು ಅಡಿಗಡಿಗೆ ೨೧

ಕೋಳಿ ಕೂಗಿದ ಧ್ವನಿಯನಾಗಳೆ
ಕೇಳಿ ಸೋಮಯ್ಯನು ಸತಿಯಮನ
ದೇಳಿಗೆಯೊಳೆಬ್ಬಿಸುತಲೀರ್ವರು ಶುದ್ಧ ಭಾವದೊಳು
ಭಾಳಲೋಚರನಖಿಳ ತರ ನಾ
ಮಾವಳಿಗಳ ಪಠಿಸುತಲಿರ್ದರು
ಕಾಳರಹಿತ ದಿವಾಕರನ ಬರವನೆ ನಿರೀಕ್ಷಿಸುತ ೨೨

ಬೆದರಿದವು ಘೂಕಾಳಿ ತಾರೆಗ
ಳುದುರಿದವು ನಿಸ್ತೇಜದಿಂದಲಿ
ಚದುರಿದವು ವರ ಚಕ್ರವಾಕಗಳತಿ ವಿನೋದದಲಿ
ಹೆದರಿದವು ಕೋರಕಗಳಾಗಳೆ
ಮುದುರಿದವು ಕುಮುದಂಗಳೆಡೆವಿಡ
ದೊದರಿದವು ಕಣ್ದೆರೆದು ಖಗಗಳು ಸೂರ್ಯನುದಯಿಸಿದಂ ೨೩

ಕಡುಭರದಿ ಸೋಮಯ್ಯ ತನ್ನಯ
ಮಡದಿಯನು ಕರೆದೊರೆದ ನೆಲೆನಿ
ನ್ನೊಡಲವ್ಯಸನವನೆಲ್ಲ ಕಳಿ ಹಿಂದಿನ ಪುರಾತನರು
ಮೃಡನ ಮೆಚ್ಚಿಸಿ ಕೆಲರು ಶಿವನಿಹ
ಗುಡಿಗಳೀಕ್ಷಿಸಿ ಕೆಲವರು ಹರವ್ರತ
ವಿಡಿದು ಕೆಲವರಿಳೆಯೊಳಗೆ ಪುತ್ರರ ಪಡಿಯಲಿಲ್ಲೇನು ೨೪

ನಲ್ಲನೇ ನೀ ನಾಡಿದಂತಿಳೆ
ಯಲ್ಲಿ ಆನಿಬರು ಪೂರ್ವಕಾಲದಿ
ಪುಲ್ಲಶರ ಮರ್ದನನ ವ್ರಾತದಿ ಪುತ್ರರನು ಪಡೆದು
ಇಲ್ಲಿ ಸುಖವಿರ್ದಂತ್ಯ ಕಾಲದಿ
ಸಲ್ಲಲಿತ ಸದ್ಗತಿಯ ಪೊಂದಿದ
ಬಲ್ಲಿದರು ಪೇಳಾರೆನುತ ಮಂಗಲೆಯು ಕರ ಮುಗಿಯೆ ೨೫

ಧರೆಯೊಳಗೆ ಸಿರಿಯಾಳ ಚಂಗಳೆ
ಯರು ಶಿವಾ ವಲ್ಲಭನ ಪೂಜಿಸಿ
ತರುಳ ಚಿಲ್ಲಾಳನ ಪಡೆದರು ಮೃಕಂಡ ಯೋಗೀಂದ್ರಂ

ವರ ಮರುದ್ವತಿಯರ್ಶಿವನ ಪದ
ಸ್ಮರಿಸಿ ಮಾರ್ಕಾಂಡೇಯನಂ ಸ
ತ್ವರದಿ ಪಡೆದಿಹ ಪರದಿ ಸುಖಿಸಿದರೆಂದ ಸೋಮಯ್ಯ ೨೬

ಅಂದ ನುಡಿಗಳ ಕೇಳಿ ಮಂಗಲೆ
ಸುಂದರಾಂಗನೆ ವ್ರತವಿಧಾನವ
ನಿಂದು ಯೆಮ್ಮಗೆ ತಿಳಿಸಿ ಪೇಳ್ವಾಚಾರ್ಯರಾರುಂಟು
ಮಂದಮತಿಗಾನಂದದಿಂ ತಿಳಿ
ಸೆಂದು ಬಾಯ್ಬಿಡುತಭಿ ನಮಿಸಿದಾ
ಚಂದಿರಾನನೆಗತುಳ ವಿಭವದಿ ಪೇಳಲೆತ್ನಿಸಿದ ೨೭

ತರುಣಿಮಣಿಯೆ ಕೃತಾಯುಗದಿ ಗಜ
ಕರಣರೇಣುಕ ದಾರುಕ ಬಳಿಕ
ಪರಮ ಪರತರ ವಿಶ್ವಕರ್ಣಗಳೆಂಬ ನಾಮದಲಿ
ಪರಶಿವನ ಪಂಚಾಸ್ಯದಿಂದವ
ತರಿಸಿ ಭುವನದಿ ವೀರಶೈವರ
ನುರೆ ಸೃಜಿಸಿ ಪಾಲಿಸುತ ತ್ರೈತಾಯುಗದಿ ಮತ್ತವರು ೨೮

ಧರಣಿಯೊಳಗೇಕಾಕ್ಷರ ದ್ವಾ
ಕ್ಷರನು ಶೋಭಿಪ್ಪ ತ್ರಿಯಕ್ಷರ
ಮೆರೆವ ಚತುರಾಕ್ಷರನು ಪಂಚಾಕ್ಷರನು ಯಿಂತೆಂಬ
ಪರಮ ನಾಮಗಳಿಂದುದಿಸಿ ಶಂ
ಕರನ ಸುಮತವನುದ್ಧರಿಸಿ ದ್ವಾ
ಪರ ಯುಗದೊಳಿರ್ದರಾ ಪಂಚಮ ಗಣಾಧೀಶ್ವರರು ೨೯

ಏಕ ಮುಖ ದ್ವಿ ಮುಖ ತ್ರಿಮುಖ ಸುವಿ
ವೇಕ ಚತುರ್ಮುಖ ಪಂಚಮುಖರಿವ
ರೇಕ ಕಾಲದಿ ಜನಿಸುತಂ ಶಿವಮತವ ಬೆಳಸಿದರು
ಈ ಕಲಿಯುಗದೊಳವರೆ ಭಕ್ತರ
ಸಾಕುವದಕುದ್ಭವಿಸಿದರು ಬಿಡ
ದಾಕಟದಿ ಪೇಳುವೆನು ಪಂಚಾಚಾರ್ಯರಭಿದಾನ ೩೦

ಮೆರೆವ ಏಕೋರಾಮ ನಾಮದಿ
ಹರನ ಲಿಂಗದಿ ಜನಿಸಿ ಭೂತಲ
ದಿರುವ ಕೇದಾರೆಂಬ ಸಿಂಹಾಸನದಿರಂಜಿಸಿದ
ಸಿರಿಗಿರಿಯ ಮಲ್ಲೇಶಲಿಂಗದಿ
ಭರದಿ ಜನಿಸುತ್ತಲ್ಲ ಪಂಡಿತ
ಪರತರಾಚಾರೇಂದ್ರ ಸಿಂಹಾಸನವ ಸ್ಥಾಪಿಸಿದ ೩೧

ಪರಮ ರೇವಣಸಿದ್ಧ ಸೋಮೇ
ಶ್ವರ ಸುಲಿಂಗದಿಜನಿಸಿ ರಂಭಾ
ಪುರದಿ ಸಿಂಹಾಸನವ ಸ್ಥಾಪಿಸಿ ವೀರಶೈವ ಮತಂ
ಪರಿಪರಿಯೊಳನುದಿನದಿ ಸಲಹುತ
ಅರಿತು ಸಪ್ತ ಶತಾಬ್ದವರಿಯದೆ
ಮರಳಿ ಸಪ್ತ ದಶಾಬ್ದ ಬಾಳುತ ಮಹಿಮ ತೋರಿದನು ೩೨

ಮರುಳ ಸಿದ್ದೇಶ್ವರನು ಸಿದ್ಧೇ
ಶ್ವರನೆನಿಪ ಲಿಂಗದಿ ಜನಿಸಿ ಸಿಂ
ಗರದ ತಾಣೆನಿಪುಜ್ಜಯನಿ ಸಿಂಹಾಸನವನೆಗಳ್ದಂ
ವರದ ವಿಶ್ವೇಶ್ವರನೋಳುದ್ಭವಿ
ಸಿರದೆ ಕೊಲ್ಲೀಪಾಕಿಯೋಳವ
ತರಿಸಿ ಸಿಂಹಾಸನವ ವಿಶ್ವಾರಾಧ್ಯ ಸ್ಥಾಪಿಸಿದ ೩೩

ಇಂತು ಪಂಚಾಚಾರ್ಯರೆಲ್ಲರು
ಸಂತಸದಿರುತ್ವಿಜರೆನಿಸಿ ತದ
ನಂತರದಿ ವಾಸಿಸುತಲಿಹ ವರವೀರಶೈವರ್ಗೆ
ಪಿಂತಿನಾಚಾರ್ಯರ ತೆರದಿ ಮನು
ಪಿಂತಿಳುಪ ದೀಕ್ಷೆಯನು ನೆಗಳ್ವಿಯ
ನಂತ ಮಹಿಮೆಯ ತೋರ್ದು ನರರನು ಪೊರೆದದಿವರೊಳಗೆ ೩೪

ಮೇಗೆಸವ ರಂಭಾಪುರದ ಶಿವ
ಯೋಗಿ ಸಿದ್ಧನ ಸಾಂಪ್ರದಾಯಕ
ನಾಗಿ ಮೆರೆಯುವ ಚಂದ್ರಶೇಖರ ಸ್ವಾಮಿಯನವರತ
ರಾಗದಿಂದಧಿಕಾರವಾಂತು ಶಿ

ವಾಗಮ ವಿಶಾರದನೆನಿಸಿ ಭವ
ರೋಗಮಿಲ್ಲದೆ ಈಗ ಭಕ್ತರ ಪಾಲಿಸುತ್ತಿರುವ ಭೋಗಿಗಳ ೩೫

ಕಾಮಿನಿಯೆನುತ ಚಂದ್ರಶೇಖರ
ಸ್ವಾಮಿ ಯೆಮ್ಮಗೆ ಕುಲಗುರುವರನು
ಕಾಮಿಸಿದ ಫಲವಿತ್ತು ರಕ್ಷಿಸದಿಹನೆ ಬಿಡುವ್ಯಸನ
ಆ ಮಹಾ ರಂಭಾಪುರಿಗೆ ಸು
ಪ್ರೇಮದಿಂದೀರ್ವರ್ವೆರಸಿ ನಡೆ
ದೀಮಹಾಮಂಡಲದಿ ಪುತ್ರನ ಪಡೆದು ಜೀವಿಸುವಾ ೩೬

ಹರ ವ್ರತವನಾಗುರು ಮುಖದೊಳವ
ಧರಿಸಿ ಬಂದವರರುಹಿದ ತೆರದಿ
ಪರಮ ಭಕ್ತಿಯನಾಂತು ಮನದೊಳು ವಿರಚಿಸಲು ವ್ರತವ
ಧರಣಿಯೊಳು ಸುಕುಮಾರ ನೋಡುವ
ತರುಣಿ ನಿನ್ನುದರಾಬ್ಧಿಯಿಂದುವ
ತರಿಪನಾಲೋಚನೆಯ ಕಳಿಕಳಿಯೆಂದ ಸೋಮಯ್ಯ ೩೭

ಮಡದಿ ತಾವಲ್ಲಭನು ಪೇಳಿದ
ನುಡಿಗದನುಗ್ರಹಿಸಲ್ಕವಳಿಗತಿ
ಬಡವನಿಗೆ ಭಾಗ್ಯದ ಸುಕೊಡ ಕ್ಷುಧಿತನಿಗೆ ಪಕ್ವಾನ್ನಂ
ಬಿಡದೆ ದೊರೆದಂತಮಿತ ಸಂತಸ
ಪಡೆದು ಸಿರಿ ಗುರುವರನ ಮಹಿಮೆಗ
ಳಡಿಗಡಿಗೆ ಧ್ಯಾನಿಸುವ ಕಾಂತನ ಚರಣಕೆರಗಿದಳು ೩೮

ನಗೆಮೊಗದಿ ತತ್ಪತಿಗೆ ನುಡಿದಳು
ಜಗದೊಳಾ ಗುರು ವರ ನಿರುವ ಪುರಿ
ಗಗಣಿತಾನಂದದೊಳು ನಾವೀರ್ವರು ವೆರಸಿ ನಡೆದು
ಮಗನೆಮಗೆ ಉದ್ಭವಿಪ ಶಿವವ್ರ
ತಗಳನವರಿಂದರಿದು ವಿಧಿಸ
ಲ್ಕಗಜೆಯಾರ್ಧಾಂಗನು ವಲಿದು ತೀರಿಸುವನಿಷ್ಟಾರ್ಥಂ ೩೯

ಯುವತಿಮಣಿ ಮಂಗಲೆಯ ನುಡಿಗಳ
ನವಧರಿಸಿ ಸೋಮಯ್ಯನತ್ಯೋ
ತ್ಸವದೊಳವಳಂ ಕರೆದುಕೊಂಡುತ್ಕೃಷ್ಟ ಶುಭದಿನದಿ
ತವೆಸುಸಂಪದದಿಂದೆಸೆವ ನಿಜ
ಭವನವನು ಬಿಟ್ಟಾಗಲಾತನು
ಅವಸರದೊಳೈದಿದನುರಂಭಾಪುರಿಗೆ ಸಂಭ್ರಮದಿ ೪೦

ಪಯಣ ಗತಿಯಿಂ ಶುಭಶಕುನದ ನಿ
ಚಯವೆ ನೋಡ್ದಿಷ್ಟಾರ್ಥ ಫಲ ನಿ
ಶ್ಚಯದಿ ಸಿದ್ಧಿಪುದೆಂದುಭಯರುಲ್ಲಾಸದಿಂ ನಡೆದು
ಜಯತು ಜಯತೆಂದಮಿತ ಮಂಗಲ
ಮಯ ಶಿವನ ತಮ್ಮೊಳಗೆ ಸ್ಮರಿಸುತ
ಭಯವಿವರ್ಜಿತರಾಗಿ ಭರದಿಂ ಮುಂದೆ ಚರಿಸಿದರು ೪೧

ಇಂತು ಕವಿ ಭೀಮಾಖ್ಯ ಪೇಳ್ದಮ
ಹಂತ ಮಾಹೇಶನ ಚರಿತ್ರವ
ಸಂತಸದಿ ಬರದೋದಿ ಕೇಳಿದವರ್ಗೆ ಪೇಳ್ದರ್ಗೆ
ಸಂತತಂ ಘನ ಭೋಗಭಾಗ್ಯವ
ನಂತಮಿತ್ತಿಹ ಪರದಿ ಕೃತಿಕ
ರ್ತಂತವಕದಿಂ ಪಾಲಿಸುವನತ್ಯಂತ ಹರುಷದಲಿ ೪೨

ಅಂತು ಸಂಧಿ ಎರಡಕ್ಕುಂ ಪದ್ಯಗಳು ೪೨+೨೧=೬೩ಕ್ಕುಂ

ಮಂಗಲಂ

೩ನೇ ಸಂಧಿ

ಸೂಚನೆ: ಇಂದುಶೇಖರ ಗುರುವರನ ಪದ
ಪಿಂದ ಪೂಜಿಸಿ ವಂಶಕೊಪ್ಪುವ
ಕಂದನಂ ಕರುಣಿಸುದೆನುತ ಪದಕಮಲ ಕೆರಗಿದರು

ಸಾರಗುಣಗಣಹಾರ ಜಯ ವಿ
ಸ್ತಾರ ಪುರಸಂಹಾರ ಕರುಣಾ
ಕಾರ ಮಹಿಮಾಪಾರ ಭುವನಾಧಾರ ಭವದೂರ
ಮಾರಹರವ್ಯಕ್ತಧೀರ ಭಕ್ತೋ
ದ್ಧಾರ ಮೋಕ್ಷಾಗಾರ ಷಣ್ಮುಖ
ವೀರ ಪಿತ ಬಿಡದೀ ರಸೆಯೊಳೌದಾರದೆನ್ನ ಪೊರೆ ೧

ಮಂಗಲೆಯ ನೊಡಗೂಡಿ ಮುದದಿಂ
ಅಂಗಜಾಂತಕನನ್ನುತಿಸುತು
ತ್ತುಂಗ ರಂಭಾಪುರದ ಸೀಮೆಗೆ ಪೋಗಿ ಸೋಮಯ್ಯ
ತೆಂಗು ಕದಳಿ ರಸಾಲ ಮುಖ್ಯ ದ್ರು
ಮಂಗಳೆಡಬಲ ರಂಜಿಸುತಿರ
ಲ್ಕಂಗಳಿಂದೀಕ್ಷಿಸಿ ಮಹಾ ಸಂತಸವಡೆದು ನಿಂದ ೨

ಅಲ್ಲಿಗಲ್ಲಿಗೆ ಬಹು ಬೆಳೆಗಳಿಂ
ದಲ್ಲಿಗಲ್ಲಿಗೆ ನಿಡುಗೊಳಗಳಿಂ
ದಲ್ಲಿಗಲ್ಲಿಗೆ ಕೆರೆ ತೊರೆಗಳಿಂ ಪರಿವ ನೀರಿಂದ
ಅಲ್ಲಿಗಲ್ಲಿಗೆ ಅರೆಗಿರಿಗಳಿಂ
ದಲ್ಲಿಗಲ್ಲಿಗೆ ಶುಕಪಿಕಗಳಿಂ
ದಲ್ಲಿಗಲ್ಲಿಗೆ ತೋಟಮಯದಿಂದೆ ಸೆದುದಾ ಸೀಮೆ ೩

ಮೆರೆವ ಶಾಲ್ಯಾನ್ನಗಳ ಚಯ ಘೃತ
ಭರಿತ ಭಕ್ಷ್ಯಾದಿಗಳ ಪಚ್ಚಡಿ
ಪರಿ ಪರಿಯ ಶಾಕಾದ್ಯಖಿಲದಧಿದುಗ್ಧತಕ್ರಗಳ
ಬರುವ ಪಥಿಕರನರಸಿ ಪ್ರೀತಿಲಿ
ಕರಕರೆದು ಬಿಡದುಣಿಸಿ ತಣಿಸುವ
ತರತರದ ಸತ್ರಾಲಯಂಗಳು ರಾಜಿಸಿದವಲ್ಲಿ ೪

ಮುಂದೆ ಸಲೆ ರಂಜಿಸಿತು ಮೋಕ್ಷದ
ಮಂದಿರವೊ ವಸುಧಾಂಗನಿಯ ಮುಖ
ಸುಂದರಾಬ್ಜವೊ ಶೈವ ನೇಮಿತ ಮಂಗಲಾಲಯವೋ
ಕುಂದುರಹಿತ ಸುಕೃತದಿರವೊ ಇದ
ರಂದಮಂನಾವರಿವೆವೆಂದಾ
ನಂದದಿಂ ಸತಿಪತಿಗಳಾಪುರ ಪೊಕ್ಕರತಿ ಭರದಿ ೫

ಪೊಳೆವ ಸಾಲಿನ ಮೇಲು ಪೊಲ್ಗಳ
ಚಲಿಸುತಿರ್ಪ ಪಟಾಲ ಧ್ವಜಗಳ
ಸಲೆ ವಿರಾಜಿಪ ಬೀದಿಗಳ ಗುಡಿಗೋಪುರಂಗಳನು
ನಿಲದೆ ಪೋಪ್ಪೈತರುವ ಜನಗಳ
ಕಳಕಳದ ವಾದ್ಯದರ ಮಂಗಳ
ಸುಳಿ ಸುಳಿದು ನೇತ್ರಕ್ಕೆ ಸವಚರಗಣವ ನೋಡಿದರು ೬

ಸರಸದಿಂ ಸೋಮಯ್ಯ ತನ್ನಯ
ತರುಣಿ ಮಂಗಲ ದೇವಿ ಗಾಚಿ
ತ್ತರದ ರಂಭಾಪುರಿಯ ತೋರಿಸತ್ಯೆತರಲ್ಕಿಲ್ಲಿ
ಪರಮಕೋಕಿಲದಂತೆಸವ ಸು
ಸ್ವರದ ಗಾನವು ಕರ್ಣಕಿಂಪಾ
ಗಿರದೆ ಮುಂದಕೆ ಚರಿಸಿ ವೇಶ್ಯಾಶ್ರಯವು ಕಾಣಿಸಿತು ೭

ಸಿರಿಯ ಸುಖಗೂರ್ವಸಿಯ ಚತುರತೆ
ಸರಸತಿಯ ನುಡಿ ಮಂಜು ಘೋಕ್ಷೆಯ
ವರಜಿಡರಗು ಸುಕೇಶಿಯುನ್ನತ ಕೇಶನಿಬಿಡಗಳು

ಸ್ಮರಸಿ ರಾಣಿಯ ಚಲ್ವಿಕೆಯು ಕಿ
ನ್ನರ ವಧುವಿನ ಸುಗಾನದಿಂದುರೆ
ಮೆರೆವ ವೇಶ್ಯಾಮಂಡಲವ ನೋಡ್ದಚ್ಚರಿಯಗೊಂಡ ೮

ಕರಿಯ ಸಮ ನಡಿ ಶುಕದ ಸಮನುಡಿ
ಹರಿಯ ಸಮಕಟಿ ಪವಳ ಸಮ ತುಟಿ
ಹರಿಣ ಸಮಗಣ್ಣನು ಪಟುದ ಬಣ್ಣದ ಸುನಾರಿಯರು
ಉರಗ ಸಮ ಮುಡಿ ತಳಿರ ಸಮದಡಿ
ಗಿರಿಯ ಸಮ ಮೊಲೆ ರತಿಯಸಮ ಕಲೆ
ವರ ಕದಳಿ ಸಮ ತೊಡೆ ಉದಕ ಸಮಪೊಡೆಯ ಗಣಿಕೆಯರು ೯

ಮೆಲ್ಲ ಮೆಲ್ಲನೆ ಬೀದಿಯೊಳ್ನಡೆ
ದಲ್ಲಿಗಲ್ಲಿಗೆ ನಿಂದು ಪಥಿಕರು
ನಿಲ್ಲನಿಲ್ಲದೆ ದಿಟ್ಟವರದುರೆ ನೋಡಿದವರೆದೆಯ
ಝಲ್ಲು ಝಲ್ಲೆಂಬಂತೆ ಸ್ತ್ರೀಯರು
ಗಲ್ಲ ಗಲ್ಲನೆ ಮೆಲ್ಲಡಿಯನಿಡು
ತೊಲ್ಲವಲ್ಲದವರನುವಲಿಸುವ ಗಣಿಕೆಯರ ನೋಡ್ದ ೧೦

ಗಿಳಿಗಿನಿದು ನುಡಿಗಲಿಸುತಲಿ ಪಿಕ
ಗಳಿಗೆ ಸ್ವರತಿಯ್ದುತಲಿ ಮೋದದಿ
ಗಳದರವವಕ ಪೋತ ಮೊತ್ತಕೆ ಬರಿಸುತಂ ಕೆಲರು
ತಳಿರಿನುಯ್ಯಾಲೆಯನೆಗಳ್ಚಿಸು
ಲಲಿತ ಸೊಬಗಿನ ಜವ್ವನ ಭರದ
ಬೆಲೆಯವೆಂಗಳು ಕಣ್ಗೆಸೆದರಾ ಸಾಲ್ ಗೃಹಗಳಲ್ಲಿ ೧೧

ಸ್ಮರ ಸಮರಕೆ ಸಹಾಯವೆಸಗಿದ
ಕರಕೆ ಕಂಕಣ ಕಾಲ್ಗೆ ಕಡಗವ
ಶರೀರಕಂಬರಸ್ತನಕೆ ಸರ ಕಿವಿದುಟಿಗೆ ಮಣಿ ವೀಳ್ಯ
ಭರದಿ ಬಹುಮಾನಿಸುತ ಹಿಂದುಳಿ
ದಿರುವ ಮುಡಿಯನು ನೋಡ್ದು ಗಣಿಕೆಯ
ರುರವಣಿಸಿ ಶೀಕ್ಷಿಸುವ ಪರಿಯಲಿ ಬಡಿದು ಬಂದಪರು ೧೨

ಪರಶಿವನು ಸ್ವಮುಖದೊಳು ಜನಿಸಿದ
ಪರಮ ರೇಣುಕ ಸಂತತಿಗೆ ಮಂ
ದಿರವೆನಿಪ ರಂಭಾಪುರಿಗೆ ರಂಭಾದ್ಯಮರಪುರದ
ತರುಣಿಯರ ಕಳಿಸಿರ್ಪನಲ್ಲದೆ
ನರವಧುಗಳಿವರಲ್ಲೆನುತ್ತಿರೆ
ಬೆರಗುಗೊಂಡಾ ಗಣಿಕೆಯರ ನೀಕ್ಷಿಸಿದ ಸೋಮಯ್ಯ ೧೩

ಹರನ ಹೇಳಿಕೆಯಿಂದ ರಂಭಾ
ಸುರಪತಿಯ ಕಟ್ಟಪ್ಪಣೆಯನಾಂ
ತೆರಕದಿಂದಪ್ಸರ ಸತಿಯರನುಜತ್ತು ಗೂಡುತ್ತೆ
ಪರಮ ವೈಭವವೆತ್ತು ಬಂದೀ
ಪುರದಿ ನಿಂದದರಿಂದೆ ರಂಭಾ
ಪುರಮೆನಿಪ ನವನಾಮ ಬಂದಿಹುದೆಂದು ಯೋಚಿಸಿದ ೧೪

ಜಲದೊಳಿರ್ಯರೆ ಸೀತದಿಂ ಬಹು
ತೊಳಲುವಳು ಮಮ ಮಾತೆಯೆನ್ನುತ
ನಿಲದೆ ಸಿರಿಯಾಗಣಿಕೆಯರ ತೋಳಿಂಗೆದೇಂಟುಗಳಂ
ಪೊಳೆವನಯನಂಗಳ್ಗೆದಳಗಳ
ಚಲುವ ಮುಖಕೆ ಸರೋಜವನು ತಾ
ಕಳಿಸದಿರ್ದಡೆ ಶೋಭಿಕುಮೆ ತೋಳ್ನಯನ ವದನಗಳು ೧೫

ಅಡವಿಯೊಳು ಸಂಚರಿಸಿ ಕಳವಳ
ಬಡುತೆ ಹರಿಣವು ನಯನದೊಳು ಹರಿ
ನಡುವಿನೊಳು ಕರಿನಡಿಗೆಯೊಳು ನೆಲಸಿರ್ಪಕಾರಣದಿ
ಕಡುತರದ ಚಾಂಚಲ್ಯ ನೇತ್ರದಿ
ನಡುವಿನೊಳು ಶುಕ್ಷತ್ವಯಾನದಿ
ಬಿಡದೆ ಮಾಂದ್ಯಮಿವೆಲ್ಲ ವಿವರೊಳು ಸೇರಿರುವವೆಂದ ೧೬

ಕ್ಷಿತಿಯ ಮಂಡಲದಲ್ಲಿರುವ ಸ
ದ್ವ್ರತಿಗಳನಿಮಿತ ವಿರಾಗಿಗಳಾ
ಯತಿ ತಪಸಿಗಳ ಮನವ ಸೆಳೆದಿಹ ಪರದಿ ದುಃಖವನುಂ

ಹಿತದೊಳೀವುದಕಾಗಿ ಮದನನು
ವಿತತ ಪಡೆಯನು ಕಳಿಸಿದಂತೆಲ
ಸತಗಣಿಕೆಯರು ಗುಂಪು ಗುಂಪಾಗೆಸದರೋಣಿಯೊಳು ೧೭

ಸಿರಿಸುತನು ಮರಣವ ಸಮಯದೊಳು
ತರುಣಿಯರ ಪುರ್ಬಿಂಗೆ ಧನು ಮುಂ
ಗುರುಳು ಮೊತ್ತಕೆ ಸಂಜಿನಿಯ ನೇತ್ರಂಗಳಿಗೆ ತನ್ನ
ಶರವನಿತ್ತಿಳೆಯಲ್ಲಿರುವ ಯುವ
ಕರಮೆನಿಪ ಮೃಗ ತತಿಯ ನೊಡೆದೆಮ
ಪುರಕೆ ಸೇರಿಪುದಕ್ಕಿವರ ಕಳಿಸಿರ್ಪುದೇ ಸಹಜ ೧೮

ನೋಡಿದರೆ ಮನವನ್ನು ಮೇಣ್ ಮಾ
ತಾಡಿದರೆ ಧನಕನಕವನು ಒಡ
ಗೂಡಿದರೆ ರಕ್ತವನು ಮೇಲಾ ಘನತೆಯನು ಕಳೆದು
ಮಾಡಬಾರದ ಹೀನ ಕೃತ್ಯವ
ಮಾಡಿಸುತ್ತ ಬಲೆಯರು ಮನುಜರ
ಕೋಡಗನ ತೆರನುಣಿಸಿ ಸದ್ಗತಿ ಮಾರ್ಗ ತೋರಿಸರು ೧೯

ತನುಮನಧನ ಘನತ್ವ ಕೆಡಿಸುತ
ಬಿನುಗನಾ ಬಹುಬಿನುಗನಿವನೆಂ
ದೆನಿಸುತ ಗಣಿತ ಕಲುಕ್ಷ ಭಾರವ ಪೊರೆಸುತಂತ್ಯದೊಳು
ದಿನಕರನ ಸುತನೆಡೆಗೆ ಕಳಿಸುತ
ಘನನಿರಯದೊಳು ಮುಳುಗಿಸುವರಿವ
ರನು ನಿರೀಕ್ಷಿಪುದಲ್ಲಿ ಮೆಂದವರನ್ನುಳಿದು ನಡೆದ ೨೦

ಸಂತಸದಿ ಮುಂದಡಿಯಿಡುತ್ತ
ತ್ಯಂತ ಧನಕನಕಾದಿ ಮೌಕ್ತಿಕ
ವಂತಳೆದು ಶೋಭಿಸುವ ತರತರದಂಗಡಿಗಳನ್ನು
ನಿಂತು ನೋಡುತ್ತೆಡ ಬಲವನ
ಲ್ಲಿಂತವಕದೊಳು ಚರಿಸಿ ಬಿಡದಾ
ದ್ಯಂತ ವೈಭವವನ್ನು ನೋಡಿದ ಸೋಮಲಿಂಗಯ್ಯ ೨೧

ಸತಿವೆರಸಿನಡೆಯುತ್ತಿರಲು ಮುಂ
ದತಿ ವಿರಾಜಿಸಿತ ಭವನ ಮಳ ಭ
ಕುತಿಯ ಮರ್ಮನೆಯಂತೆ ಮುಕುತಿಯ ಮೂಲಗೃಹದಂತೆ
ವಿತತ ಸೌಧಗಳಿಂದೆ ತವೆಯು
ನ್ನತ ಸುಬಾಗಿಲೆವೆರಸು ತರುಣ
ದ್ಯುತಿಯ ಧ್ವಜಗಳನಾಂತು ಗುರುಮನೆಕಣ್ಗೆ ಶೋಭಿಸಿತು ೨೨

ಆಗ ಸೋಮಯ್ಯನು ವಿಭವದಿಂ
ಪೋಗಿ ರಾರಾಜಿಸುವ ಮುಂದಿನ
ಬಾಗಿಲದಿನಿಂದೊಳಗೆ ಭಕ್ತರು ಸಂಭ್ರಮದಿ ಕೂಡಿ
ನಾಗಧರನ ಸುನಾಮಗಳನಿಗ
ಮಾಗಮದ ಪದ್ಧತಿವಿಡಿದು ಸ
ದ್ರಾಗರಸದಿಂ ಭಜಿಪ ಭಜಕರ ಕಂಡು ಸುಖಿಸಿದನು ೨೩

ಅವರೊಳೊಬ್ಬನ ಕರೆದೊರೆದ ನೀ
ಭುವನದೊಳು ಬೇವಿನೂರಿನಲ್ಲಿ
ತವ ಭಕುತ ಸೋಮಯ್ಯ ತನ್ನಯ ಮಡದಿಯನು ಕೂಡಿ
ಜವದಿ ಬಂದಿಹನೆಂದು ಮಹದು
ತ್ಸವದಿ ನೀನೊಳಪೊಕ್ಕುಗಡತಿಳಿ
ಸುವದು ಸದ್ಗುರು ಚಂದ್ರಶೇಖರಗೆಂದು ಕೈಮುಗಿದ ೨೪

ಸೋಮನಾಡಿದ ನುಡಿಗಳಂಚರ
ಪ್ರೇಮದಿಂದಲಿ ಕೇಳಿ ಬೇಗನೆ
ಸ್ವಾಮಿ ಶ್ರೀ ಗುರು ಚಂದ್ರಶೇಖರ ನೆಡೆಗೆ ಗಮಿಸುತ್ತ
ಕೋಮಲ ಪದಕ್ಕೆರಗಿ ಪೇಳಿದ
ನಾ ಮಹಾ ಸೋಮಯ್ಯನೊರೆದ ವಿ
ರಾಮ ಸಂಗತಿಯಂ ಚರನು ತಿಳಿಸಿದ ಗುರೂತ್ತಮಗೆ ೨೫

ಗುರುವರನು ಸತ್ಕರುಣದಿಂದೊಳ
ತರುವದೆಂದಪ್ಪಣೆಯ ನೀಯಲು
ಚರನು ತೆರಳುತ ದಂಪತಿಗಳನು ಸ್ವಾಮಿ ಸನ್ನಿಧಿಗೆ

ಭರದಿ ಕಳಿಸಲ್ಕುಭಯರೆಡಬಲ
ದಿರುವ ಯತಿ ತತಿ ಪಂಡಿತರವಾ
ಗ್ಧರಿಯ ಶಿವನಾಮದ ಸುಘೋಷವ ಗ್ರಹಿಸುತ್ತೈದಿದರು ೨೬

ನೋಡುತಂ ಗುರುವರನ ನಾಮವ
ಪಾಡುತಂ ಸತಿಪತಿಗಳಂಗವ
ನೀಡುತಂ ಭೂಮಿಂಗಪದ ಸರಸಿಜಕೆ ವಂದನೆಯ
ಮಾಡುತಂ ವ್ಯಸನಾಳಿಗಳನೀ
ಡ್ಯಾಡುತಂ ಸಂತಸದಿ ವರಗಳ
ಬೇಡುತಂ ಮಹಿಮಂಗಳಂ ಕೊಂಡಾಡಿದನು ಮನದಿ ೨೭

ಇಂದು ಶೇಖರ ಗುರುವರನು ಪದ
ಪಿಂದ ವರಪಿಡಿದೆತ್ತಿಯಿಲ್ಲಿಗೆ
ಬಂದ ಕಾರ್ಯವುದೇನೆನಲ್ ಸೋಮಯ್ಯ ಕರಮುಗಿದು
ತಂದೆ ಕೇಳ್ ವೃದ್ಧಾಪ್ಯಕಾಲವು
ಬಂದಿತೆಮ್ಮುಭಯರಿಗೆ ಸಂತತಿ
ಬೆಂದು ಪೋಗುವದೆಂಬ ವ್ಯಸನಾರ್ಣವದಿ ಮುಳುಗಿರುವೆ ೨೮

ಮಂಗಲೆಯು ಸಂಸ್ಕೃತಿಯ ಸುಖಮಿದು
ಭಂಗಮಂದಾತುರದಿ ಮರುಗುತ
ಕಣ್ಗೆಕಾಣದ ದುಃಖ ಸಾಗರದಲ್ಲಿ ಮುಳು ಮುಳುಗಿ
ತಿಂಗಳಿಂದೊಳಗೊಳಗೆ ಯೋಚಿಸ
ಲಂಗ ಕುಗ್ಗಿಹುದಿವಳ ಮನಸಿನ
ಇಂಗಿತವ ತೀರ್ಚೆಂದು ಬಿನ್ನೈಸಿದನು ಭಕ್ತಿಯಲಿ ೨೯

ಗಡನೆ ಮಂಗಲೆ ಗುರುವರನ ಮೆ
ಲ್ಲಡಿಗಳಂ ಕಂಬನಿಗಳಿಂ ಮನ
ವಿಡಿದು ಮಜ್ಜನಗೈದು ಶಿರಮೆಂಬುವ ಸುಪುಷ್ಪವನು
ಕಡುಜವದಿ ಧರಿಸುತ್ತ ಸಲೆ ಮಿಂ
ಚಿಡಿದ ಕಡೆನಯನದ ಸುಜೋತಿಯ
ಮುಡಿಸಿ ಪೂಜಿಸಿ ಬೆಳಗಿದಳು ಶಿವಭಕ್ತಿ ಸಂಪನ್ನೆ ೩೦

ಅವಳೆಸಗಿದರ್ಚನೆಯ ಬಿನ್ನಪ
ನವಧರಿಸಿ ಗುರು ಚಂದ್ರಶೇಖರ
ಕುವರಿ ನಿನ್ನ ಮನೋಗತವ ಪೇಳೆಂದು ನುಡಿಯಲ್ಕೆ
ಭುವನ ಭಕ್ತೋದ್ಧಾರ ನಾಲಿಸು
ಕುವರನಿಲ್ಲದ ಭಾಗ್ಯವಿಲಸ
ತ್ಕವಿತೆಯಿಲ್ಲದ ಜಾಣ್ಮೆ ರಂಜಿಪುದೆಂತುಚಿದ್ರೂಪ ೩೧

ಮಕ್ಕಳಿಲ್ಲದ ಮನುಜರಿಗೆ ಗತಿ
ಸಿಕ್ಕದೆಂದುಸುರಿರ್ಪ ಶೃತಿ ನುಡಿ
ಪುಕ್ಕಟವೆ ಪೇಳೆನ್ನ ಗರ್ಭದಿ ಮಕ್ಕಳಿಲ್ಲದಕೆ
ಕಕ್ಕುಲತೆಯಿಂ ಬಂದು ಬೇಡಿದೆ
ತಕ್ಕಮಗುವನ್ನಿತ್ತು ನಿಜವಂ
ಶಕ್ಕೆ ಶೋಭೆಯ ಗೈದು ರಕ್ಷಿಪುದೆಂದು ಹಲುಬಿದಳು ೩೨

ಸುತವಿಹೀನರಿಗಮಳತರ ಸ
ದ್ಗತಿಯದಿಲ್ಲೆಂಬುದು ಪುರಾಣೋ
ಕ್ತಿ ತಿಳಿ ತಿಳಿ ಭರದಿಂದೆ ನೀನ್ಯೆತಂದು ಮರುಗುವರೇ
ಸುತೆಯ ಕೇಳು ಹಿರಣ್ಯಾ ಕಶ್ಯಪ
ವಿತತ ಮತಿಯುತೆ ರೇಣುಕೆಯು ಗಡ
ಸುತರ ಪಡದೇಂಗತಿಯ ಕಂಡರು ಎಂದ ಗುರುವರನು ೩೩

ದೇಶಿಕೋತ್ತಮನಾಡ್ದ ನುಡಿಗತಿ
ಕ್ಲೇಶವೆಗ್ಗಳ ಮಾಗಿಮನದಾ
ಕ್ರೋಶದಿಂಬಿಸಿಲಿಂದ ಜೋಲಾಗಿಹ ಕದಳಿಯಂತೆ
ಲೇಶ ಭಾಗವು ತೋಷಮಿಲ್ಲದೆ
ಪೂಶರಾರಿಯಧ್ಯಾನಿಸುತ ಪು
ತ್ರಾಶೆಯಿಂ ಕಳವಳದ ಸಾಗರದಲ್ಲಿ ಮುಳುಗಿದಳು ೩೪

ತಾತ ಚಿತ್ತೈಸಿಹ ದಿಸಂತಾ
ನಾತಿಶಯಮೆಂಬಮಳಲತೆ ಯದು
ಕಾತುಗರ್ಭದಿ ವರ್ಧಿಸುತ್ತಾರೆ ದಿನದಿನಕೊಂದು

ರೀತಿಯಾಗುತ್ತಿರಲವಳುಸಂ
ಜಾತ ಪುಟ್ಟುವನೆಂದು ಹಿಗ್ಗು
ತ್ತೋತು ಬಯಸುವ ಭಾಗ್ಯಮಿದು ಪುಣ್ಯಾಂಗನೆಗೆಯಲ್ತೆ ೩೫

ಹಿತದಿ ಮೊಲೆಪಾಲ್ಗುಡಿಸಿ ತೊಟ್ಟಿಲ
ಕತಿತವಕದಿಂದಿಟ್ಟು ಮುದ್ದಿಸಿ
ಮತಿಯುತನೆ ಮಲಗೆಂದು ಜೋಗುಳ ಪಾಡಿ ತೂಗುತ್ತ
ಸುತನೆ ಬಾ ಬಾರೆನ್ನ ಮೋಹದ
ಪಿತನೆ ಬಾ ಬಾರೆನ್ನ ದುರ್ಗತಿ
ಹತನೆ ಬಾ ಬಾರೆಂಬ ಸಂಪದ ಸುಕೃತವತಿಗಲ್ತೆ ೩೬

ಪಾತಕ ವಿಶೇಷದೊಳು ಸತಿಯರಿ
ಗೈತರುವದಾ ಬಂಜೆತನಮೆಂ
ಬೀ ತೆರೆದ ಶಾಸ್ತ್ರೋಕ್ತಿ ಸಟೆಯಲ್ಲರಿತು ನೋಡಿದರೆ
ಭೂತ ಜನ್ಮದೊಳುದಿಸಿ ದುಚ್ಚಟ
ಕೋತು ಮಾಡಿದ ಪಾತಕಕೆ ವಿಪ
ರೀತ ವಂಧ್ಯತ್ವಾತಿಶಯ ವ್ಯಸನಾತು ಕೊಂಡಿಹುದು ೩೭

ಹಿಂದೆ ಮಾಡಿದದುಷ್ಕೃತಕೆ ನೀ
ವಿಂದು ಮಾಡುವದೇನುಪಾಯ ಮ
ದೊಂದೆನಗೆ ಈ ಗಿರಿಯದಾಯ್ತಾರಬ್ಧ ಪಲದಂತೆ
ಬಂದದುಷ್ಫಲ ಬುಂಜಿಪುದಕೊ
ಲ್ಲೆಂದರದು ಭುವಿಯೊಳಗೆ ಮನುಜರಿ
ಗೆಂದಿಗುಂ ಬಿಡದೆಂದು ತಮ್ಮಗೆ ತಿಳಿದ ನುಡಿಯಲ್ತೆ ೩೮

ಬಲಿದಶಾನನ ಶುಕ್ರ ಸೋಮಕ
ಛಲದ ತಾರಕ ಮುಖ್ಯ ದನುಜರು
ಜಲಜ ಭವ ಹರಿಪೂರ ಸುರಪಾದ್ಯಖಿಳ ದೇವತರು
ನಳ ಹರಿಶ್ಚಂದ್ರಾದಿ ಮನುಜರು
ನೆಲದಿ ಬಲುನೃಪವರರೆ ಕಷ್ಟದ
ಬಲೆಗೆ ಬಿದ್ದಾರಬ್ಧ ಕರ್ಮವ ಭೋಗಿಸಿದರಕಟ ೩೯

ನಾನು ಮಾಡಿದ ಸುಕೃತದುಷ್ಕೃತ
ಯೇನಿಹುದದಂ ಭೋಗಿಸುವೆನತಿ
ಸಾನುರಾಗದಿ ನಿಮ್ಮ ಭಕ್ತಿಯನಿತ್ತು ಕಾಪಾಡು
ಮಾನವಂತಿಯೆ ಕೇಳು ಶಿವನ ಸು
ಧ್ಯಾನ ಭಕ್ತಿಗಳಿಂದ ಗೆದ್ದರು
ಹೀನ ಪ್ರಾರಬ್ಧವನು ಮತ್ತಿದಕಿಲ್ಲುಭಯ ರೀತಿ ೪೦

ಪುತ್ರಿಯಾಲಿಸು ಶಿವನ ಸಚ್ಚಾ
ರಿತ್ರ ಶ್ರವಣಾರ್ಚನೆ ಸುಭಕ್ತಿಯ
ಧಾತ್ರಯೊಳು ನಡಿಸುತ್ತ ಕಾಲಕ್ಷೇಪ ಮಾಡಲ್ಕೆ
ಪುತ್ರನುದಿಸುವನೆನ್ನ ಕೇಳ್ವುದು
ಚಿತ್ರಮಲ್ಲವೆ ಪಾರ್ವತೀಶನ
ಸ್ತೋತ್ರಗ್ಯೆದೊರ ಬೇಡವೆನ್ನನು ಬೇಡುವದಿದೊಳಿತೆ ೪೧

ಎದ್ದನಿತರೊಳು ಸೋಮನಾಮನು
ಗದ್ದುಗೆಯೊಳಿರುತಿರ್ಪಗುರುವಿನ
ತಿದ್ದಿಯಾಡಿದ ನುಡಿಗಳನು ಕೇಳುತ್ತ ಕೈಮುಗಿದು
ಬಿದ್ದು ಪಾದದಿ ಶಿವನ ಸಮ ನೀ
ನಿದ್ದು ಈ ಪರಿ ಭಕ್ತರೊಳು ಸಲೆ
ಕದ್ದು ಪೇಳ್ದೊಡಿದಕ್ಕೆ ವಿಬುಧರು ಮೆಚ್ಚುತಿಹರೇನು ೪೨

ಕ್ಷಿತಿಯೊಳಗೆ ಸಿಂಹಾಸನಕ್ಕಧಿ
ಪತಿಗಳೆನಿಸುತ ವೀರಶ್ಯೆವದ
ಮತಮತಾಂತರವ ಪಾವನಗ್ಯೆದನಿತ ಭಕ್ತರನು
ಹಿತದಿ ಪಾಲಿಪುದಕೆ ತ್ರೈಪುರ
ಹತನನಪ್ಪಣೆಯಿಂದುದಿಸೆಮಗೆ
ಸುತನ ಇತ್ತಪುದೇನದಚ್ಚರಿ ಪಾಲಿಸ್ಯೆ ಗುರುವೇ ೪೩

ಕಂಪಿಸುತ ಕೈಮುಗಿದು ನಿಂತಿಹ
ದಂಪತಿಗಳ ಮನೋಬೀಲಾಷೆಯ
ತಾಂ ಪುಳಕದಿಂ ತಿಳಿದೊರೆದ ನಿಮ್ಮಿಷ್ಟ ಸಿದ್ಧಿಪುದು

ನೋಂಪಿ ಮುಖ್ಯಗಣಿತ ಶಿವವ್ರತ
ಮಂ ಪಿಡಿದು ತಮ್ಮಿಚ್ಛಿತಾರ್ಥಗ
ಳಂ ಪಡೆದು ಸುಖಿಸಿದರು ಸುರನರ ದಾನವಾದಿಗಳು ೪೪

ಹರನ ಸದ್ವ್ರತವಿಡಿದು ಧರ್ಮಾ
ಚರಣೆಯಂದದಿವಿಧಿಸಿದಡೆ ಸ
ತ್ಕರುಣದಿಂದಿಚ್ಛಿತವನಿತ್ತಾ ಶಿವನು ರಕ್ಷಿಸುವ
ಪರಮ ಭಕ್ತರೆ ಇಂದು ನಿಮಗಾ
ನೊರೆವ ಸಮಯವು ಮೀರಿಹುದುಸ
ತ್ವರದಿ ಸೂರ್ಯೋದಯದೊಳುಸುರುವೆನೆಂದ ಗುರುವರನು ೪೫

ಅಂದ ಮಾತಿಗೆ ಸತಿಪತಿಗಳಾ
ನಂದರಾಗುತ ಉದಯದೊಳು ತ
ಮ್ಮಿಂದ ತಿಳುಹಿಸಿ ಗೊಂಬುವೆವು ಲಿಂಗಾರ್ಚನೆಯ ಸಮಯ
ಬಂದುದೀಗಳೆ ಸಾಕು ನೀರೊಳು
ಮಿಂದು ಶಿವಲಿಂಗಾರ್ಚನೆಯ ಮಾ
ಡೆಂದು ನಮಿಸುತ ಪೇಳಿಸಿದರಾ ಚಂದ್ರಶೇಖರನ ೪೬

ಇಂತು ಕವಿ ಭೀಮಾಖ್ಯ ಪೇಳ್ದ ಮ
ಹಂತ ಮಾಹೇಶನ ಚರಿತ್ರವು
ಸಂತಸದಿ ಬರೆದೋದಿ ಕೇಳಿದವರ್ಗೆ ಪೇಳ್ದರ್ಗೆ
ಸಂತತ ವರ ಭೋಗ ಭಾಗ್ಯಮ
ನಂತ ಮಿತ್ತಿಹ ಪರದಿ ಕೃತಿಕ
ರ್ತಂತವಕದಿಂ ಪಾಲಿಸಲಿ ಅತ್ಯಂತ ಹರುಷದಲಿ ೪೭

ಅಂತು ಸಂಧಿ ಮೂರಕ್ಕುಂ ಪದ್ಯಗಳು ೪೭+೬೩=೧೧೦ ಕುಂ ಮಂಗಲಂ

೪ನೇ ಸಂಧಿ

ಸೂಚನೆ: ಸುತರ ಬಯಸಿದ ಸತಿಪತಿಗಳಿಗೆ
ಹಿತದಿ ಶಿವನವ್ರತಂಗಳನು ಬಿಡ
ದತಿಶಯದಿ ಪೇಳಿದನು ಗುರುವರ ಚಂದ್ರಶೇಖರನು.

ಭೂತಗಣಕಧಿನಾಥ ಮುನಿಗಣ
ವ್ರಾತ ಗಜಮುಖ ತಾತನಿಗ ಮಾ
ತೀತ ಮಹಿಮ ಸಮೇತ ತ್ರಿಭುವನಮಾನ್ಯ ಸಚ್ಚರಿತ
ಸೀತಕರಧರ ಪಾತಕ ಜಲದ
ವಾತ ಗೌರೀಪ್ರೀತಯನ್ನ
ನೋತು ಪಾಲಿಸು ಸ್ವೀತತನು ಪರಿಪೂತ ಸುಖದಾತಾ ೧

ಸೋಮಲಿಂಗನೆ ನಿನ್ನ ಪ್ರಿಯ ಮಡ
ದೀಮಣಿಗೆ ಸುತನುದಿಪ ವ್ರತಗಳ
ಪ್ರೇಮದಿಂ ಪೇಳುವೆನು ಚಿತ್ತೈಕತೆಯೊಳಾಲಿಪುದು
ಸೋಮವಾರದ ಅನುಪಮ ವ್ರತ
ಸ್ತೋಮಮಂಟವನೆಲ್ಲ ನಿನ್ನಗೆ
ನೇಮದಿಂದುಸುರಲ್ಕ ಸಾದ್ಯವದಾಗಿ ತೋರುವದು ೨

ಸರಸದಿಂದೀ ಸೋಮವಾರದ
ವರವ್ರತವ ನನ್ನಿಂದ ತಿಳಿದಾ
ಚರಿಸಿದರೆ ನಿನ್ನಿಷ್ಟ ಫಲಸಿದ್ಧಿಪುದು ಸಟೆಯಲ್ಲ
ಗುರುವರನೆ ತಡಮಾಡದಂತಃ
ಕರುಣದಿಂದಾ ಸೋಮವಾರದ
ಪರಮ ವ್ರತವನು ತಿಳಿಸೆನಗೆ ನಾವಾಲಿಸುವೆನೆಂದ ೩

ತರುಣ ಕೇಳ್ಕಾರ್ತೀಕದೊಳು ಬಂ
ದಿರುವ ಚಂದ್ರನವಾರದುದಯದಿ
ಭರದೊಳೆದ್ದು ಭವನ ಧ್ಯಾನದಿ ಮಜ್ಜನಗೆಯ್ಯುತ
ಪರಮ ಭಸ್ಮೋದ್ಧೂಳಿತಾಂಗದಿ
ಬೆರದು ಲಿಂಗಾರ್ಚನೆಯ ತೀರಿಸಿ
ಹರನಭಕ್ತಿಯ ದೃಡವಿಡಿದು ಮಾನಸದಿ ನೆನೆನೆನಿದು ೪

ಚರಕುಲದ ಸತಿಪತಿಗಳೀರ್ವರ
ಕರೆದು ಗದ್ದುಗೆಗೊಳಿಸಿ ಕೂಡ್ರಿಸಿ
ಹರ ಉಮಾರಿವರೆಂಬ ಭಾವದಿ ಭಸಿತಗಂಧವನು
ಧರಿಸಿ ಪೂಜಿಸಿ ಭೋಜನವಗೈ
ಸಿರದೆ ದಕ್ಷಿಣ ವಿತ್ತು ಭವಿಗಳ
ದರುಶನವ ಬಿಟ್ಟಾದಿನದ ರಾತ್ರಿಂಗೆ ಭುಂಜಿಪುದು ೫

ಉಸುರಿದೀವ್ರತ ಮೂರು ವತ್ಸರ
ಮೆಸಗೆ ಪೂಜಕರಿಷ್ಟಫಲ ಸಮ
ನಿಪುದು ಇದು ಪುಸಿಯಲ್ಲ ತಿಳಿ ತಿಳಿ ಸತ್ಯಮಾಗಿಹುದು
ವಸುಮತೀ ವಲಯದೊಳು ಪೂರ್ವದಿ
ಹಸನಮುಖಿಸೀಮಂತಿನಿಯು ಪತಿ
ವ್ಯಸನದಿಂದೀ ವ್ರತನಡಿಸುತ್ತಿರಲು ಖಳನೋರ್ವಂ ೬

ಇವಳ ಭಕ್ತಿಯ ಕೆಡಿಸಿ ಬಿಡುವದ
ಕವನು ತನ್ನೋರುವಗೆ ಸ್ತ್ರೀ ವೇ
ಷವನುಧರಿಸುತ್ತೋರ್ವ ಭಟನನು ಕರೆದು ಸಮ್ಮುದದಿ
ಯುವತಿ ವೇಷದ ಮಾನವನ ಕರ
ತವಕದಿಂ ಪಿಡಿಸುತ್ತ ಪೇಳಿದ
ನವನಿಯೊಳು ಸೀಮಂತಿನಿಯಳೆಂಬುವ ಪತಿವ್ರತೆಯು ೭

ಸಂಗರದಿ ದಂಪತಿಗಳಾದ ಸು
ಜಂಗಮರ ಶಿವಶಿವಯನುತ್ತು
ತ್ತುಂಗ ಭಕ್ತಿಲಿ ಸೋಮವಾರದ ವ್ರತದಿ ಪೂಜಿಪಳು

ಪಿಂಗದಲ್ಲಿಗೆ ನಡೆದು ಮೇಣವ
ಳಿಂಗೆ ವರಪತಿಯೆಂದು ಸರಿಸಮ
ಮಂಗಲಾರ್ಚನೆ ಪಡೆದವಳ ವ್ರತ ಭಂಗ ಮಾಡೆಂದ ೮

ಇಂತು ನೀಚನು ಪೇಳ್ದ ಪದ್ಧತಿ
ಯಂತೆ ಭವಿಗಳು ಚರರೆನುತ ಸೀ
ಮಂತನಿಯ ಗೃಹಕ್ಕೈತರಲ್ಕವಳತಿ ಸುಭಕ್ತಿಯೊಳು
ಹಿಂತೆ ಮುಂತೆ ವಿಚಾರಿಸದೆ ಘನ
ಸಂತಸದಿ ಶಿವ ಶಿವೆಯರೆಂದ
ತ್ಯಂತ ಪೂಜಿಸಿ ಭೋಜನದಿ ಸಂತೃಪ್ತಿ ಪಡಿಸಿದಳು ೯

ವಡಿಯ ಪೇಳ್ದಂತಿವಳ ವ್ರತವನು
ಕೆಡಿಸಿ ಬಿಟ್ಟೆನೆನುತ್ತ ಹೆಮ್ಮೆಯೊ
ಳಡಿಗಡಿಗೆ ನಸುನಗುತೆ ಸೀಮಂತಿನಿಯ ಮೊಗ ನೋಡಿ
ತಡಿಯದಪ್ಪಣೆ ಪಡೆದು ಪಥವನು
ಪಿಡಿದು ಪುರಮಂ ಮೀರಿ ಮುಂದಕೆ
ನಡೆಯುತಿರೆ ಸ್ತ್ರೀ ವೇಷದವ ನಿಜನಾರಿತಾನಾದ ೧೦

ಮತ್ತೊರೆವೆ ಕೇಳೀವ್ರತವಗೈ
ಯುತ್ತೆ ವಿಭು ಭೂಪಾಲನೈದೆಸು
ತೋತ್ತಮನ ಪಡೆದಂ ವಶಿಷ್ಟನರುಂದತಿಯ ಪಡೆದಂ
ಮುತ್ತ ವಜ್ರಸುಬಾಹುಯೆಂಬುವ
ಮೊತ್ತರದಿ ಮುತ್ತುವರಿಪುಗಳಂ
ಕತ್ತರಿಸಿ ಬಿಟ್ಟಂತ್ಯದೊಳು ಸಾಲೋಕ್ಯ ಪೊಂದಿದನು ೧೧

ಸೋಮವಾರದ ವ್ರತದಿ ಚಂದ್ರನು
ಸೋಮನಾಮವನಾಂತು ಶಿವನನು
ಸೋಮಶೇಖರನನೆನಿಸಿದನು ಮಗನೇಕೇಳಿನ್ನು
ಸೋಮಶರ್ಮನೃಪೇಂದ್ರನಿದರಿಂ
ಸೋಮನಕೃಪಾಸಾಗರಕೆ ತಾ
ಸೋಮನೆನಿಸಿದ ಸಿಂಹರಾಜನು ಮೃತ್ಯವನು ಗೆಲಿದ ೧೨

ಸಾರುವೆನು ಇನ್ನೊಂದು ಚಿತ್ರದ
ಸಾರತರ ಸತ್ಕಥೆಯನಾಲಿಸು
ಭೂರಿ ಪಾತಕನಾಶಮಪ್ಪುದು ಕೇಳಿದಾಕ್ಷಣದಿ
ಧೀರನೆನಿಸುವ ಸತ್ಯಸಂಧ ಕು
ಮಾರನಾಥ ವಿರಾಟನೆಂಬ ಮ
ಹಾರಸಿಕ ರಾಜೇಂದ್ರ ಪ್ರಜೆಗಳ ಪಾಲಿಸುತ್ತಿರ್ದ ೧೩

ಈತ ವೇಸಿಯವೆರಸಿ ಧನಕನ
ಕಾತಿಶಯ ಸಂಪದಮದೆಲ್ಲವ
ಸೋತು ಕೊಟ್ಟವಳಿಂಗೆ ಕಡೆಯೊಳು ಚೋರತನವೆಸಗೆ
ದೂತಹರನನು ಪಿಡಿಯಲೈತರೆ
ಭೀತಿಯಿಂ ಪುರ ಬಿಟ್ಟು ಭರದಿಂ
ತಾ ತೆರಳಿದನು ಸಿಂಹಗಜ ಸೇರಿರ್ಪವಿಪಿನಕ್ಕೆ ೧೪

ಅಂದು ಚಂದ್ರನವಾರಮಿರುತಿರೆ
ಕಂದಮೂಲ ಫಲಾದಿಗಳನವ
ತಿಂದು ದಿನಗಳೆದಿರುಳಿ ನೊಳು ಗಿಡದಡಿಗೆ ವರಗಿರಲು
ಬಂದುರಗೆ ಸರಸರನೆಯಲ್ಲಿಗೆ
ಬಂದು ಕಚ್ಚಲ್ಕಿವನು ಗಡಮೃತಿ
ಪೊಂದಿನಟ್ಟಡವಿಯೊಳು ಖಗಮೃಗ ಬಾಯ್ಗೆತುತ್ತಾನಂ ೧೫

ಕಾಲಭಟರೈತಂದವನ ಬರಿ
ಗಾಲಲಿ ನಡಿಸುವ ಸಮಯ ದೊಳು
ವ್ಯಾಲಮಾಲಿನ ದೂತರಲ್ಲಿಗೆ ಬಂದು ಯಮಭಟರ
ಕೋಲಿನಿಂತಿವಿದೋಡಿಸುತ ತ
ತ್ಕಾಲದಲ್ಲಿ ವಿರಾಟ ಧರಣೀ
ಪಾಲನಂ ಶಿವಪುರಿಗೆ ಕರದೊಯ್ದರು ವಿಮಾನದೊಳು ೧೬

ಖಳನುಭಟಗಿಂದಿದನರಿದು ಕಳ
ವಳಿಸಿ ಕಡುಬೇಗದಿ ಮಹಿಷವ
ನ್ನಳವಡಿಸುತದನೇರಿ ಬಂದಾ ಶಿವಗಣಂಗಳ್ಗೆ

ಘಳಿಲನವರಡಿಗೆರಗಿ ನುಡಿದನು
ಇಳೆಯೊಳಿವನೆಳ್ಳನಿತು ಪುಣ್ಯವ
ಘಳಿಸದತಿ ಪಾತಕದಿವನದೊಳು ಮರಣಪೊಂದಿದನು ೧೭

ಅರಿಯದಿವನೆಸಗಿರ್ಪ ಕಲುಷದ
ಪರಿಯನೆನಿತೆನಿತೆಂದು ಪೇಳ್ವದೆ
ಉರಗಪತಿಯಿಂತಿರದಿವನಂ ಪುಷ್ಪಕದೊಳಿರಿಸಿ
ಪರಮವೈಭವದಿಂದೆ ಶಂಕರ
ಪುರಿಗೆ ಕರೆದೊಯ್ಯುವದಿದನೆಂತು
ಅರಿಯದೀ ಪರಿಯತ್ನ ಪರೆಬಿಡರೆಂದವರ ತಡೆದು ೧೮

ಕಾಲನೇ ಬಿಡು ಪಥವ ಸುಮ್ಮನೆ
ಕಾಲಕೀಡಾಗುವರೆಯಮ್ಮಯ
ಕಾಲಿಗೆರಗಿದೊಡಿಯನ ಬಿಟ್ಟಪವೇಂ ತಿಳಿದು ನೋಡು
ನೀಲಗಿರಿಯಂತೆಸೆವ ಕೋಣನ
ಮೇಲೆ ಪತ್ತಿಹ ನೆಂಬಗರ್ವವ
ಕಾಲಕಾಲನು ಮುರಿಯದಿರ್ಪನೆ ನೋಡಿದಾಕ್ಷಣದಿ ೧೯

ಇವನು ಭುವಿಯೊಳಗುದಿಸಿ ದುಷ್ಕೃ
ತ್ಯವನೆಗಳ್ವಡದಂ ಕಡೆಗೆ ಪರ
ಶಿವವ್ರತಂಗಳೊಳಗ್ರಮಾಗಿಹ ಸೋಮವಾರದೊಳು
ತವೆ ಉಪೊಷಣದಿಂ ಸಗಲ್ಕಳೆ
ದವಗಡದಿರಾತ್ರಿಂಗೆ ಫಲಗಳ
ಸವಿದು ನಿದ್ರಿಸಲಾಗ ದೌಷ್ಟದಿಮರಣ ಪೊಂದಿದನು ೨೦

ಇಂದುವಾರುಪವಾಸದಿಂ ಮೃತಿ
ಪೊಂದಿದಸುಫಲಕಾಗಿಯಿವನಂ
ಕಂದುಗೊರಲನ ಹೇಳಿಕೆಯೊಳತಿ ಶೀಘ್ರದಿಂ ನಾವು
ಬಂದು ಮಹದುತ್ಸವದಿ ಪುಷ್ಪಕ
ಮಂದಿರದೊಳಿಟ್ಟುಘೆಯೆನುತನುಲು
ವಿಂದ ಶಿವನೊಡ್ಡೋಲಗಕೆ ಕರಕೊಂಡು ಪೋಗುವೆವು ೨೧

ಭಾಳನೇತ್ರನ ಚರರ ನುಡಿಯನು
ಕೇಳಿ ಕಾಲನು ವಿಸ್ಮಯದಿತ
ನ್ನಾಳುಗಳ ತಿರುಗಿಸುತ ತನುಕಂಪಿಸುತ ಕಾಲ್ಗೆರಗಿ
ಹಾಳುಗೋಷ್ಟಿಗೆ ಪೋಗಿಯಂಗದಿ
ದೂಳುಧರಿಸಿದ ಮೂಢನಂತಾಂ
ಕಾಳು ಪೋಗುವೆನೆಂಬ ಭಯದಿಂದಪ್ಪಣೆಯ ಕೇಳ್ದ ೨೨

ಬೇಗದಿಂಕಾಲನಿಗೆ ಬೀಳ್ಕೊಡ
ಲಾಗ ತನ್ನಯ ಪಥವ ಪಿಡಿದನು
ರಾಗದಿಂಶಂಕರ ಗಣಂಗಳು ರಜತ ಪರ್ವತದಿ
ಮೊಗೆ ಸವ ಶಿವನ ಸನ್ನಿಧಿಗೆ ಬಂ
ದಾಗಮೋಕ್ತ ಧ್ಯಾನದಿಂ ಶಿರ
ಬಾಗಿ ಪುಷ್ಪಕದಿಂ ವಿರಾಟನಯಿಳಿಸಿ ನಿಲಿಸಿದನು ೨೩

ವರವಿರಾಟ ನೃಪಾಲಕನ ಮೇಲರಳ ಮಳೆಗರೆದರು
ಸುರರು ಕಿನ್ನರರು ಗಾನವ
ಮಾಡಿದರ ನೆರದಿರ್ಪ ಗಣವೃಂದ
ಪರಮಪುಣ್ಯೋದಯನೆನುತ ಪರಿ
ಪರಿವರಣಿಸುತ್ತಿರಲು ಗಿರಿಜಾ
ವರನುಹರಗಣಪದವಿಯನ್ನವಗಿತ್ತು ಪಾಲಿಸಿದ ೨೪

ಮಗನೆ ಚಂದ್ರನವಾರವ್ರತ ಫಲ
ಮಿಗಿಲೆನಿಪುದಿದನಾರುಕರಗಳ
ಮುಗಿದು ಕೇಳಿದ ಪೂಜಿಸಿದ ಪರಿಸಿದ ಜನಾಳಿಂಗೆ
ಜಗದೊಳಧಿಕಾಧಿಕ ಮೆನಿಸಿರ್ಪ
ಭಾಗ್ಯ ಕೈಲಾಸಾದ್ರಿಯಲಿ ಶಿವ
ಬಗೆ ಬಗೆಯ ಸುಪದಗಳನೀವನು ಕೇಳು ಸೋಮಯ್ಯ ೨೫

ಪ್ರೇಮದಿಂದಿನ್ನೊಂದು ಪೇಳ್ವೆನು ।
ಮಾ ಮಹೇಶ್ವರ ವ್ರತವ ನಿನ್ನಗೆ
ತಾಮರಸ ಸಖ ವೃಶ್ಚಿಕದರಾಸಿಂಗೆ ಬಂದಿರ್ಪ

ಭೂಮಿಯೊಳು ಪೌರ್ಣಿಮೇ ತಿಥಿಯೊಳು
ನೇಮದಿಂ ಮಾಡುವ ವಿಧಾನವ
ರಾಮಣೀಯಕ ಶಾಸ್ತ್ರ ಸಂಗತಿ ತಿಳಿಸುವೆನು ನಿನಗೆ ೨೬

ಮೇಲೊರೆದ ತಿಥಿಯಲ್ಲಿ ಪ್ರಾತಃ ।
ಕಾಲದೊಳು ಸ್ನಾನವನುಗೈದು ವಿ
ಶಾಲಮತಿಯಲಿ ಚಿನ್ನದಿ ಶಿವಶಿಲೆಯ ಪ್ರತಿಮೆಯನು
ಮೇಳದಿಂ ಗೈಸುತ್ತವುಗಳನು
ಲೀಲೆಯಿಂದರ್ಚಿಸುತ ಜಂಗಮ
ಜಾಲಕುಣಬಡಿಸುತ್ತ ಕಾಣಿಕೆಯಿತ್ತು ಕಳಿಸುವದು ೨೭

ಹಿಂದೆ ಜಾತ್ಯಾಂಧತ್ವದಿಂ ತೃಣ
ಬಿಂದು ಮುನಿಪತಿ ಯೀ ವ್ರತದ ವರ
ದಿಂದ ಕಣ್ಗಳ ಪಡೆದ ಇಂದ್ರ ಜಯಂತನಂ ಪಡೆದ
ಇಂದಿರಾಪತಿ ಕೃಷ್ಣನಾಮದಿ
ಬಂದು ಭುವಿಯೊಳಗಖಿಳ ಸುತರಂ
ಸುಂದರಾರ್ಧಾಂಗಿನಿಯರಿಂ ಪಡಕೊಂಡ ನೀ ವ್ರತದಿ ೨೮

ವನಜಭವ ಗಾಯತ್ರಿ ಸಾವಿ
ತ್ರೆನಿಪುಭಯ ಸತಿಯರನು ಪಡಕೊಂ
ಡನು ವಶಿಷ್ಟನು ಕಾಮಧೇನುವ ಪಡೆದ ಗೌತುಮನು
ತನಯನೋರ್ವನ ಪಡೆದು ಬಾಳಿದ
ಜನಕರಾಯನು ಸುರಪುರಕೆ ನಡೆ
ದನುಪಮದ ರಂಭೆಯೊಳು ಕ್ರೀಡಿಸಿ ಬಂದ ಭೂತಲಕೆ ೨೯

ಸಿಂಧುಸೇನ ನೃಪಾಲ ಕಂಸ
ಧ್ಗಂಧಿಯೆಂಬರ್ಧಾಂಗಿಯಿಂದೆವ
ಸಂಧರಿಯ ಪಾಲಿಸುತ ಸಕಲೈಶ್ವರ್ಯದಿಂ ಕೂಡ್ದು
ಕಂಧರದಿ ನವರತ್ನಹಾರಗ
ಳಂಧರಿಸಿ ಕಂಗೊಳಿಪ ನೂತನ
ಸ್ಯಂಧನ ವನಡರ್ದನುದಿನದಿ ವೈಹಾಳಿಗೈತಿರ್ದಂ ೩೦

ಪರನೃಪರು ಬಂದಿವನ ಸಂಪದ
ದಿರವನೆಲ್ಲವನಪಹರಿಸ ಪರಿ
ಪರಿಯೊಳವನಂ ಸದೆಬಡಿದು ಸತಿ ಸಹಿತ ಮನೆಬಿಡಿಸಿ
ಗಿರಿನಿಕರ ಕಾಂತಾರ ಮಧ್ಯದಿ
ಪಿರಿಯ ಪುಲಿಗಜಸಿಂಹಕರಡಿಗ
ಳಿರುವ ಸ್ಥಲದಲಿ ಬಿಟ್ಟು ರಾಜ್ಯಕ್ಕರಸರೆನಿಸಿದರು ೩೧

ಸತಿಪತಿಗಳಾ ವಿಪಿನ ಮಧ್ಯದೊ
ಳತಿಶಯಾನ್ವಿತ ಕಷ್ಟದೊಳು ದಿನ
ಗತಿಯೊಳಿರುತಿರಲೊಂದು ದಿನದಿಯಗಸ್ತ್ಯ ಮುನಿವರನ
ಹಿತದಿ ಕಂಡಡಿಗೆರಗಿ ಪೂಜಿಸಿ
ಪತಿತ ಪಾವನನೆಂಬ ಬಿರುದಿನ
ಯತಿ ಕುಲಾಗ್ರಣಿ ಯನ್ನ ರಕ್ಷಿಪುದೆಂದು ನುತಿಸಿದನು ೩೨

ಎಲವೊ ನೀನಾರೆನ್ನನೀ ಪರಿ
ಪಲವು ಬಗೆಯಿಂಬಿಡಸಿ ನುತಿಸಿದ
ಹೊಲಬದೇಂ ತೀವ್ರದಲಿ ಪೇಳೆನಲಾಗ ನೃಪವರನು
ನೆಲದೊಳಗೆ ದೊರೆಯಾಗಿ ರಾಜ್ಯವ
ನಲುವಿನಿಂದಾಳುತ್ತಿರಲ್ಪರ
ಬಲದ ಬಂದಿರದೆನ್ನಿಸದೆ ಬಡೆದಡವಿಗಟ್ಟಿದರು ೩೩

ಕಾಡಿನೊಳು ಫಲಕಂದ ಮೂಲವ
ನೋಡಿ ತಿನ್ನುತ ವ್ಯಸನದಿಂ ಸತಿ
ಗೂಡಿರುವೆನೆನ್ನಯ ಪೆಸರುವರ ಸಿಂಧುಸೇನನೃಪಂ
ಬೇಡಿಯನ್ನವ ಸವಿವೆವೆಂದರೆ
ನೀಡಿತೃಪ್ತಿಪರಾರು ಕಷ್ಟದಿ
ಬಾಡಿ ಕಾಲಕ್ರಮಣ ಮಾಳ್ಪೆವು ಹೇಳಲಸದಳವು ೩೪

ವರಮುನಿಯೆ ನೀನಾಲಿಸೆನ್ನಯ
ತರುಣಿಮಣಿಯಳ ತಳಿರಿನಂತಿಹ
ಚರಣಗಳು ಹಳೆಕೊರಡಿಗೇ ಸಮವಾದ ವೈ ಶಶಿಯ

ಪರಮ ಮಂಡಲದಂತೆಸೆವ ಮುಖ
ಮಿರದೆ ರಾಹುಗ್ರಸ್ತದಂತಾ
ಯ್ತರರೆ ಪಾರಬ್ಧದ ಕುಯೋಗವದೆಂತಿಹುದೊ ಕಾಣೆ ೩೫

ಉದಕದಂದದಿ ತೋರ್ಪ ಸುದತಿಯ
ಉದರವಾಕಾಶಕ್ಕೆ ಸಮವಾ
ಯ್ತಿದನು ನೋಳ್ಪೆನ್ನಕ್ಷಿ ಗುಡ್ಡಿಗಳೇಕೆ ಕೆಡೆದಿಳೆಗೆ
ಉದರದಿರುವವು ಸಂಕಟದ ಸಮ
ಯದಿ ಮನುಜರಿಗೆ ಮರಣಗಾಲವು
ವದಗದೆಂಬುವ ನಾಣ್ಣುಡಿಯು ಎನ್ನನುಭವಕೆ ಬಂತು ೩೬

ಅನಿತರಲಿ ನೃಪನರಸಿ ದುಃಖದಿ
ಮುನಿವರೇಣ್ಯನ ಪಾದಯುಗ್ಮದ
ವನಜಗಳಿಗೆ ನಮಿಸುತ ನುಡಿದಳು ಯೆನ್ನವಲ್ಲಭನ
ಜನಪದತ್ವದ ಭೋಗಭಾಗ್ಯದ
ಘನತೆಯನು ವಿತರಣ ಸುಗುಣಗಳ
ನಿನಿತೆನುವರನು ಕಾಣಲಿಲ್ಲಾ ಕಾಲದಲಿ ನಾನು ೩೭

ಪರಮ ಪಕ್ವಾನ್ನ ವಸವಿದಭೂ
ವರನ ಬಾಯ್ಗೆ ಫಲಗಳ ಛತ್ರದ
ನೆರಳಿನೊಳು ಸಂಚರಿಸಿದಂಗಕೆ ಗಿಡದನೆಳಲಿನ್ನು
ಮೆರವಸಿಂಹಾಸನವನೇರುವ
ಚರಣಯುಗ್ಮಕೆ ಕಲ್ಲು ಮುಳ್ಗಳ
ನರರೆ ವಿಧಿ ತಂದಿಟ್ಟನಿದನಾನೋಡಲೆಂತಕಟ ೩೮

ಎಸೆವ ಮೃದುವಾಸಿಗೆಯೊಳೊರಗುವ
ವಸುಧಿಪನ ಧೂಳಿಯೊಳು ಹೊರಳುವ
ಬಿಸಿಲನೋಡದ ಕೋಮಲಾಂಗನು ಕಡು ಬಿಸಿಲೊಳಿರುವ
ಹಸುವಿನಮೃತವ ಸವಿದ ಕಾಂತನು
ಹಸಿಯ ಕಾಯ್ಗಳನರಸಿ ತಿನ್ನುವ
ವಸನಧರಿಸುವ ಮತ್ತಿಯನು ಬರಿಯಂಗದಿಂದಿರುವ ೩೯

ವನವೆ ನಿರ್ಮಿಸಿದರಮನೆಯು ಕಾ
ನನವೆ ಮುಖ್ಯ ವಿಹಾರ ಸ್ಥಾನವು
ದಿನವೆ ರಾತ್ರಿಯು ಪಕ್ಷಿಮೃಗ ಸಂತತಿಯೆ ಪ್ರಜೆಗಳಿವು
ಮಿನುಪ ಸಿಲೆಯದೆ ಸಿಂಹಪೀಠವು
ಇನಿತೆಸೆವ ರಾಜತ್ವ ಮತ್ತತಿ
ಯೆನಗೆ ಸಚಿವತೆಯಿತ್ತು ತಾನಾಳುವನರಸನಾಗಿ ೪೦

ಸುದತಿ ಮುನಿವರಗುಸುರ್ವ ರಾಜ
ತ್ವದ ನಡತೆಯಂ ಕೇಳಿ ಶೋಕಮು
ದೊದಗಲವನಿಪ ಸ್ವೈರಿಸುತ ಸತಿದುಃಖವನಾಲಿಸಿ
ಬೆದರದಾ ಮುನಿಪಂಗೆ ಮಣಿ ಮಣಿ
ದುದರದೊಳು ತುಂಬಿರ್ದ ಘನ ಶೋ
ಕದಿ ನುಡಿದ ಪೂರ್ವದಸುಸಂಪದವಿತ್ತು ಪೊರೆಯೆಂದ ೪೧

ಯೋಗಿವರ ನೃಪನಾಡ್ದದಕೆ ತಲೆ
ದೂಗಿ ತನ್ನಯ ಪಾದಯುಗ್ಮಕೆ
ಬಾಗಿದನ ಪಿಡಿದೆತ್ತಿಯಂಜದಿರೆಂದಭಯವಿತ್ತು
ಈಗ ಪೇಳುವ ನುಡಿಗಳೆಲ್ಲ ಶಿ
ವಾಗಮೋಕ್ತಿಗಳಿಹವು ನಿನ್ನಯ
ಮೇಗೆ ಸಂತಸ ವಿಟ್ಟೊರೆವೆ ದೃಢಚಿತ್ತದಿಂ ಕೇಳು ೪೨

ಕ್ಷಿತಿಪ ಲಾಲಿಸುಮಾಮಹೇಶ್ವರ
ವ್ರತವ ವಿಧಿಯಿಂ ಮಾಡಿದೊಡೆಯಾ
ರ್ಜಿತ ಪರಾಕ್ರಮದಿಂದವರನುರೆ ಜೈಸಿ ಮೊದಲಂತೆ
ವಿತತ ವೈಭವ ಪಡೆದು ಬಾಳುವಿ
ಪತಿತ ಪಾವನನೆನಿಪ ಶಂಕರ
ನತಿ ವಿಲಾಸದಿ ನಿನ್ನನಿಹಪರದಲ್ಲಿ ಪಾಲಿಸುವ ೪೩

ಶಿವನಿಗಿಂ ಶಿವಶರಣರಧಿ ಕೆಂ
ಬುವ ನುಡಿಯು ಸಟಿಯಹುದೆ ಮುನಿವರ
ಶಿವನೆ ನೀನೆಂದರಿದು ಮನದಿಂ ನಂಬಿದೆನು ನಾನು

ಅವಧಿ ಮಾಡದೆ ಪಾಲಿಸೆನ್ನನು
ಅವನಿಜನರರಿವಂತೆ ನೀನು
ತ್ಸವದಿ ಶರಧಿಯ ಜಲವನೀಂಟಿದಿ ಹೊಕ್ಕುಡುತೆಯೊಳಗೆ ೪೪

ಕುಂಭ ಮಧ್ಯದಿ ಮಹಿಮೆಯೊಳು ನೀ
ಸಂಭವಿಸಿವರ್ಧಿಸುತ ಪರತರ
ಶಂಭುವಿನ ಪಾದಾಂಬುಜಗಳಂ ಪೂಜಿಸುತ ಉಭಯೆ
ಶಂಭುವಿನ ರೂಪಾಂತರದಿ ಈ
ಕುಂಭಿನಿಯೊಳುದಿಸಿದಸುಪ್ರಾಣಿಗ
ಳಂಭರದಿರಕ್ಷಿ ಪುದಕ್ಕೈತಂದಿಹ ಮಹಿಮನಲ್ತೆ ೪೫

ಪ್ರೀತಿಯಿಂ ಮುನಿ ಸಿಂಧುಭೂಪಂ
ಗೋತುವ್ರತ ವಿಧಿ ತಿಳಿಸಿ ಪೇಳ್ಳೈ
ಸಾತುರದಿ ಸಂಚರಿಸಲಾ ನೃಪ ಪೇಳ್ದ ತೆರದಿಂದ
ಸೀತರರಧರನಮಳ ವ್ರತವು
ಖ್ಯಾತದಿಂದಾಚರಿಸಿ ನಿಗಮಾ
ತೀತ ಗೌರೀನಾಥನಂ ಮೆಚ್ಚಿಸಲು ತ್ಕಕ್ಷಣದಿ ೪೬

ಮಾರಮರ್ಧನ ನಪ್ಪಣೆಯೊಳು ಕು
ಬೇರನಾನ್ನೃಪನೆಡೆಗಿಳಿದು ಗಂ
ಭೀರದಿಂ ಯುದ್ಧದೊಳು ರಿಪುಕುಲರಾಯರನ್ನೊದೆದು
ಸಾರತರಸಾಮ್ರಾಜ್ಯವನು ಕೈ
ಸೇರಿಸುತ ಪೂರ್ವದ ಪುರದಿ ಶೃಂ
ಗಾರದಿ ಪಟ್ಟವನೆಸಗಿ ಸ್ವಸ್ಥಾನ ಕೈದಿದನು ೪೭

ಮಗನೆ ಕೇಳೀ ಸಿಂಧುಸೇನನು
ಜಗದೊಳಗೆ ವಾಸಿಸುತಲಂತ್ಯದಿ
ನಗಸುತಾಧವನೆಡೆಗೆ ತೆರಳಿದ ನೀನಿದನು ಮಾಡೆ
ಮಿಗಿಲೆನಿಪ ಸುತ ಸಂಪದವನೊಗೆ
ಮಿಗೆಯೊಳಾಗಳೆ ಪಡೆದು ಸುಖಿಸುವಿ
ನಗುತ ನಿನ್ನಯ ಸತಿವೆರಸಿ ವ್ರತನಡಿಪುದೆಂದುಸುರ್ದ ೪೮

ಗುರುವನೆ ವ್ರತಗಳ ಮಹಾತ್ಮೆಯ ।
ನರಿದೆನವು ಮಾಡಲ್ಕೆ ತೀರದು
ಹರಚರಗುರು ಪ್ರಸಾದದಿ ರುದ್ರಾಕ್ಷಿಯಿಂ ಮತ್ತಂ
ಚರಣ ಜಲದಿಂ ಭಸಿತದಿಂದೀ
ಧರಣಿಯೊಳು ಕಾಮಿತ ಫಲಂಗಳು
ದೊರೆವವೆಂಬಾಗಮದ ಸಾರವನೊರೆವುದ್ಯೆಯೆನಗೆ ೪೯

ಸುಲಭ ಸಾದ್ಯವ ಬಿಟ್ಟು ತೊಡಕಿನ
ಬಲೆಗೆ ಹಾಕು ವದಾವನ್ಯಾಯ ಮೆ
ನಲು ಗುರೂತ್ತಮನವನ ಗುರು ಚರಲಿಂಗ ಭಕ್ತಿಂಗೆ
ವಲಿದು ಪಾದೋದಕವನವರಿಗೆ
ಚಲನಮನಮಿಲ್ಲದೆ ಕೊಡಲು ತವೆ
ಸಲಿಸಿದರು ದಂಪತಿಗಳಾಗಳೆ ಗುರು ಪದಕ್ಕೆರಗಿ ೫೦

ಕುವರಿಮಂಗಲೆ ಕೇಳುನಿಲಯದಿ ।
ಶಿವಶಿವೆಯರನು ವ್ರತವಗ್ಯೆಯುತ
ಅವಿರಳ ಪರಂಜೋತಿ ಜಂಗಮು ಪಾದತೀರ್ಥವನು
ಸವಿದು ದುರ್ವಿಷಯಗಳವಾಸನ
ತವಿಸಿಚರಿಸುವ ಮನವನಿಲ್ಲಿಸಿ
ಶಿವನ ಧ್ಯಾನದೊಳಿರಲು ಈರ್ವಸುತೋತ್ತಮರ ಪಡೆವಿ ೫೧

ಜೇಷ್ಟಸುತನಿಂದೆಮ್ಮ ವಂಶಕ
ನಿಷ್ಟಸುತನಿಂ ನಿಮ್ಮವಂಶವು
ಸೃಷ್ಟಿಯೊಳು ವೃದ್ಧಿಪುದು ನಿನ್ನಯ ಪ್ರಥಮ ಮಗನನ್ನು
ಇಷ್ಟದಿಂದೆಮಗೀವೆನೆಂದೆ
ಳ್ಳಷ್ಟು ಯೋಚಿಸದೆನಗೆ ನಮಿಸೆನ
ಲಷ್ಟರೊಳು ಪತಿ ಸನ್ನೆವೆರಿಸಲ್ಕೆದ್ದು ನಮಿಸಿದಳು ೫೨

ಕಂತುಮರ್ದನುದರದಿ ಜನಿಸಿಯ
ನಂತ ಮಹಿಮವ ತೋರ್ಪನವಗೆ ಮ
ಹಂತ ಶಿವ ಮುನಿಯಂದು ನಾಮವನಿಟ್ಟು ಲೌಕಿಕದ

ಚಿಂತೆಯಿಂದೊಳಗಾಗದಭವನ
ಚಿಂತನದೊಳರೆಯರಡನೆಯ ಸುತ
ನಂತವಕದಿಂ ಪಡೆದು ಬಾಳುವಿರೆಂದ ಗುರುವರನು ೫೩

ಇಂದುಶೇಖರ ಗುರುವರೇಣ್ಯಾ
ನಂದವೆಷ್ಟುಳವಾಗಿಯವರಿಗೆ
ಬಂದ ಸಂಕಲ್ಪವ ಕಳೆದು ಇಷ್ಟಾರ್ಥ ಫಲವಿತ್ತು
ನಂದನ ಧನಾದ್ಯಖಿಳ ಸಂಪದ
ಕಂದುಗಳ ಮುಂದಿತ್ತು ಪಾಲಿಪ
ನೆಂದು ದಂಪತಿಗಳ್ಗೆಯಾಶೀರ್ವಚಿಸಿದನು ಜವದಿ ೫೪

ದೇಶಿಕೇಂದ್ರನು ಪೇಳ್ದ ನುಡಿಯಿಂ
ಕ್ಲೇಶಮೆಲ್ಲವನೀಗಿದುರ್ಗುಣ
ರಾಸಿಭಂಗ ಮೆದಾಗಿ ಮನದುಲ್ಲಾಸ ಮಿಗಿಲಾಗಿ
ನಾಶವಿರಹಿತನಾದ ತ್ರಿಭುವನ
ಧೀಶನಂ ನುತಿಸುತ್ತ ತಮ್ಮಯ
ಕೋಶಕೈದಿದರಾಗಳಾ ದಂಪತಿಗಳೊಂದಾಗಿ ೫೫

ಇಂತು ಕವಿ ಭೀಮಾಖ್ಯ ಪೇಳ್ದ ಮ
ಹಂತ ಮಾಹೇಶನ ಚರಿತ್ರವ
ಸಂತಸದಿ ಬರದೋದಿ ಕೇಳಿದವರ್ಗೆ ಪೇಳ್ದರ್ಗೆ
ಸಂತತಂ ಘನಭೋಗ ಭಾಗ್ಯಮ
ನಂತಮಿತ್ತಿಹ ಪರದಿ ಕೃತಿಕ
ರ್ತಂತವಕದಿಂ ಪಾಲಿಸಲಿಯತ್ಯಂತ ಹರುಷದಲಿ ೫೬

ಅಂತು ಸಂಧಿ ನಾಲ್ಕುಕ್ಕುಂ ಪದ್ಯಗಳು ೫೬ + ೧೧೦ = ೧೬೬ ಕ್ಕುಂ
ಮಂಗಲಂ

೫ನೇ ಸಂಧಿ

ಸೂಚನೆ: ಹರನ ವ್ರತಗಳಗ್ಯೆದು ಶ್ರೀಗುರು
ಚರಣ ಜಲಕೊಂದೀರ್ವ ಸುತರನು
ಸರಸದಿಂ ಪಡೆದೋರ್ವನನ್ನಿತ್ತರು ಗುರುಮಠಕ್ಕೆ

ಮೆರೆವ ತ್ರಿಭುವನದೇವನಿಂ ಭ
ಕ್ತರ ವಿಕಲ್ಪವ ಸೋಮನಂ ದು
ಸ್ತರದುರಿತವನದಾವನರವರ ಕಾವಕಾವನನುಂ
ಸ್ಮರಿಪರಿಗೆ ಸುಖಮೀವನಂ ಸ
ಚ್ಚರಣ ವೃಂದಕೆ ಜೀವನಂ ಶುಭ
ಚರಿತ ಪೂರಿತ ಭಾವಿನರಸ್ತುತಿಸುವೆನುಮೇಶನಂ ೧

ಶರಣಕಲ್ಪದ್ರುಮಮೆನಿಪ ಗುರು
ವರನು ಪೇಳ್ದಂತಾಗ ಸೋಮನು
ಹರನ ನುತಿಸುತ ಶುಭ ಮುಹೂರ್ತದಿ ಸುವರ್ಣಕಾರ್ಯದೊಳು
ವರಸುವರ್ಣದುಮಾ ಮಹೇಶ್ವರ
ರುಪ್ರತಿಮೆಗಳಗ್ಯೆಸುತಂ ದಿನ
ಕರನು ವೃಶ್ಚಿಕ ರಾಶಿಗ್ಯೆದಿದ ಹುಣ್ಣಿಮೆಯದಿನದಿ ೨

ಕತ್ತುರಿಯ ಸಾರಣೆಯ ಕುಂಕುಮ
ದಿತ್ತೆರದ ಕಾರಣೆಗಳಿಂ ಮನೆ
ಮುತ್ತಿನಿಂ ಗುಡಿಗಟ್ಟಿ ಪರಿಪರಿ ಕುಸುಮ ಜಂಜರಿಯ
ಮತ್ತ ಬಿಲ್ವದ ಪತ್ರೆ ಪರಿಮಳಿ
ಸುತ್ತಿರುವ ಪೂಗಂಧ ದ್ರವ್ಯಗ
ಳುತ್ತಮಭಸಿತ ಧೂಪದೀ ಪವನನುವಗೊಳಿಸಿದರು ೩

ತಳಿಗಿ ತೋರಣ ತಳ್ಳಿಸುತತ
ನ್ನಿಳಯಮಂ ಸಿಂಗರಿಸಿ ಚಿನ್ನದ
ಥಳಥಳಿಪ ಶಿವ ಶಿವೆಯ ಪುತ್ಥಳಿಗಳನು ಸಂಭ್ರಮದಿ
ತೊಳಪ ಗದ್ದುಗೆಯಲ್ಲಿರಿಸಿ ಗುರು
ತಿಳಿಸಿದಂತೆ ಗಣಂಗಳನು ಕರೆ
ದೊಲವಿನಿಂದರ್ಚಿಸಿ ಪದಾಂಬುವನೀಂಟಿದರು ಬಿಡದೆ ೪

ಭಕ್ಷಭೋಜ್ಯಗಳಂ ಗಣಂಗಳ
ಕುಕ್ಷಿತುಂಬಿಸಿ ಸೋಮಲಿಂಗನು
ದಕ್ಷಣೆಯನು ಸಮರ್ಪಿಸುತ ಪಾದಾಬ್ಜಗಳಿಗೆರಗಿ
ತಕ್ಷಣದಿ ಬೀಳ್ಕೊಟ್ಟು ಸತಿಸಹಿ
ತಕ್ಷಯ ಶಿವಾಧವನ ಧ್ಯಾನದ
ಲಕ್ಷದೊಳು ಮನವಗಲ ದಂತಿರುತಿರ್ದರಾಲಯದಿ ೫।

ಕರದಿ ಧರಿಸಿದ ಲಿಂಗದೊಳು ಮನ
ವರ ಮುಖದಿ ಪಂಚಾಕ್ಷರಿಯ ಮನು
ಕೊರಳೊಳಗೆ ತಳ್ತಿರುವ ಘನರುದ್ರಾಕ್ಷಿ ಮಾಲೆಯನು
ಶರೀರದೊಳು ಗುರುಪದ ಸೇವೆಯು
ನಿರುತ ಮಿಂತು ಸುಖೀಲೆಯೊಳು ಮೈ
ಮರೆದು ಗುರುಪೇಳ್ದಂತೆ ನಡಿಸಿದರಾಲಯದಿ ವ್ರತವ ೬

ಮೃಡನಲೀಲೆಯೊಳಿಂತು ಸಂಸ್ಕೃತಿ
ನಡಿಸುತಿರಲು ಸುಮಂಗಲೆಗೆ ಬಸು
ರಡರಲೊಳಗತಿನಡವು ಬೆಳೆದುದು ತ್ರಿವಳಿ ಮಾಜಿದವು
ಒಡನೆ ಮುಖ ಬೆಳ್ಪಾಯ್ತು ಬಲುನು
ಣ್ಪಿಡಿದು ಕುಚಯುಗ ಕೊಬ್ಬಿದವು ಕಾ
ಲ್ನಡೆಯು ಮಾಂದ್ಯಮದೆನಿಸಿತತಿವಡಬಾಸೆ ಕಪ್ಪಾಯ್ತು ೭

ಮಡದಿ ಮಣಿ ಮಂಗಲೆಯ ಮುಖಮಂ
ಬುಡುಪನಾ ಹಿಂದೆ ಸವಕೇಶದ
ಜಡಿಯ ಕಾಳೋರಗವ ನೋಡ್ದುರೆ ಬೆದರಿ ಬೆಂಡಾಗಿ

ಕೊಡ ಮೊಲೆಗೆ ತನ್ನಮೃತ ತುಂಬುತ
ಬಿಡದೆ ಬಾಯ್ಗರಗಿರಿಸಿದಂದದಿ
ಕಡು ವಿಚಿತ್ರದಿ ಚಂಚುಕದ್ಯುತಿ ಸತಿ ವಿರಾಜಿಸಿತು ೮

ಅರರೆ ಯನ್ನಯ ವೈರಿ ಮೃಗ ಪತಿ
ಮೆರವ ಕದಳಿಯ ವೃಕ್ಷ ಮೂಲದ
ಮರೆಗಿಹುದರಿಂದಿರ್ದ ಸುಖದೊಳು ಈಗರಿಯ ಲೆನ್ನ
ಪರಿವುದಕೆ ನಡು ಬಿಟ್ಟಹುದೆನು
ತ್ತುರುವೆಸನದಿಂದ ಮಿತ ಮಾಂದ್ಯವ
ಧರಿಸಿರುವದೆಂಬಂತೆ ತರುಣಿಯ ನಡೆ ವಿರಾಜಿಸಿತು ೯

ಗುರು ಕುಚದ್ವಂದ್ವಗಳು ಶೋಭಿಪ
ಗುರು ಜಠರ ಮೂಗುರು ಜಘನಗಳು
ಗುರು ತೊಡೆಗಳೆಸೆಯಲ್ಕೆ ಗುರುವೆನಿಸಿರ್ದಳೇಕೆನಲು
ಸರಸಿಜಾಕ್ಷಿ ಸುಮಂಗಲೆಗೆ ಶಂ
ಕರ ದಯೆದಿ ತನ್ನುದರದಿಜಗ
ದ್ಗುರು ಮಹಂತನು ನಿಶ್ಚಯದಿ ನೆಲಸಿರ್ಪಕಾರಣದಿ ೧೦

ವರ ಮಹಿಮದ ಮಹಂತಯೋಗೀ
ಶ್ವರ ಸುಮಂಗಲ ದೇವಿಗರ್ಭದಿ
ಕರಕಮಳ ಯುಗ ಮುಗಿದು ನೊಸಲೋಳ್ಸರಸದಿಂ ಹರನ
ಪರಮ ಯೋಗದಲಕ್ಷ ಬಲಿಯಲೆ
ತ್ವರದಿ ಕರಿಯಾಲಿ ಪ್ರಭಾಸ್ತನ
ವೆರಡರಗ್ರದಿ ಮೂಡಿದವೊಲೆಸದವು ಕುಚಾಗ್ರಗಳು ೧೧

ಒಳಗೆ ಸವ ಶಿವಯೋಗಿಯಾಗದ
ಮಳಬೆಳರ್ವಣ್ಗಂ ಪೊರಗೆ ತಾ
ನಳವಡೆದು ತಾತೀವಿತೆನೆ ಮಂಗಲೆಯ ತನುವಿನೊಳು
ನಳನಳಿಪ ಪೊಸವೆಳ್ಪು ಬಿಡದು
ಜ್ವಳಿಸಿದುದು ತತ್ಪ್ರತಿಯ ನಯನಂ
ಗಳಿಗೆ ತಾರಾಪತಿಯುಮುಗಿಲಾವರಸಿದಂತಾಗ ೧೨

ಸುದತಿ ಮಣಿಯಳ ಗರ್ಭಧವಳಾಂ
ಗಹ ಸುಸೊಂಪಂ ನೋಡ್ದು ನಯನದಿ
ಮದನ ಹರನಂ ಸ್ಮರಿಸಿ ಸಂತೋಷಿಸಿದನಾಪತಿಯು
ಬಿಡುವಿನನ್ನೊಳಗಿಟ್ಟು ಬಿಳ್ವೇ
ರಿದ ಮಹಾಮೂಡಣದಿಶೆಯನೇ
ತ್ರದಿ ನಿರೀಕ್ಷಿಸಿ ಘನ ಚಕೋರನು ಮುದವಗೊಂಡಂತೆ ೧೩

ಓಗಡಿಕೆ ಮೈಬೇನೆ ಕ್ಷಣಕ್ಷಣ
ಕಾಗುಳಿಕೆ ಪುಳಿಲವಣ ಫಲದೊಳು
ಬಾಗುಳಿಕೆ ಸನುಬಳಲಿಕೆಯ ನೋಟಗಳನುರೆ ನೋಡ್ದು
ನಾಗಧರನೊರದಿಂದೆಮತ್ಸತಿ
ಗೀಗ ಗರ್ಭವು ತೋರಿದುದು ಸುತ
ನಾಗುವದು ನಿಜಯೆಂದು ಸಮ್ಮುದಗೊಂಡನಂತರದಿ ೧೪

ಶಿವನ ಕಥೆ ಕೇಳುವ ಬಯಕೆ ಪರ
ಶಿವನ ಪೂಜಿಪ ಬಯಕೆ ಮುದದಿಂ
ಶಿವನ ಲಿಂಗವ ನಕ್ಷಿಯಿಂದೀಕ್ಷಿಸುವ ನಿಜ ಬಯಕೆ
ತವಕದಿಂ ಗುರುಲಿಂಗ ಜಂಗಮ
ರವಿರಳದತೀರ್ಥ ಪ್ರಸಾದವ
ಸವಿದು ಸುಖಿಪ ಮಹಾಬಯಕೆಯಿಂದಿರ್ದಳಾ ತರುಣಿ ೧೫

ಪಲವು ಗರ್ಭದ ಕಳೆಗಳಿಂತ
ಲ್ಲಲಲನಿಯೊಪ್ಪುತಿರಲು ಗ್ರಾಮದ
ನಿಲಯ ನಾರಿಯರೈದು ನೋಡುತ್ತತಿ ಮುದಂಬಿಟ್ಟು
ಮಲಹರನವ್ರತ ಮಹಿಮೆಯೊಳು ಸ
ಲ್ಲಲಿತ ಗರ್ಭವಧರಿಸಿದಳು ನಿಜ
ತಿಳಿಯಲಿದು ಸುಳ್ಳಲ್ಲೆನುತ ಶಿವನನ್ನು ಪೊಗಳಿದರು ೧೬

ಇರುತಿರುತ ನವಮಾಸ ತುಂಬ
ಲ್ತರುಣಿ ಮಂಗಲದೇವಿ ಸುಕಲಾ
ಭರಿತಸುತನುದ್ಭವಿಸಿ ಯೆನ್ನಯ ಬಂಜೆತನವನ್ನು

ಮರಿಸಿ ಸದ್ಗುರುವರನ ವಂಶವ
ಮೆರಿಸಲಿಳೆಯೊಳಗೆಂದು ತನ್ನಂ
ತರದಿ ಶಿವಶಿವೆಯರ ಮಹತ್ವವ ಸ್ಮರಿಸಿ ಪಾಡಿದಳು ೧೭

ಇಂತು ಮಂಗಲದೇವಿ ಮನದಿನಿ
ರಂತರದಿ ಶಿವಸ್ಮರಣೆಯೊಳು ತಾ
ಸಂತಸದಿ ಮನೆಗೆಲಸ ನಡಿಸುತ ಚರರ ತೃಪ್ತಿಸುವ
ಚಿಂತನೆಯೊಳಿರುತಿರಲು ಬೇನೆಯ
ದಂತಳೆದು ಶುಭತಾರೆ ಯೋಗದಿ
ಕಂತು ಮರ್ಧನನೊರದಿ ಪುತ್ರಪ್ರಸವಿಸಿದಳಾಗ ೧೮

ಅತ್ತ ರಂಭಾಪುರದಿ ಪರಮ ಗು
ರೂತ್ತಮನೆನಿಪ ಚಂದ್ರಶೇಖರ
ಚಿತ್ತಲಿಂಗದಿ ಲಯಿಸಿ ಪೂಜಿಸುತಿರಲು ಲಕ್ಷದೊಳು
ಇತ್ತ ಮಂಗಲದೇವಿ ಸುತನಂ
ಪೆತ್ತುದಾಕ್ಷಣದಿ ಕಳೆ ಪತ್ತುದದನರಿ
ವೆತ್ತು ಗಣ ಸಹಿತಾಗಮಿಸಿದನು. ಸೋಮನಪುರಕ್ಕೆ ೧೯

ಭರದಿ ಸೋಮಯ್ಯನ ಪರಮ ಮಂ
ದಿರವ ನೊಳ ಪೋಗಲಾಭಕುತ ಸ
ದ್ಗುರುವಿನ ಪದಕೆರಗಿ ಕರೆದೊಯ್ದುಮಿತ ಪ್ರೇಮದಲಿ
ತರುಳನಂ ತೋರಿಸಲು ತದ್ಗುರು
ವರಕಳೇಬರವನ್ನಿರೀಕ್ಷಿಸಿ
ಧರೆಯೊಳಗಣಿತ ಸಂತಸವಧರಿಸಿದನು ಮನದೊಳಗೆ ೨೦

ಪರಮ ಚಿನ್ನದ ಬೊಂಬೆಯಂತುರೆ
ಮೆರೆವಶಿಶುವಿನ ಮಸ್ತಕದಖಿಲ
ಕರಕಮಲವನ್ನೇರಿ ಫಣಿಯೊಳು ಭಸಿತವನ್ನಿಟ್ಟು
ಶರೀರದೊಳು ಶಿವಲಿಂಗವ ತಾ
ಧರಿಸಿ ಮೂಲ ಪ್ರಣವ ಕರ್ಣಕೆ
ಅರುಪಿದೀಕ್ಷೆಯನಿತ್ತು ಸದ್ಗುರು ಚಂದ್ರಶೇಖರನು ೨೧

ತರುಣನಂ ಪಿಡಿದೆತ್ತಿ ಮೋಹದಿ
ವರಕಳೇಬರವನ್ನಿರೀಕ್ಷಿಸಿ
ಮರುಕದಿಂ ಮುಂಡಾಡಿ ಮುದ್ದಿಸಿ ಪರಸಿ ಪದುಳದೊಳು
ಧರೆಯ ಜನರರಿವಂತವಗೆ ಪರ
ತರ ಮಹಾಂತನೆನಿಪ್ಪಪೆಸರಂ
ಕರೆದು ಪಾಲಿಪುದೆಂದುಸುರಿ ಗುರು ನಡೆದನುತ್ಸವದಿ ೨೨

ಶಿವನ ಧರ್ಮವೆ ಶಿಶುವಿದಾದುದೊ
ಶಿವನ ತೇಜವೆ ಮೂರ್ತಗೊಂಡಿತೊ
ಶಿವನ ಪರಮಾಚಾರವೇ ರೂಪಾಗಿ ಶೋಭಿಪುದೊ
ಶಿವನವ್ರತವನುಗ್ಗೈದದಕೆಯಾ
ಶಿವನೆಯವತರಿಸಿಪ್ಪನೋ ಇದು
ಶಿವನೆ ಬಲ್ಲನೆನುತ್ತ ಮಂಗಲೆ ನಲಿದಳಂತರದಿ ೨೩

ದಿನಕರನು ಭೂಬಳಬಳಸಿ ತಾ
ಮನದಣಿದು ತಾಪಾಂಶುಗಳನುಂ
ಮುನಿದು ಎಳೆರಸ್ಮಿಯನುತಳೆದುರು ಮೂರ್ತಿಮತ್ತಾಗಿ
ಜನಿಸಿದನೊ ಗುರು ಶಾಪದಿಂದಾಂ
ದಿನ ಗಳಿಯಲೇಕೆಂದು ಚಂದ್ರನು
ಮನುಜತನದಿಂದಿಳಿದನೆಂಬಂತೆಸೆಯೆ ಮಂಗಲೆಗೆ ೨೪

ಪನ್ನೆರಡು ದಿನದಲ್ಲಿ ವಿಭವದಿ
ಸನ್ನತಾಂಗತನೂಭವನ ಪೆಸ
ರನ್ನು ಲೋಕ ಪ್ರಸಿದ್ಧ ಮಾಳ್ಪದಕಾಗಿ ಸೋಮಯ್ಯ
ಉನ್ನತೋತ್ಸವದಿಂದ ನಾರಿಯ
ರನ್ನೆರಪಿ ನೂತನ ಸುದೊಟ್ಟಿಲ
ಚನ್ನೆಯರಕರದಿಂದೆ ಕಟ್ಟಿಸಿ ಸಿದ್ಧ ಮಾಡಿದನು ೨೫

ಕೇರಿ ಕೇರಿಗಳಿಂದ ಗ್ರಾಮದ
ನಾರಿಯರು ಗುಣಹಾರಿಯರು ತವೆ
ದಾರಿ ದಾರಿಯೊಳಾಗಮಿಪಾ ವಿಚಾರೆಯರು ತಮ್ಮ

ತೋರ ಮೊಲೆಗಳ ಭಾರದಿಂ ಮಿತಿ
ಮೀರಿ ಮುಂದಕೆ ತೂರಿ ನೇಹಮು
ತೋರಿಮೆಲ್ಲಗೆ ಸಾರಿ ಬಂದರು ಭೂರಿ ವಿಭವದಲಿ ೨೬

ನಡೆಗಳಿಂ ಅರಸಂಚೆಯಂ ಸವಿ
ನುಡಿಗಳಿಂ ಗಿಳಿ ಬಳಗಮಂ ಸೋ
ರ್ಮುಡಿಗಳಿಂ ವರಸೋಗೆಯಂ ನಿಡುಗುರುಳಿಮಳಿಕುಳಮಂ
ನಡುವಿನಿಂ ಮೃಗರಾಜನಂ ನಿಡು
ತೊಡೆಗಳಿಂ ವರಕದಳಿಯನ್ನೆಡೆ
ವಿಡದೆ ಮರಿಸುತ್ತೊಡನೆ ಬಂದರು ಲವಲವಿಕೆಯಿಂದ ೨೭

ನೆರೆದ ಪ್ರಮದೆಯರಲ್ಲಿ ಯೋರ್ವಳು
ವರಶಿಶುವಿನವಯವಗಳನು ನೋ
ಡ್ದಿರದೆ ಮುದ್ದಿಸಿ ಮೋಹದಿಂ ಮುಂಡಾಡಿ ಮನದೊಳಗೆ
ಹರನು ಸ್ಮರನಂ ದಹಿಸಲವನೀ
ಧರೆಗೆ ಪ್ರತಿರೂಪವಧರಿಸಿ ಬಂ
ದಿರುವನೆಂದಾಲೋಚಿಸಿದರತ್ಯಚ್ಚರಿಯ ಗೊಂಡು ೨೮

ವರಮರುದ್ವತಿ ಚಾಂಗುಣಿಯರರು
ತರಸುಭಕ್ತಿಯೊಳೀಶ್ವರನ ಪದ
ಸ್ಮರಿಸಿ ಮಾರ್ಕಾಂಡೇಯ ಚೀಲಾಳೆಂಬ ನಿಜ ಸುತರಂ
ಸರಸದಿಂ ಪಡೆದಿರ್ಪುದಂ ಗುರು
ಹಿರಿಯರಿಂದರಿದಿರ್ದವೀ ಸ
ಚ್ಚರಿತೆ ಮಂಗಲೆ ಪಡೆದುದಂ ಕಣ್ಣಾರೆ ನೋಡಿದೆವು ೨೯

ಸುತವಿಹೀನೆಯರಾದ ಕೆಲಕುಲ
ಸತಿಯರಾ ಮಂಗಲೆಯ ತೆರ ಶಿವ
ವ್ರತವ ಗೈದಧವನನೊಲಿಸಲೆಮಗಿಂಥ ಪುತ್ರನನುಂ
ಹಿತದೊಳಿತ್ತಪನೆಂದು ತಮ್ಮೊಳು
ಮೃತಿಹತನ ನಾಮಸ್ಮರಣೆಯ
ನ್ನತುಲ ಸದ್ಭಕ್ತಿಯೊಳುಗೈದರು ಸಂಸ್ಕೃತಿಯ ಮರೆದು ೩೦

ಯುವತಿ ಮಂಗಲೆ ಭಕ್ತಿ ಭಾವದಿ
ಶಿವವ್ರತವನಾಚರಿಸಿ ಮಂಗಲ
ಕುವರನಂ ಪಡದನಿಬರಿಗೆ ಶಿವಭಕ್ತಿಭೀಜವನು
ಅವನಿಯೊಳು ಬೆಳೆದುಣವ ರೀತೆಯ
ಪ್ರವಿಮಳತೆಯಿಂ ತೋರ್ದಳರಿಯ
ಲ್ಕವಳ ಸಮ ಪುಣ್ಯಾಂಗನಿಯರಿಳೆಯಲ್ಲಿ ಜನಿಸುವರೆ ೩೧

ಹಿಂದೆ ಅಮ್ಮವ್ವೆಂಬ ಶರಣೆಯು
ಇಂದುಧರನಂ ಸ್ಮರಿಸಲಾತನು
ಬಂದು ಸುತನೆನಿಸಿದನದೆಂಬುದು ಶಿವಪುರಾಣದಲಿ
ಚಂದದಿಂ ಕೇಳಿರ್ದವೀಗೀ
ಸುಂದರಿಗೆ ಶಿವ ತನ್ನ ಚಿತ್ಕಲೆ
ಯಿಂದ ಶಿಶುವಂ ಇತ್ತುದಂ ಕಣ್ಣಿಂದ ನೋಡಿದೆವು ೩೨

ಭುವಿಯೊಳಿವಳೇಂ ಸುಕೃತಿಯೋಮೇ
ಣಿವಳ ಪತಿವ್ರತೆ ಯೆಂತಿಹುದುಂ ಮ
ತ್ತಿವಳ ಶಿವಭಕ್ತಿ ಪ್ರಭಾವಮದೆಂತು ಬಣ್ಣಿಸಲು
ಅವನಿ ಜನರಿಂದಾಗದಿದು ಪರ
ಶಿವನೆ ಬಲ್ಲನೆನುತ್ತ ನೆರದಿಹ
ಯುವತಿ ತಂಡದಲೊರ್ವಳಿಗೊರೆದಳತಿ ಮುದದಿ ೩೩

ನಾಗಪತಿ ಸಮಗಮನಿಯರು ವರ
ನಾಗವೈರಿಯ ಸಮಕಡಿಯವರು
ನಾಗನಿಭಸಮವೇಣಿಯರು ನಾಗಧರ ಭಕ್ತಿಯರು
ಬಾಗಿ ಬಳಕುತ ಬಂದು ಸೋಮನ
ಬಾಗಿಲವನೊಳಪೊಕ್ಕು ತಂದಿಹ
ಬಾಗಿನವನಿಚ್ಚೊಲಿದು ನೋಡುತ್ತಿರ್ದರಾವಿಭವ ೩೪

ಉನ್ನತ ಸುತೇಜದೊಳು ಪರಮ ಪ್ರ
ಸನ್ನತೆಯೊಳಭವನ ಕಲಾಸಂ
ಪನ್ನತೆಯೊಳೀ ಶಿಶುವಿನಂದದಿ ಪೋಲ್ವ ಕುವರನನುಂ

ಮುನ್ನ ನೋಡಿದುದಿಲ್ಲ ವೀಗವ
ನನ್ನು ನೋಡ್ದೆವು ಶಿವನ ಕೃಪೆಯಿಂ
ನಿನ್ನ ಸುಕೃತಮಿದೆಂದು ನುಡಿದರು ಕೆಲರು ಮಂಗಲೆಗೆ ೩೫

ನೋಡಿದರ್ತಲೆ ನಲುಗಿಸುತ ಕೊಂ
ಡಾಡಿದರ್ನಲಿದರ್ಸುಖದೊಳೋ
ಲಾಡಿದರ್ಮುಖಮಂ ನಿರೀಕ್ಷಿಸಿ ಚುಂಬಿಸುತ ಮುದ್ದು
ಬೇಡಿದರ್ಮುಂಗುರುಳಗಳನುರೆ
ತೀಡಿದರ್ಬಾರೆಂದು ಕರಗಳ
ನೀಡಿದರ್ಪಿಡಿದೆತ್ತಿ ತೊಟ್ಟಿಲೊಳಿಟ್ಟರಾಸುತನ ೩೬

ವೀರಶೈವೋದ್ಧರಣ ಜೋಭಯ
ದೂರ ಸನ್ನುತ ಚರಣ ಜೋವೃಷ
ದೇರ ಧರ್ಮಾಭರಣ ಜೋಘನಸಾರಸುಖಕರ ಜೋ
ಭೂರಿ ಕೀರ್ತಿದಿಗಂತ ಜೋ ಸುವಿ
ಚಾರ ಯುತ ಧೀಮಂತ ಜೋ ಗಂ
ಭೀರ ಮಹಿಮ ಮಹಂತ ಜೋಯೆನುತೊಪ್ಪಿ ತೂಗಿದರು ೩೭

ಇಂತು ನೆರದಿಹ ಪ್ರಮದೆಯರು ಘನ
ಸಂತಸದಿ ತೊಟ್ಟಿಲವ ತೂಗಿ ಮ
ಹಂತನಂ ಸ್ಮರಿಸುತ್ತ ತಮ್ಮಾಲಯಕೆ ಪೋಗಲ್ಕೆ
ಸಂತ ಪೋಷಕ ಬಂದನವನ
ತ್ಯಂತ ಪ್ರೀತಿಲಿ ಸರ್ವರಿಗೆ ತಿಳು
ಪಂತೆ ಸಾರಿದವೆಂಬವೋಲ್ಕೂಗಿದವು ಕೋಳಿಗಳು ೩೮

ಪೊಡವಿಯೊಳು ಸೋಮಯ್ಯ ಮಂಗಲೆ
ಮೃಡನ ಮೆಚ್ಚಿಸಿ ಪೂಜ್ಯ ಪುತ್ರನ
ಪಡೆದರಿನ್ನವನೋಲ್ ಪ್ರಕಾಶಮದೆಮ್ಮೊಳಿನಿತಿಲ್ಲ
ಗಡನೆಯೆಳಿಯುವದೊಳಿತೆನುತ ಬಲು
ಮಿಡುಕಿ ಭೂಮಿಗೆ ಕೆಡೆಯವೋಲಾ
ಉಡುಗಳೆಲ್ಲವು ಉದುರಿದವು ನಿಸ್ತೇಜವಾಗುತಲಿ ೩೯

ಅರಘಳಿಗೆ ವಿಶ್ರಾಂತಿಯಿಲ್ಲದೆ
ಚರಿಸುತಿರ್ಪನು ಆವ ಕಾಲದಿ
ಅರರೆಯೆನ್ನಯ ಪರಿಕರವ ಪರಿಹರಿಪರಿಲ್ಲೆಂದು
ಹರನೊರದಿ ಜನಿಸಿದ ಮಹಂತನ
ದರುಶನಕೆ ಬಂದಂತೆ ವರಭಾ
ಸ್ಕರನು ಮಾಡಿದನಿಂದ್ರ ದೆಶೆಯೊಳು ಲೋಕವರಿವಂತೆ ೪೦

ಶಿವನ ನೆನಿವಂತೊಮ್ಮೆ ಕಣ್ಮುಗಿ
ಯುವ ಪ್ರಪಂಚವು ಜಡಮಿದೆಂದರಿ
ದವನು ನಗುವಂ ಒಮ್ಮೆ ಮಂದಸ್ಮಿತವ ಬೀರುವನು
ಅವಿರಳ ಸುಭಕ್ತಿಯ ಪಿಡಿವವೋ
ಲ್ತವೆ ಕರಂಗಳ ಮುಟ್ಟುಡವನೊ
ಮ್ಮೆವದೆಗೆದುತನ್ಮಾತೆಯನು ನಿಟ್ಟಿಸಿ ವಿನೋದಿಸುವ ೪೧

ಹರನು ಮುನಿಗಳ ಹೃದಯಗೊಳು ತಾ
ಬೆರೆದು ಬಿಡದೆ ಸವಾದಮಂತಾ
ವಿರಚಿಸುಲ್ತೆಳೆಗರುಪುವನೊಯೆಂಬಂತೆ ಕುಳ್ಳಿರುವ
ಧರೆಗೆ ರಾಗಮನಿತ್ತು ನಡೆಯುವ
ತೆರದಿ ದಟ್ಟಡಿಯಿಡುವ ಶಿವಯೆಂ
ಬರುವೆ ನಿಜಮಿಕ್ಕೆಲ್ಲ ತೊದಳೆಂಬಂತೆ ತೊದಳಿಸುವ ೪೨

ಎನ್ನ ಪಂಜರ ಗಿಳಿಯೆ ಮಾತಾ
ಡೆನ್ನಪಿಕ ಮರಿಯೇ ಧ್ವನಿಯಮಾ
ಡೆನ್ನ ಕಲಹಂಸವೆ ನಡೆಗೆ ತೋರೆಂದು ಹಂಬಲಿಸಿ
ಸನ್ನುತಾಂಗ ಮಹಂತನೆಸಗಿದ
ಉನ್ನತೋನ್ನತ ಲೀಲೆಯೊಳು ತಾ
ಮುನ್ನಿನತಿವ್ಯಸನವನು ಮರೆದಿರ್ದಳು ಸುಮಂಗಳೆಯು ೪೩

ಅರಳೆಲಿಯು ಫಾಲದೊಳು ಕುಣಿಯಲು
ಕರಣದೊಳು ಕುಂಡಲಗಳಾಡಲು
ಚರಣದೊಳುಗೆಜ್ಜೆಗಳು ಗುಲ್ಲುಗ್ಲೆಂದು ಧ್ವನಿಗೊಡಲು

ಮೊರೆವ ಮೊಳೆವಲ್ಲೊರೆ ಮುಗುಳ್ನಗೆ
ಮರುಕದಿಂದಲಿ ಬೀರೆ ಮಾತೆಯ
ಕರದ ತಾಳಕೆ ಕುಣಿಯುತಿರೆ ಜನ ನೋಡಿ ಹಿಗ್ಗಿದರು ೪೪

ಒದ್ದು ಕಾಲನ ತಲೆಯ ಮೇಲುರೆ
ಗುದ್ದಿ ಕೊಲ್ಲುವೆನೆಂಬ ರೀತೆಯ
ಸದ್ದು ಮಾಡದೆ ತನ್ನುಭಯ ಪದವೆರಡು ಕರಗಳನು
ತಿದ್ದಿ ಚಾಚುತ್ತಮಿತ ಶೌರ್ಯದಿ
ಮುದ್ದಿಯನುಗೈದಿಳೆಗೆ ತೋರಿಸಿ
ಮುದ್ದು ಮಗನನು ನೋಡಿ ಮಹದಾನಂದ ಪೊಂದಿದಳು ೪೫

ಧೀರ ಮಾಂತೇಶ್ವರನಿಗಂದಿಗೆ
ಮೂರು ವರುಷವು ಮೀರಲಾಸುವಿ
ಚಾರಿ ಮಂಗಲದೇವಿ ಮತ್ತೋರ್ವ ತನೂಭವನಂ
ಮಾರಹರನೊರಹಿಂದೆ ಪಡೆದೀ
ಧಾರಣೀ ವಲಯದೊಳವಗೆ ಕರಿ
ವೀರನೆಂಬಭಿದಾನವಿಟ್ಟುದ್ಧರಿಸಿದಳು ಕುಲವ ೪೬

ಐದು ವರುಷದ ಮಾಂತನಂಬಿಡ
ದೈದು ರಂಭಾಪುರಕೆ ಗುರುವರ
ಗೈದೆಯವನನ್ನಿತ್ತು ಮಂಗಲದೇವಿ ಪದಕೆರಗಿ
ಐದಲೆಯ ಸಮನಾಗಿ ತೋರುವ
ನೈದೆಲೆಯ ಪತಿ ಶೇಖರನೆ ಮು
ತ್ತೈದೆಯಾಗಿರುವಂತೆ ಪರಸೆಂದೊಲಿದು ನುತಿಸಿದಳು ೪೭

ಚಲುವ ಮಾಂತನ ಕಂಡು ಗುರುವರ
ನಿಲದೆ ದಂಪತಿಗಳನು ಪರಸು
ತ್ತೊಲವಿನಿಂ ಕಳಿಸುತ್ತಲಾ ಬಾಲಕನ ಸುಕಳೆಗಳಂ
ಲಲಿತ ಸಾಮುದ್ರಿಕ ಸುಶಾಸ್ತ್ರದ
ಫಲವು ಲಕ್ಷಣ ರೇಖೆಗಳು ಕರ
ತಲದೊಳಿರ್ದುದು ನೋಡುತೆ ಮನೋಬುಜ ವಿಕಾಸಿಸಿತು ೪೮

ಇಂತು ಭೀಮಾಖ್ಯ ಪೇಳ್ದ ಮ
ಹಾಂತ ಮಹೇಶನ ಸುಚರಿತ್ರವ
ಸಂತಸದಿ ಬರೆದೋದಿ ಕೇಳಿದವರ್ಗೆ ಪೇಳ್ದರ್ಗೆ
ಸಂತತಂ ವರ ಭೋಗ ಭಾಗ್ಯಮ
ನಂತ ಮಿತ್ತಿಹ ಪರದಿಕೃತಿಕ
ರ್ತಂತವಕದಿಂ ಪಾಲಿಸಲಿ ಯತ್ಯಂತ ಹರುಷದಲಿ ೪೯

ಅಂತು ಸಂಧಿ ೫ಕ್ಕಂ ಪದ್ಯಗಳು ೪೯+ಗತ ಪದ್ಯಗಳು
೧೬೬=ಒಟ್ಟು ಪದ್ಯಗಳು ೨೧೫ಕ್ಕುಂ
ಮಂಗಲಂ

೬ನೇ ಸಂಧಿ

ಸೂಚನೆ : ಬಸವಲಿಂಗ ಮಹಂತರಿಗೆ ಗುರು
ವಸೆದು ಅಯ್ಯಾಚಾರಮಂ ಗೈ
ದುಸುರಿದನು ಪಂಚಾಕ್ಷರಿಯ ಮಂತ್ರದ ಮಹತ್ವವನು

ನೀಲಗಳ ಸುರಪಾಲನತಸ
ಲ್ಲೀಲ ಪನ್ನಗ ಮಾಲ ಮನುಮುನಿ
ಜಾಲನುತಕರ ಶೂಲ ಮುಕ್ತಿಯೆ ಮೂಲ ಮಂದಿರನೆ
ಫಾಲನಯನ ವಿಶಾಲ ಮಹಿಮದ
ಯಾಲ ಪೂರಿತ ಶೈಲಜಾವರ
ಕಾಲ ಹರಗುಣಸೀಲಭಕ್ತರ ಪಾಲಿಸೈ ಸತತ ೧

ಧೀರ ಗುರು ಶಶಿಮೌಳಿಯಾ ಸುಕು
ಮಾರನೆನಿಪ ಮಹಂತ ಯೋಗಿಗೆ
ಆರು ವರಣಗಳಂ ಕರದಿ ತಾ ಬರೆದು ಸಮ್ಮುದದಿ
ತೋರಿಸಿದನಿದರಂತೆ ನೀಂ ಗಂ
ಭೀರದಿಂದೊಂದೊಂದಿವನು ನುಡಿ
ಮೀರದೀಗಳೆ ಲಿಖಿಸು ಲಿಖಿಸಿಂದೋದಿ ತೋರಿಸಿದ ೨

ಓದಿದಾರಕ್ಷರಗಳನು ಬಿಡ
ದೋದದಾ ಮಹಾಂತೇಶ ನುಡಿದ ನಿ
ದೋದಿದರೆ ಫಲವೇನು ಸುಮ್ಮನೆ ತಿಳಿಯದರ್ಥವನು
ಓದಿದೊಡೆ ಗಿಳಿಪಂಜರದಿ ಕಲಿ
ತೋದಿದಂತಹುದರ್ಥ ಸಹಿತೆನ
ಗೋದು ಬರಹಗಳೆರಡು ಕಲಿಸೆಂದೆರಗಿದನು ಪದಕೆ ೩

ಓ ಯನುವದನು ಗುರುವರನು ತಾ
ನಾಯತದೊಳೊರಿಯಲ್ಕೆ ಸುತ ಮಾಂ
ತೇಯನಿದೆಯದರರ್ಥ ಸಾರಾಂಶಗಳನೆಲ್ಲವನು
ಬಾಯಿಯಿಂದುಚ್ಚರಿಸಲಾ ಗುರು
ರಾಯ ಕೇಳ್ದತಿ ಚೋದ್ಯಗೊಂಡಿವ
ನಾಯವರಿಯದೆ ಯಾಕೆ ಪೇಳ್ದನೆನುತ್ತ ಯೋಚಿಸಿದ ೪

ಧರೆಯೊಳಗೆ ವಿದ್ಯಾರ್ಥಿಗಳಿಗಾ
ತುರದೊಳೊರೆವದು ಯೋಗ್ಯಮಲ್ಲದೆ
ಪರಮ ವಿದ್ಯಾಮೂರ್ತಿಗೊರೆಯಲಿ ಯೋಗ್ಯಮೆನಿಸುವದು
ತರುಳನಿವನೆಂದರಿದು ಪೇಳ್ದೊಡೆ
ಮರಳಿ ಪ್ರಣವಾರ್ಥವನು ಪೇಳಿದ
ನರರೆ ನರನಿವನಲ್ಲ ಹರನೌತಾರಿಕನೆ ಸಹಜಂ ೫

ಆರುಮೊಗದಿಂ ರಂಜಿಸುವ ಸುಕು
ಮಾರನಿಗೆ ಶಿವನಾಜ್ಞೆಯಿಂ ವರ
ಶಾರದಾಪತಿ ಯೊರದದಕ್ಕರ್ಥವನು ಪೇಳ್ದಂತೆ
ಸಾರ ಮಹಿಮಾಕಾರ ಮಾಂತ ಕು
ಮಾರ ಪ್ರಣವಾರ್ಥವನುಯೆನ್ನಗೆ
ಸಾರಿದನು ಇವನನ್ನು ನರನೆಂದಾರು ಭಾವಿಪರು ೬

ಶಿವನು ಸೋಮನ ರೂಪಮಂ ವರ
ಶಿವೆಯು ಮಂಗಲೆಯಂದ ಮಂ ಪರ
ಶಿವನ ಸುತ ಷಣ್ಮುಖನ ಕಳೆಯ ಮಹಂತ ಧರಿಸುತಲಿ
ಭುವನ ಮಂಡಲ ಪಾವನಕ್ಕಿವ
ರವತರಿಸಿ ಬಂದಿರ್ಪರಲ್ಲದೆ
ಕವನಮಲ್ಲಮ ಯೆನ್ನ ಸುಕೃತದಿ ಶಿಷ್ಯ ನೆನಿಸಿದನು ೭

ಮಾಂತ ಮುನಿಗಷ್ಟಾಬ್ದ ತುಂಬ
ತ್ಪಾಂತದಿಂ ಗುರುವರನು ಪಿರಿಯರು
ಪಿಂತೆಗೈದಿಹರೀತಿಯಂದದಿ ಬಸವಲಿಂಗಯನಂ

ತಾಂತವಕದಿಂ ತಂದು ಬಳಿಕಾ
ಮಾಂತಮಿವರೀರ್ವರಿಗೆ ಮಠದೊಳು
ಸಂತಸದಿ ಶುಭದಿನದೊಳಯ್ಯಾಚಾರವೆಸಗಿದನು ೮

ನವಮಹಂತ ಸುಬಸವಲಿಂಗೆಂ
ಭುವದಿವರನತ್ಯಾದರದಿ ಕರ
ಭುವನಜೋದ್ಭವರನ್ನೆನಿಸಿ ಸಿಂಹಾಸನದ ಮಠದಿ
ಶಿವಕಥಾ ಶ್ರವಣದೊಳು ಸಂತತ
ಶಿವನ ಪೂಜಾ ಭ್ರಾಂತಿಯೊಳು ಸ
ಚ್ಛಿವನ ಭಕ್ತಿಯ ಪೆರ್ಮೆಯೊಳುಕಳೆತಿರ್ದಕಾಲವನು ೯

ಆಗಮದ ಲಿಂಗಾರ್ಚನೆಯ ವಿಧಿ
ಈಗೆನಗೆ ತಿಳಿಸೆಂದು ಶಿರವನು
ಬಾಗಿ ನಮಿಸುತ ಬಸವಲಿಂಗನು ಕೇಳೆ ಗುರುವರನು
ಆಗ ನುಡಿದನು ಮಾಂತನಿಂ ಸುಖ
ವಾಗಿ ತಿಳಿಯವನಿರಲು ಯೆನ್ನನು
ರಾಗದಿಂ ಕೇಳುವದಿದೊಳ್ಳಿತವಲ್ಲ ಬಿಡುಯೆಂದ ೧೦

ಆ ನುಡಿಯನು ಮಹಂತ ಕೇಳ್ದನು
ಮಾನಮಿಲ್ಲದೆ ನುಡಿದ ಗುರುವರ
ನೀನಿರಲು ಬಸವನಿಗೆ ಯೆನ್ನನ್ನೇಕೆ ತೋರಿಸುವ
ನೀನು ಪೂಜ್ಯನು ನಾನು ಪೂಜಕ
ನೀನು ಸೇವ್ಯನು ನಾನು ಸೇವಕ
ನೀನುದಾಸ್ಯನು ದಾಸನಾಗುರು ನೀನೆ ಶಿಷ್ಯನು ನಾ ೧೧

ಗುರುವರೆದ ಶೃತ್ಯುಕ್ತಿಗಳ ಸ್ವೀ
ಕರಿಸುವದೆ ಶಿಷ್ಯಂಗೆ ಯೋಗ್ಯವು
ಗುರುವರನು ನೀನಿರಲು ಬಸವನಿಗುಸುರಲಾನೆಂತು
ಅರಿತು ಶಿಷ್ಯನ ವಾದಡೇಂ ಶ್ರೀ
ಗುರು ಮುಖದೊಳವನರಿಯ ಬೇಕೆಂ
ದೊರೆದ ಶೃತಿಯನು ಬಲ್ಲೆನದರಿಂ ನೀನೆ ಪೇಳೆಂದ ೧೨

ಆದೊಡೆಲೆ ಶಿವಪೂಜೆಯ ತ್ರಿವಿಧ
ಭೇದಗಳ ತಿಳಿಸುವೆ ಮಹಂತನೆ
ವೇದವಿಧಿಗಳ ನುಳಿದು ಪೂಜಿಪದಿದುವೆ ತಾಮಸವು
ವೇದ ನುಡಿಯಹುದಲ್ಲೆನುತ ಮನ
ಭೇದದಿಂ ಪೂಜಿಪುದೆ ರಾಜಸ
ವೇದ ವಿಧಿಯಿಂ ಭಕ್ತಿಯೊಳು ಪೂಜಿಪುದೆ ಸಾತ್ವಿಕವು ೧೩

ಇನ್ನೊರೆವೆ ಸುಜ್ಞಾನ ಪೂಜೆಯ
ತನ್ನಲಿಂಗದ ಖಂಡತೇಜವೆ
ನನ್ನಿಯಿಂ ಶಿವನೆಂದರಿದು ಪೂಜಿಸುವದೇ ಶುದ್ಧಂ
ಚನ್ನೆ ಶಿವ ಮುಖವೈದು ದಶಭುಜ
ಮುನ್ನತವ ಮೂರ್ತಿಯೆಸದಾಶಿವ
ನೆನ್ನುತಕ್ಷಿಗಳು ನಿರೀಕ್ಷಿಸಿ ಪೂಜಿಪುದೆ ಮಿಶ್ರಂ ೧೪

ಮೆರವ ಶಕ್ತಿಯಗೂಡಿ ಹರಿಯಜ
ಸುರಪದಿ ವಿಜರನಡುವೆ ರಂಜಿಪ
ಪರಮಹೇಶನೆನುತ್ತರಿದು ಪೂಜಿಪುದೆ ಸಂಕೀರ್ಣ
ತರುಳ ಕೇಳಿನ್ನೊಂದು ರೀತಿಯೊ
ಳೊರವೆ ಕರ್ಮ ಸುಭಕ್ತಿಜ್ಞಾನೆಂ
ಬುರುತರದ ಶಿವಪೂಜೆಗಳು ಮೂರಿರುವವೈ ಕೇಳು ೧೫

ಕುಲದ ಕರ್ಮಂಗಳ ಬಿಡದೆ ಸ
ತ್ಫಲಪದಗಳ ಬಯಸುತುಪಾಧಿಯ
ನೆಲಸಿ ಮುಂದಿಟ್ಟರ್ಚಿಪುದೆ ಜಡ ಕರ್ಮಮೆನಿಸುವದು
ಕುಲದ ಧರ್ಮಸುಕರ್ಮಗಳ ತಾ
ನುಳಿದು ಭವಿಭಕ್ತೆಂಬ ಭೇದವ
ತಿಳಿದು ಫಲಪದದಾಶೆಯಲ್ಲವ ಕಳೆದು ಪೂಜಿಪುದು ೧೬

ಎಸೆವ ವರ್ಣಾಶ್ರಮದ ಕರ್ಮವ
ವಿಸರಕಳೆವತಿ ಫಲಪದರಗಳ
ಪೆಸರನೆತ್ತದೆ ಪೂಜ್ಯ ಪೂಜಕ ಮೇಕಮೆಂದರಿದು

ಹಸನಮಾಗಿಹ ಭಾವದೊಳು ರಾ
ಜಿಸುವ ನಿಜಪದವಿದೆಯೆನುತ ಪೂ
ಜಿಸುವದೇ ಸುಜ್ಞಾನ ಸದ್ಯೋನ್ಮುಕ್ತಿಯಿದರಿಂದೆ ೧೭

ದೇಶಿಕೋತ್ತಮ ನಿನ್ನ ಮುಖದಿಂ
ದೀಶಲಿಂಗಾರ್ಚನೆಯ ವಿಧಿಗಳ
ಕ್ಲೇಶವಿಲ್ಲದೆ ಕೇಳ್ದೆವೈ ಪಂಚಾಕ್ಷರಿಯ ಮಹಿಮೆ
ಆಶೆಯಿಂ ತಿಳಿಸೆಂದ ವರ ಮಾಂ
ತೇಶ ಬಿನ್ನೈಸಲ್ಕೆ ಗುರುವರ
ಲೇಶ ಮಾತ್ರವು ಮೋಸಮಿಲ್ಲದೆ ಪೇಳಲನುವಾದ ೧೮

ಬರೆವೆ ಕೇಳು ಮಹಂತ ಕುವರನೆ
ವರ ಪ್ರಣವದುದ್ಭತ್ತಿ ಕೇಳೈ
ಪರ ಶಿವನ ಚಿತ್ತೆಂಬುದೇ ಚಿತ್ಪ್ರಣವದಾಯ್ತುದರಿಂ
ಮೆರವನಾದ ಸುಬಿಂದು ಕಳೆಗಳು
ಭರದೊಳುದಿಸುತ್ತಿವೆ ಕ್ರಮವನಿಡಿ
ದಿರದ ಕಾರೋಕಾರ ಬಳಿಕ ಮಕಾರ ಮೆಸಿಸಿದವು ೧೯

ಮಿಸುಪ ಕಾರಾದಿತ್ರಯಂಗಳು
ಬಸಿದುವಂದಾಗಿಸಲದೋಂ ಕಾ
ಕಿಸವುದಾಗಳೆ ಪ್ರಣವವೆನಿಸುತ ಸುತನೆ ಕೇಳಿನ್ನು
ಹಸನಮಾದೀ ಪ್ರಣವದಿಂದಂ
ಜಿಸುವ ತಾರಕ ಮುಖ್ಯವೆಂದೂ
ಹಿಸುವ ಪಂಚ ಸುಲಕ್ಷಣಗಳು ಉದಯಿಸಿ ಬೆಳಗಿದವು ೨೦

ಅರಿಯಲೀ ಲಕ್ಷಣಗಳೈದರೋ
ಳೆರಕ ಮಾದನಕಾರ ಮೊದಲುರು
ತರಯಕಾರಂ ತೈದಿವೇತಾರಕ ಸುಬ್ರಹ್ಮೆಂದು
ಸುರಪ ಮನು ಮುನಿಸಿದ್ಧ ಸಾಧ್ಯರು
ನಿರುತದೊಳು ಪಠಿಸುತ್ತಲಿರುವರು
ತರುಳ ಈ ಪ್ರಣವದ ಮಹತ್ವವ ತಿಳಿಯಲಘನಾಶಂ ೨೧

ಪಂಚವರ್ಣಗಳಿಂದ ಮಾಂತನೆ
ಪಂಚಸಂಜ್ಞಾಳಿಗಳು ಯಿದರಿಂ
ಪಂಚ ಸಾದಾಖ್ಯಂಗಳಿದರಿಂ ಪಂಚ ವದನಗಳು
ಪಂಚ ಮುಖದಿಂ ಪಂಚ ಕಲೆಗಳು
ಪಂಚ ಕಲೆಯಿಂ ಶಕ್ತಿ ಪಂಚಕ
ಪಂಚ ಶಕ್ತಿಂ ಭೂತ ಪಂಚಕಮಾಗಿ ತೋರಿದವು ೨೨

ಪಂಚ ಭೂತಗಳಿಂದುದಿಸಿದವು
ಪಂಚವಿಂಶತಿ ತತ್ವಗಳು ತಿಳಿ
ಪಂಚ ವರ್ಣದ ಮಂತ್ರದಿಂದನಿತಾಯಿ ತ್ರೈಮಗನೆ
ಚಂಚಲರಹಿತ ಮನದೊಳಿದನು ಪ್ರ
ಪಂಚದೊಳು ಪಠಿಸಿದ ಮನುಜನಿಗೆ
ಪಂಚಮುಖ ನೊಲಿದಿಷ್ಟ ಫಲಗಳನೀವನನುದಿನದಿ ೨೩

ಗುಣನಿಧಿಯೆ ಗುರುದೇವ ನಿನ್ನಿಂ
ಪ್ರಣವದುತ್ಪತ್ತಿಯನರಿದು ಸ
ದ್ಗುಣಿಗಳೆನಿಸದೆ ವೀರ್ವರೀಗಳೆ ಧರಣಿ ಮಂಡಲದಿ
ಪ್ರಣವ ಪಂಚಾಕ್ಷರಿಯ ಮನುವಾ
ಕ್ಷಣದಿಜಪಿಸುತ ಮೋಕ್ಷ ಪೊಂದಿದ
ಪ್ರಣುತ ಮಹಿಮರಕಥೆಗಳನು ಪೇಳೆಂದನಾ ಮಾಂತ ೨೪

ಗುರುಮುಖದಿ ಪಂಚಾಕ್ಷರಿಯ ಮನು
ವರಿದು ನಿತ್ಯದಿ ಜಪಿಸುವಾತನೆ
ಪರಮ ಪೂಜ್ಯನು ಪರಶಿವನೊಳೈಕ್ಯವನು ಪಡಿಯುವನು
ತರುಳ ಕೇಳಿದರಿಂದೆ ಶಂಕರ
ಪುರಕೆ ಬೇಗದಿ ಪೋದ ಭಕ್ತರ
ಚರಿತೆಯನು ಪೇಳುವೆನು ಕೇಳೈ ಚಿತ್ತಕೊಟ್ಟಿನ್ನು ೨೫

ಕ್ಷಿತಿಯೊಳುನ್ನತ ಸುಕೃತ ಭೂಮೆಂ
ದತಿ ವಿರಾಜಿಪ ವಾರಣ ಸಗಧಿ
ಪತಿಯೆನಿಸಿ ಪಾಲಿಸುತಲಿರ್ದನು ವಜ್ರಬಾಹುನೃಪಂ

ವಿತತ ಕಳೆಯ ಕಲಾವತಿಯಳೆಂ
ಬತಿ ವಿಶಾರದೆ ಪುತ್ರೆಯಂ ಭೂ
ಪತಿಯೆನಿಪ ದಾಶರಥರಾಯಂಗಿತ್ತು ಸಂಭ್ರಮದಿ ೨೬

ದಾಶರಥನೆಂಬಾ ಮಹಾ ಧರ
ಣೀಶ ತನ್ನಯ ಪಾಂಡ್ಯಮೆನಿಪಸು
ದೇಶದೊಳಗೆ ಕಲಾವತಿಯ ಪಾಣಿಗ್ರಹಣ ಮಾಡ್ದು
ಕ್ಲೇಶಮಿಲ್ಲದೆಯಿರುತಿರಲ್ಕಿ
ತ್ತಾಶಮಾದಿ ಗುಣಂಗಳಿಂ ನಿಡು
ಕೇಶವಿಂ ತಂದೆಯ ಮನಿಯೊಳಿರ್ದಳು ಕಲಾವತಿಯು ೨೭

ಇರುತಿರುತ ಗುರುಮುಖದಿ ಪಂಚಾ
ಕ್ಷರಿ ಮಹಾಮಂತ್ರೋಪದೇಶವ
ಸರಸದಿಂ ಪಡದನುದಿನದಿ ತನ್ಮಂತ್ರವನು ಮನದಿ
ಸ್ಮರಿಸುತಿರಲವಳಿಂಗೆ ತವೆ ಹ
ನ್ನೆರಡು ವರುಷದ ಪ್ರಾಯ ಬಿಡದಾ
ವರಸಿ ತತ್ಪತಿ ಮಂದಿರಕ್ಕೈದಿದಳು ಗುಣವಂತಿ ೨೮

ಮಡದಿಮಣಿಯನು ರಾತ್ರಿಯಲಿ ಬಲು
ದಿಡಗಿನಿಂ ರತಿ ಕೇಳಿಗವಳನು
ಕಡುವಿಲಾಸದಿ ಕರೆಯಲಾಗ ಕಲಾವತಿಯು ಕೇಳ್ದು
ಪೊಡವಿಪತಿ ಮದ್ರಮಣ ನಿನ್ನಯ
ನಡೆನುಡಿಗಳತೆರಂಗಳಂ ನೋ
ಡ್ದೊಡೆ ಗುರುಪದ ಸುಭಕ್ತನಲ್ಲ ಸುಸೀಲ ನೀನಲ್ಲ ೨೯

ಭೂಪತಿಯ ಕೇಳೆನ್ನರತಿ ಸಮ
ರೂಪು ಗುಣ ಸುಕಲಾವಳಿಗೆ ಮನ
ವ್ಯಾಪಿಸುವದಿದಯೋಗ್ಯವಲ್ಲವೆ ಸಾಕು ಸರಿಯೆಂದು
ನೃಪನಂ ನಿಂದಿಸಲು ಬಿಡದವ
ಕೋಪದಿಂ ಕರಯುಗಳ ಪಿಡಿಯಲು
ಪೋಪ ಪತಿಯಂ ನಿಲ್ಲಿಸುತಲಿಂತೆಂದಳಾ ಸತಿಯು ೩೦

ಗುರುಕರಕಮಲ ಜಾತೆಯೆನಿಸೀ
ಶ್ವರನ ಮಂತ್ರಾರ್ಥವ ತಿಳಿದುನ
ಶ್ವರ ತನುವಿನಾಶೆಯನಳಿದು ರುದ್ರಾಕ್ಷಿ ಭಸಿತಗಳಂ
ಧರಿಸಿಯಾ ಶಿವ ಮಂತ್ರ ಜಪಿಸುತ
ಪರಮಶಾಂತರಸಂ ಫಲಿಸ್ವೀ
ಕರಿಸಿಧರೆಯೊಳು ಪೂಜ್ಯಳೆನಿಸದೆ ಸಕಲ ಜನರಿಂದೆ ೩೧

ಗುರು ಮುಖದಿ ಶಿವಮಂತ್ರವ ನುನೀ
ನರಿಯದನುದಿನ ದುಷ್ಟ ಸಂಗದಿ
ಬೆರೆದು ವಿಷಯಾಸಕ್ತಿಯಿಂ ಮಧು ಮಾಂಸಗಳ ಮೆಲ್ದು
ಪರಿಪರಿಯಲಿ ನಿಷಿದ್ಧ ಕರ್ಮಗ
ಳುರವಣಿಗೆಯಿಂ ಗೈದು ಪಾತಕ
ಶರಧಿಯೊಳು ಮುಳುಗೇಳಲಾರದ ಪರಿಯೊಳಿರುತಿರುವಿ ೩೨

ವಲ್ಲಭನೆ ಶಿವ ಚಿನ್ಹೆಗಳು ನಿ
ನ್ನಲ್ಲಿಯರಸಲ್ಕಾಣಿನದರಿಂ
ಸಲ್ಲದೆನ್ನಂಗದ ಸುಸಂಗದ ಸುಖಕೆ ಮೋಹಿಪುದು
ನಲ್ಲೆಯೆನ್ನನು ನಿಂದಿಸುತ ನೀ
ನೊಲ್ಲೆನು ವದೊಳಿತಲ್ಲವೆಂದುರೆ
ಬಲ್ಲವಿಕೆಯಿಂ ಸತಿಯ ಕರವಿಡಿದೆಳೆಯಲಾಕ್ಷಣದಿ ೩೩

ಸುಡುವ ಲೋಹದ ಪುತ್ಥಳಿಯ ಕರ
ಪಿಡಿದ ತೆರಮಾಗಲ್ಕೆ ಭಯದಿಂ
ನಡನಡುಗಿ ದುಃಖಿಸುತ ಮಡದಿಗಿದೇಂ ವಿಚಿತ್ರವೆನೆ
ಪೊಡವಿಪನೆ ಮೊದಲೊರೆದುದ ಕಿವಿ
ಗೊಡದೆ ಯನ್ನಯ ಕರವ ಗರ್ವದಿ
ಪಿಡಿದುದಕೆ ನಿನ್ನಯ ಕರಂಗಳುದಗ್ಧಮಾಗಿಹವು ೩೪

ಗುರುವರನ ಕರ ಸೋಂಕಲೆನ್ನಯ
ಶರೀರವು ಪರಿಶುದ್ಧ ಮಾಗಿಹು
ದರರೆ ನಿನ್ನಯ ಮಲಿನ ದೇಹವ ಮುಟ್ಟಲಿಂತಾಯ್ತು

ಗುರುಪದಕೆರಗಿ ಪರಮ ಪಂಚಾ
ಕ್ಷರಿಯ ಮಂತ್ರವನರಿದು ಬಂದೆ
ನ್ನೊರಿಸು ಮರುಳಿಂ ಮುಟ್ಟಬೇಡೆಂದೊಲಿದು ಪೇಳಿದಳು ೩೫

ಆಗಲಾದಾಶರಥರಾಯನು
ಬೇಗದಿಂ ವರ ಗಗನ ಮುನಿಯಿಂ
ಬಾ ಗುರುವಿನಿಂ ಮೂಲ ಮಂತ್ರವ ತಿಳಿದು ಸತಿಗೂಡಿ
ಭೋಗಭಾಗ್ಯವ ಪಡೆದು ಜೀವಿಸಿ
ಭೋಗಿದರನಪುರಕ್ಕೆ ಪೋದನು
ರಾಗದಿಂ ತಿಳಿಯೋ ಮಹಂತನೆ ಮಂತ್ರ ಮಹಿಮವಿದು ೩೬

ಪ್ರಕಟದಿಂದಿ ನ್ನೊರೆವೆನಾಲಿಸು
ಮುಕುತಿದಾಯಕ ಕಥೆಯನೊಂದನು
ವಿಕಪುರದಿ ಇರುತಿರ್ದಮಾನದನೆಂಬ ಬ್ರಾಹ್ಮಣನು
ಸಕಲಜನರೊಳು ವಂಚಿಸುತ ಬಲು
ಕುಕುಟಿಲತೆಯಿಂ ಸೂರ್ಯ ಶರ್ಮನ
ಶಕುತಿ ತಿಳಿಯದೆ ಕಲಹಗೈದತಿದ್ವೇಷ ಬೆಳೆಸಿದನು ೩೭

ಕಲಹದಿಂದಾ ಸೂರ್ಯ ಶರ್ಮನ
ಗೆಲಿವವಾಗದೆ ಮಾನದನು ದು
ರ್ಬಲದಿ ಬಾಹಿರ್ವಂಚನೆಯ ಬಿಟ್ಟೊಳ ಕುಟಿಲದಿಂದ
ಛಲವ ತೀರಿಸಿಕೊಂಬ ಬಗೆಯಿಂ
ಬಲುವಿನಯ ನುಡಿಗಡಣ ಬೀರು
ತ್ತೊಲಿಸಿಕೊಂಡಾತಂಗೆ ಗುಣಯುತ ಶಿಷ್ಯ ತಾನಾದಂ ೩೮

ಮಾನದನಕಪಟೋಕ್ತಿಗಳ ತಾ
ನೇನರಿಯದಾ ಸೂರ್ಯ ಶರ್ಮನಿ
ಧಾನದಲಿ ಗುರುವಾಗಿ ಶಿಷ್ಯನ ಮಾಡಿಕೊಂಡಮಿತ
ಸಾನುರಾಗದಿ ಸೇವೆಗೊಂಬುತ
ದೀನನಿವನೆಂದರಿದು ಗುರುವರ
ಸೂನುವಿನ ತೆರ ಪೋಷಿಸುತ ವಿಶ್ವಾಸ ಬಲಿಸಿದನು ೩೯

ಪುಲಿಯ ಹಾವಳಿ ಪುರವಳಯದೊಳು
ನೆಲಸಿರಲ್ಕಿದೆ ಸಮಯವೆಂದಾ
ಕಲುಷ ಮಾನದ ನೊಂದು ದಿನದಿರುಳೊಳು ಗುರುತ್ತಮನಿಂ
ಪುಲಿಯು ಬಂದಿಹುದೆಂದು ಗೋವನು
ನಿಲದೆ ತೋರಿಸಿ ಪೊಡಿಸಲಾಗಳೆ
ನೆಲಕೆ ಬಿದ್ದದು ಮರಣ ಪೊಂದಲು ಶಿಷ್ಯನವಸರದಿ ೪೦

ಗುರು ಮಡದಿ ಶೈನಿಸುವಸ್ಥಾನಕೆ
ಚರಿಸಿಯವಳಿಗೆ ನುಡಿದನೋರುವ
ನುರು ಪರಾಕ್ರಮಿ ಚೋರ ಬಂದಿಹ ನವನ ಪಿಡಿವುದಕೆ
ಗುರುವರನು ಪೋಗಿರ್ಪ ನೀನಿ
ಲ್ಲಿರದುಭಯ ಸ್ಥಲದಲಿ ಪವಡಿಸು
ಮೆರವ ಈ ಸ್ಥಲದಲ್ಲಿ ನಿನ್ನಯ ಸುತಸೊಸಿಯರಿರಲಿ ೪೧

ಕುಟಿಲ ಮಾನದ ನುಡಿದ ನುಡಿ ಬಲು
ಸಟಿಯಿದೆಂದರಿಯದೆ ಗುರು ಮಡದಿ
ದಿಟದಿ ತನ್ನ ಸ್ಥಲದಿ ಸುತಸೊಸಿಯರನ ಮಲಗಿಸುತೆ
ಚಟುಲಪುತ್ರ ಸೊಸಿಯರು ಪವಡಿಪ
ಕಿಟಕು ತಾನದಿನಿದ್ರಿಸಲು ಮನ
ಹಟದಿ ಗುರುವಿರುವೆಡೆಗೆ ಚರಿಸಿದನತ್ಯವಸರದಲಿ ೪೨

ನಡೆದು ಗುರುವಿಗೆ ಪೇಳ್ದ ನಿನ್ನಯ
ಮಡದಿವಿಟನೊಡಗೂಡಿ ಮನೆಯೊಳು
ಕಡುವಿ ಮೋಹದಿ ಮೈಮರೆದು ಪವಡಿಸಿದುದು ನೋಡ್ದು
ವಡಿಯ ನಿನ್ನಗೆ ತಿಳಿಸಲೋಸುಗ
ಗಡನೆ ಬಂದೆನು ಧನುವನೇರಿಸಿ
ಬಿಡದವನ ಶರದಿಂ ಪೊಡಿಯದಿರೆ ಪೇಳಿ ಫಲವೇನು ೪೩

ಅಂದ ನುಡಿಯನು ಕೇಳ್ದು ಶರ್ಮನ
ಮಂದ ಕೋಪವ ತಾಳ್ದು ನಿಲಯಕೆ
ಬಂದು ನೋಡ್ದಾ ಶಿಷ್ಯ ಪೇಳ್ದುದು ಸತ್ಯಮೆಂದರಿದು

ಹಿಂದು ಮುಂದು ವಿಚಾರಿಸದೆ ಶರ
ದಿಂದ ಪೊಡೆಯಲುಭಯರು ಮರಣವ
ಪೊಂದಲಾತನು ಸುತನ ಶಯ್ಯಾಗೃಹವನೊಳಪೊಕ್ಕ ೪೪

ಸುತನ ತಾಣದಿ ಪವಡಿಸಿದ ನಿಜ
ಸತಿಯ ಮುಖವನು ನಿಟ್ಟಿಸುತಿದೇಂ
ನತಿ ವಿಚಿತ್ರ ಮೆನುತ್ತ ತನ್ನಯ ಸ್ಥಲಕೆ ಚರಿಸುತ್ತ
ಮೃತಿಯ ಪೊಂದಿದ ಸುತ ಸೊಸಿಯರಂ
ವಿತತ ನೇತ್ರದಿ ನೋಡ್ದು ದುಃಖದಿ
ಕ್ಷಿತಿಗೆ ಬಿದ್ದೊರಳುತ್ತ ಹಾಹಾಯೆಂದು ಕೂಗಿದನು ೪೫

ಎದ್ದು ಮೆಲ್ಲನೆ ಪುಲಿಯು ಮೃತಿಯಿಂ
ಬಿದ್ದ ತಾಣಕೆ ಬಂದು ನೋಡಲು
ಇದ್ದಮೃತ ಗೋವನ್ನು ನೋಡುತ ಶಿವಶಿವಾಯೆಂದು
ತಿದ್ದಿಸೋಚ್ಚಾರದಿಂದಲವಂ
ಸದ್ದು ಮಾಡದೆ ಜಪಿಸುತಾಗಳೆ
ಮುದ್ದುಮಗ ಸೊಸಿಯರ ನಿರೀಕ್ಷಿಸಿ ದುಃಖ ಕೊಳಗಾದಂ ೪೬

ಮರಳಿ ವಂಚಕ ಮಾನದನು ವಿ
ಪ್ರರಿಗೆ ತಿಳಿಸಿದ ಸೂರ್ಯಶರ್ಮನು
ವಿರಚಿಸಿದ ಗೋ ದಿವಿಜ ನಾರೀ ಹತ್ಯಸಂಗತಿಯಂ
ಅರಿದು ವಿಪ್ರರು ಬಂದು ನೋಡ್ದಿದು
ಬರಿಯ ಮಾತಲ್ಲೆಂದು ಕೋಪದಿ
ಪರಿಪರಿಯೊಳವನನ್ನು ದೂಷಿಸಿ ದುಃಖವೆಸಗಿದರು ೪೭

ಅಷ್ಟರೊಳು ನೃಪ ಕೇಳ್ದು ಬೇಗನೆ
ದುಷ್ಟನಿಗ್ರಹನೆಂಬ ಬಿರುದನು
ಸೃಷ್ಟಿಯೊಳು ತೋರಿಸುವೆನೆಂದುಂ ಸೂರ್ಯಶರ್ಮನಿಗೆ
ಭ್ರಷ್ಟಛೀ ಜಗದೊಳಗೆ ಬಲು ಪಾ
ಪಿಷ್ಟ ಛೀ ಛೀಯೆಂದು ನಿಂದಿಸಿ
ಕಷ್ಟಕೊಡಲವ ಮರುಗಿ ಶಿವಶಿವಯೆನುತಲಿಂತೆಂದ ೪೮

ಮಾನವಾಧಿಪಲಾಲಿ ಸೀಕೃತಿ
ನಾನು ಮನದಿಂ ಮಾಡಲಿಲ್ಲ
ಜ್ಞಾನದಿಂದಾಯ್ತು ಮೃತ ನಾರೀ ಗೋ ದಿವಿಜರನ್ನು
ಕೂನವರಿವಾ ಶಿವನ ಮಂತ್ರವ
ಧ್ಯಾನಿಸಿದೆನದರಿಂದೆ ಯನ್ನಗೆ
ಏನುಪಾತಕಮಿಲ್ಲದಾಯಿತು ಶಿವಗೆ ಶೃತವಿರಲಿ ೪೯

ಪಾತಕನು ನೀನಲಲ ಶಿವವ್ರತ
ಪೂತನಾದೊಡೆ ಕಲವೃಷಭನಿ
ಗೋತು ತೃಣವನು ಕೊಟ್ಟು ಭಕ್ಷಿಸುವಂತೆ ಮಾಡೆಂದು
ಭೂತಲೇಶನು ತೋರಿಯಾಡಿದ
ಮಾತಿನಂತಾ ಸೂರ್‍ಯಶರ್ಮನು
ಭೀತಿಯಿಲ್ಲದೆ ತೃಣವತಿನಿಸಿದ ಮಂತ್ರವ ಸ್ಮರಿಸಿ ೫೦

ನೃಪತಿ ಮೊದಲಾದವನಿ ಮಾನವ
ರೆಪರ ಮಿತವಹ ಸೂರ್‍ಯ ಶರ್ಮನ
ಗುಪಿತಮಾಗಿಹ ಪರಮ ಪಂಚಾಕ್ಷರಿಯ ಮಹಿಮವನು
ವಿಪುಲ ನೇತ್ರದಿ ನೋಡ್ದವಂಗುದಿ
ಮಿಪ ಮಹಿಮರಿಲ್ಲೆಂದುರಿದು ತ
ತ್ಕಪಟಿ ಮಾನದನನ್ನು ರಾಜನು ಶೂಲಕೇರಿಸಿದ ೫೧

ಅನಿತರಲಿಯು ಸೂರ್‍ಯ ಶರ್ಮನ
ವನಿತೆ ನುಡಿಗಳು ಮೃತ ಶರೀರದ
ತನಯ ಸೊಸಿಗೋವುಗಳ ಪ್ರಾಣಪ್ರತಿಷ್ಠೆ ಮಾಡೆಂದು
ಘನಕೆ ಘನಮೆನಿಸುವ ಶಿವನ ಮನು
ವನು ಜಪಿಸಲಾಕ್ಷಣ ಸಜೀವದಿ
ತನುಗಳಿಂದೇಳಲ್ಕೆ ನುಡಿದರು ಜಯವೆನುತ ಜನರು ೫೨

ಇಂತೆಸೆವ ವರ ಸೂರ್‍ಯ ಶರ್ಮನ
ನಂತ ಮಹಿಮವ ತೋರ್ದುಭುವನ
ಶಾಂತ ಸಂತ ಸುಶರಣರೊಳು ತಾಶ್ರೇಷ್ಠನೆನಿಸುತ್ತ

ಸಂತಸದಿ ದಿನಗಳೆದು ಅಂತ್ಯದೊ
ಳಂತಕಾಂತಕನ ಅಪ್ಪಣೆಯೊಳ
ತ್ಯಂತ ಭರದಿ ಕುಟುಂಬ ಸಹಿತ್ಯೈದಿದನು ಶಿವಪುರಕೆ ೫೩

ಭಕ್ತಿಯಿಂ ಶಿವಮಂತ್ರ ಜಪಿಸುತ
ಮುಕ್ತಿ ಹೊಂದಿದ ಪರಮ ಮಹಿಮಾ
ಸಕ್ತರ ಸುಚರಿತಂಗಳಂ ಕೇಳಿದಿಯು ಯೆನ್ನಿಂದ
ಭಕ್ತಿಯಿಲ್ಲದೆ ಶಿವಯೆನುತ ಸ
ನ್ಮುಕ್ತಿ ಮಾರ್ಗವ ಪಿಡಿದ ಸುಕೃತಿಗ
ಳುಕ್ತ ಕಥೆಯನು ಪೇಳ್ವೆನಾಲಿಪುದೆಲೆ ಮಹಂತಮುನಿ ೫೪

ರಸಿಯೊಳೋರುವ ವೀರ್ಯವಂತನೆ
ನಿಸುವ ವಿಪ್ರನು ಪಾಪಕರ್ಮದ
ವಿಸರದೊಳು ಸೀರುತ್ತ ಮಧುಮಾಂಸಗಳ ಸೇವಿಸುತ
ಮಿಸುಪ ತನ್ನಯ ಜಾತಿ ಕರ್ಮವ
ನೊಸೆದು ಮಾಡದೆ ದ್ರವ್ಯಲೋಭದಿ
ಕುಸುರು ಮನದಿಂ ಮದ್ಯಮ್ಮಾಂಸವ ಮಾರಿ ಕೊಂಡಿರಲು ೫೫

ಮರಣಗಾಲದಿ ವೀರ್ಯವಂತನ
ತರುಣಿಸುತ ರತಿ ದುಃಖಿಸುತ ಘಳಿ
ಸಿರುವ ಧನಮೆನಿತೆಮಗೆ ಜನಕೊಡಲೆಸುತಿಹುದು ಯೆನಲು
ಭರದೊಳವಬಿಕ್ಕಳಿಸಿ ನುಡಿದನು
ತಿರುಕನಿಗೆ ನಾನೊಂದು ಶಿವಮಧು
ಮರವೆಯಿಂ ಕೊಟ್ಟಿರುವೆನೆಂದುಂ ಮರಣ ಪೊಂದಿದನು ೫೬

ಜವನ ದೂತರು ಪಿಡಿಯಲೈತರೆ
ಶಿವಗಣಂಗಳು ಬಂದು ತಡೆಯು
ತ್ತಿವನು ಪ್ರಾಣವಿಯೋಗದೊಳು ಶಿವಮದ್ಯವೆಂದದಕೆ
ಶಿವನು ಮೆಚ್ಚಿದ ಕಾರಣದಿಯಾ
ಶಿವನ ಕಟ್ಟಪ್ಪಣೆಯೊಳಿವನಂ
ಶಿವನನಗರಕೆ ಕೊಂಡು ಪೋಗುವೆವೆಂದು ಚರಿಸಿದರು ೫೭

ತರುಳ ಕೇಳ್ಮತ್ತೋರ್ವ ಶೂದ್ರನು
ಮರಣಗಾಲದಿ ತನ್ನ ಮಗನಂ
ಕರೆದು ಹೊಲವನು ಹರಗಣಾಯೆಂದಸು ಬಿಡಲ್ಕವನಂ
ಹರನದೂತರು ಬಂದು ಬಹು ಸ
ತ್ವರದಿ ಪುಷ್ಪಕದಲ್ಲಿಡುತ ಶಿವ
ಪುರಿಗೆ ಕರದೊಯ್ದುರು ಬಿಡದೆ ಇನ್ನಾಲಿಸ್ಯೆಸುತನೆ ೫೮

ಅರಳಗಳ ತನ್ನಯ ಸುಸೇವೆಗೆ
ತ್ವರದೊಳೊಯ್ಯುವ ಕಾಲದೊಳುವಂ
ದರಳು ಬೀಳಲ್ಕೆಲಕೆ ಶಿವನಿಗೆ ಮುಟ್ಟಲೆಂದವನು
ಚರಿಸುತಿರೆ ಚರರಿಂದೆ ತಕ್ಷಣ
ಮರಣ ಪೊಂದಲು ಶಿವನ ದೂತರು
ಹರನಪುರಿಗೊಯ್ಯಲೀ ಚರನನುಪಾಲಿಸಿದ ಶಿವನು ೫೯

ಇಂತು ಕವಿ ಭೀಮಾಖ್ಯ ಪೇಳ್ದ ಮ
ಹಂತ ಮಾಹೇಶನ ಚರಿತ್ರವ
ಸಂತಸದಿ ಬರದೋದಿ ಕೇಳಿದವರ್ಗೆ ಪೇಳ್ದರ್ಗೆ
ಸಂತತಂ ವರ ಭೋಗಭಾಗ್ಯಮ
ನಂತಮಿತ್ತಿಹ ಪರದಿಕೃತಿಕ
ರ್ತಂತವಕದಿಂ ಪಾಲಿಸಲಿಯತ್ಯಂತ ಹರುಷದಲಿ ೬೦

ಅಂತು ಸಂಧಿ ಆರಕ್ಕುಂ ಪದ್ಯ ೬೦+೨೧೫=ಒಟ್ಟು ಪದ್ಯಗಳು ೨೭೫ಕ್ಕುಂ
ಮಂಗಲಂ

೭ನೇ ಸಂಧಿ

ಸೂಚನೆ: ವರಭಸಿತದ ಮಹತ್ವ ಪೇಳ್ದುರೆ
ಮೆರೆವ ಮೈಸೂರರಸಿಯಡಿಗವ
ಸರದಿ ಮುದ್ರೆಯ ತಿಳಿಸಿದಕೆ ಗುರುಮಠವ ತೆಜಿಸಿದನು

ಪುರಹರಸ್ಮರಕಾಲ ಸಂಹರ
ಸುರಪನು ತಪದ ನೀಲಕಂಧರ
ನರಶರದ ಸುಖ ಮೂಲಮಂದಿರ ಶೂಲಧರದೇವ
ಶರಣಕುಲಪರಿಪಾಲದುರ್ಭವ
ಹರಣ ಮಹಿಮೆ ವಿಶಾಲ ಶಿವನಿ
ರ್ಮರಣ ಸಾಂಬಸುಸೀಲ ಯೆಮ್ಮನು ಪಾಲಿಸೈದೇವಾ ೧

ಇಂದುಶೇಖರ ಗುರುವರನೆತ
ಮ್ಮಿಂದ ಪಂಚಾಕ್ಷರಿಯ ಮಹಿಮವ
ನಿಂದು ಕೇಳ್ದತಿ ಧನ್ಯರಾದೆವು ಧರಣಿ ಮಂಡಲದಿ
ಮುಂದೆಮಗೆ ಭಸಿತದ ಮಹತ್ವಗ
ಳಿಂದಯದೊಳೊಲಿದು ಸುರಿಚಿತ್ತಾ
ನಂದಿಸರಿಯೆಂದಾ ಮಹಂತನು ಕರಗಳನು ಮುಗಿದ ೨

ಮಗನೆ ಭುಜಬಲರಾಯನೆಂಬನು
ಮಿಗೆ ಮೆರವ ಸಂಕ್ರಮಣದಿ ದ್ವಿಜ
ರುಗಳಿಗಿಚ್ಛಿತ ದಾನಗಳ ಕೊಡುತಿರಲು ಸಮ್ಮುದದಿ
ಬಗೆದು ನಿಲದೆ ಸುಶೀಲ ಪಂಡಿತ
ನೊಗುಮಿಗೆಯೊಳೈತರಲು ಭೂಪತಿ
ಲಗಿಬಿಗಿಯೊಳುರುದಾನಮಂ ಕೊಡು ಪೋಗಲಾ ದ್ವಿಜನು ೩

ಪೊಡವಿಪನೆ ಭಸ್ಮವಧರಿಸಿ ನೀಂ
ಕೊಡಲು ದಾನವ ಬೇಗದಿಂದಾಂ
ಪಿಡಿವೆನಲ್ಲದೆ ಬರಿದೆ ಕೊಟ್ಟೊಡೆ ಪಿಡಿವದಿಲ್ಲೆಂದು
ನುಡಿದುದನು ಕೇಳ್ದಿಲವೊ ವಿಪ್ರನೆ
ಮೃಡನಭಸಿತವಧರಿಸಿದಾನವ
ಕೊಡುವದೊಳ್ಳಿತಮೆಂಬ ನುಡಿ ಶಾಸ್ತ್ರದೊಳು ಚೋರೆಂದ ೪

ಭೂತಿಧಾರಣದಲ್ಲಿ ಯಾವನ
ಪ್ರೀತಿಯಿಲ್ಲವೊ ಭುವನದೊಳು ಬಲು
ಪಾತಕನವನೆಯೆಂದು ಶಾಸ್ತ್ರವು ಸಾರುವದು ಬಳಿಕ
ಭೂತಿಯಂ ನಿಂದಿಸಿದ ಪಾಪಿಗೆ
ಭೂತಲದಿ ದಾರಿದ್ರ ಸಂಕಟ
ವಾತುಕೊಂಡತಿ ರೋಗವು ವ್ಯಾಪಿಸುವವಂಗದೊಳು ೫

ಭಸಿತಧರಿಸದಮನುಜರಿಗೆ ಸಂ
ಧಿಸುವವ್ವೈಬಹು ಕೇಡುಗಳು ಜನ
ವಿಸರಶತೃಗಳಹುದು ಸತಿಸುತ ಅಂಗ ಹಾನಿಗಳು
ರಸಿಯೊಳುಂಟಾಗುವವು ಸುಮ್ಮನೆ
ಕಸಿವಿಸಿಗೆ ವಳಗಾಗದೀಗಳೆ
ಭಸಿತಧರನಾಗಿ ದಾನವನೀವುದೆಂದ ವಿಪ್ರನು ೬

ಮಂದಮತಿ ಬ್ರಾಹ್ಮಣನೆ ಭಸಿತವ
ಸಿಂದಿಗಾದರು ಧರಿಸಲಾರೆನು
ಬಂದ ಪಥವನು ಪಿಡಿದು ನಡಿನಡಿ ನುಡಿದು ಫಲವೇನು
ಇಂದು ನೀನೊಲ್ಲೆನಲು ಯೆಮ್ಮನು
ಮುಂದೆ ಬೇಡುವರಿಲ್ಲವೇ ಛೀ
ಯೆಂದು ಕಳಿಸಿದ ವಿಪ್ರನನು ನೃಪ ಹಾಸ್ಯ ಮಾಡುತಲಿ ೭

ಮುನಿದರಾಜನ ಮುಖವನೋಡದೆ
ಮನೆಬಿಡುವ ಸಮಯದಲಿ ಭೂಪನ
ವನಿತೆ ಹಾಸ್ಯದಿ ಸೀತು ಮೂಗನು ಮುರಿದಣಕಿಸಿದಳು

ಎನಿತು ಪರಿಹಾಸಿಸಲು ವಿಪ್ರನ
ಯನದಿ ನೋಡದೆ ಪೋಗಲಾತನ
ಮನವ ನೋಯಿಸಿದಂಥ ಪಾತಕ ಬಿಟ್ಟಪುದೆ ನೃಪಗೆ ೮

ಕೆಲದಿನಕ್ಕೆ ನೃಪಂಗೆ ವ್ಯಾಧಿಯು
ಬಲಿದು ದುಃಖದೊರಲು ಪರನೃಪ
ಬಲವು ಬಂದಾಭುಜಬಲನ ಸತಿ ಸಹಿತ ಸೆರೆ ಹಿಡಿದು
ಬಲು ಪರಾಕ್ರಮದಿಂದೆ ಸೈನ್ಯವ
ನಿಲದೆ ಸಂಹರಿಸುತ್ತ ಬಿಡದು
ಜ್ವಲಿಪ ಸಿಂಹಾಸನವನಾಕ್ರಮಿಸಿದರು ಶೌರ್ಯದಲಿ ೯

ಶರೆಯೊಳಿಹ ಭುಜಬಲನೃ ಪಾಲನ
ತರುಗಿ ಸಹಿತೀರ್ವರನು ಗಿರಿಗಂ
ಹರದಿ ಬಿಟ್ಟಾಪರ ನೃಪನು ರಾಜ್ಯಕ್ಕರಸನಾದ
ದುರುಳ ಮೃಗಗಳ ಬಳಗದೊಳು ಸೇ
ರಿರುವ ಭುಜಬಲಸಹಿತವಾ ಘನ
ತರದ ಕಷ್ಟವ ಭೋಗಿಸುತ ಕಳಿಧಿರ್ವ ಕಾಲವನು ೧೦

ಒಂದು ದಿನ ಕಾಂತಾರದೊಳಗೆ ಮು
ಳಿಂದ ನೋಡುವ ಭೂಪನೆಡೆಗೈ
ತಂದವನ ಶರೆ ಹಿಡಿದೊಡೆದು ಸತಿಯನ್ನು ಎಳದೊಯ್ದು
ಅಂದಿನಿಂದೇಕಾಂಗಿಯಾಗಿ ಯ
ಮಂದ ದುಃಖದಿ ಬಾಯ್ಬಿಡುತ್ತ
ಲ್ಲಿಂದ ನಡೆದು ವಿದರ್ಭನಗರವ ಸೇರಿದನು ತಾನು ೧೧

ಬೇಡನಾಭುಜಬಲನ ಮಡದಿಯ
ಕೂಡಿ ವಿಪಿನದಿ ಪೋಗುತಿರೆ ಪುಲಿ
ನೋಡಿಯಾರ್ಭಟಿಸುತ್ತ ಬಂದಾ ವ್ಯಾಧನನು ಪಿಡಿದು
ಕಾಡಿನೊಳು ಪೋಗಲ್ಕವಳು ಬಿ
ಟ್ಟೋಡಿ ಮನೆ ಮನೆ ಬಿಕ್ಕಿಬೇಡುತ
ನಾಡ ಉದರಂ ಭರಣಳಾಗುತ ಚರಿಸಿದಳು ಭರದಿ ೧೨

ಗಂಡನಿರುವ ವಿದರ್ಭಪುರವನು
ಕಂಡು ಭಿಕ್ಷಾವೃತ್ತಿಯಂ ಕೈ
ಕೊಂಡುವರ್ತಿಸುತಿರಲು ಒಂದಿನ ವಲ್ಲಭನ ನೋಡ್ದು
ಮಂಡೆ ಬಾಗಿಸುತ ನುಡಿದಳಾ ಪ್ರ
ಚಂಡ ವ್ಯಾಧನ ಪುಲಿಯು ಪಿಡಿದು
ದ್ದಂಡತೆ ಯೊಳೊಯ್ಯಲ್ಕೆ ನಾನೈ ತಂದೆನೀ ಪುರಕೆ ೧೩

ವಲ್ಲಭನೆ ನಾವೀರ್ವರೀ ಪುರ
ದಲ್ಲಿ ನಿರ್ಲಜ್ಜೆಯೊಳು ಬೇಡುವ
ದಲ್ಲಿ ಬಿಡು ಚೋರತ್ವದಿಂ ಜೀವಿಸುವದುತ್ತಮವು
ನಲ್ಲೆಯಾಡಿದ ನುಡಿಗಳನು ಮನ
ದಲ್ಲಿ ನಿಶ್ಚಯಿಸುತವನು ಪ್ರತಿ
ಭಿಲ್ಲಿ ನಂದದಿ ಚೋರತನದಿಂ ಬದುಕಲನುವಾದ ೧೪

ಈ ಪರಿಯೊಳುಪಜೀವಿಸುತ್ತಿರ
ಲಾಪುರವ ಭೂಪಾಲಕ ದ್ರ
ವ್ಯಾಪಹರಿಸಿದುದನ್ನರಿದು ಪಿಡಿದವನ ಕರಗಳನು
ಕೋಪದಿಂ ಕಡಿಸಲ್ಕೆ ಸತಿಯು ಪ್ರ
ಳಾಪಿಸುತ್ತೈತರೆ ಚರರು ಕಡು
ತಾಪದಿಂ ಪಿಡಿದವಳ ನಾಶಿಕ ಛೇದಿಸಿದರಾಗ ೧೫

ಆಗಲಾ ದಂಪತಿಗಳಾಪುರ
ಭಾಗದೊಳು ನಿಂದಮಿತ ವೆಸನಿಮ
ದಾಗಿ ಚರಿಸಿ ಸುಶೀಲನೆಂಬ ದ್ವಿಜೋತ್ತಮ ಮನೆಗೆ
ಪೋಗುತಿರಲತ್ಯವಸರದೊಳವ
ರಾಗಮನವನು ನೋಡ್ದು ಬಂದು ಸ
ರಾಗದಿಂ ಭುಜಬಲನೃಪಾಲಕನೆಂದು ಗುರ್ತಿಸಿದ ೧೬

ಎಲವೊ ನೀನಾರ್ ನಿನ್ನ ಪೆಸರೇ
ನೊಲಿದು ಪೇಳ್ನಾನಾರು ಬಲ್ಲಿಯೊ
ಕಾಲದೊಳುತ್ತಮನೆನಿಸಿ ಬಿಕ್ಕೆಗಿ ಬರಲಿರ್ದಪರೇ

ನೆಲವನಾಳುವದೆತ್ತಲಗಣಿತ
ಬಲಮದೆತ್ತ ಸುಮಂತ್ರಿಯೆತ್ತಸು
ನಿಲಯಮೆತ್ತವಿದೇಂ ವಿಚಿತ್ರವು ತೋರದೆನಗೆಂದ ೧೭

ಆ ತಿರುಕನವನಾಡ್ದ ನುಡಿಯಿಂ
ಈತ ಭಸಿತ ಮಹತ್ವ ಪೇಳ್ದ ಮು
ನೀತನಾದ ಸುಗುಣ ದ್ವಿಜನೆಂದರಿದು ಸತಿ ಸಹಿತ
ಪ್ರೀತಿಯಿಂ ಪದಕೆರಗಿ ನುಡಿದನು
ಭೂತಿಯನು ನಾ ನಿಂದಿಸಿದ ಘನ
ಪಾತಕಕ್ಕೀ ರೀತಿಯಾಯಿತು ನೀನೆ ಸಲಹೆಂದ ೧೮

ಕರುಣದಿಂ ದ್ವಿಜಹರನ ಭಸಿತವ
ಕರದಿಕೊಂಡು ನರೇಂದ್ರನಂಗಕೆ
ಧರಿಸಲಾಕ್ಷಣ ಕಡಿದ ಕರಗಳು ಬೆಳೆದು ತೋರಿದವು
ಧರಣಿಪನ ನಿಜರಮಣಿ ವಿಪ್ರನ
ಚರಣಯುಗ್ಮಕೆ ಮಣಿದು ಯೆನ್ನು
ದ್ಧರಿಪುದೆಂದಾಲ್ಪರಿಯುತಿರೆ ಮುಖ ನೋಡಿದನು ದ್ವಿಜನು ೧೯

ಭಾವೆ ನಿನ್ನಯ ನಾಶಿಕೇಂದ್ರಿಯ
ದಾವ ಕರ್ಮದಿ ಪೋಗಿಹುದು ಸ
ದ್ಭಾವದಿಂದುಸುರೆನಲು ವಿಪ್ರನೆಯೆನ್ನ ವಲ್ಲಭನು
ಓವಿನಿಂ ನೀನೊರೆದ ಭಸಿತ ಮ
ಹಾವಿಪುಲ ಮಹಿಮೆಯನು ಕೇಳದೆ
ಗಾವಿಲತೆಯೊಳು ನಿನ್ನ ನಿಂದಿಸಿ ಕಳಿಪ ಸಮಯದಲಿ ೨೦

ಓತು ನಿನ್ನನು ನೋಡಿದಾಂ ವಿಪ
ರೀತಮತಿಯಿಂ ಹಾಸ್ಯ ಮಾಡುತ
ಸೀತೆನದರಿಂ ನಾಶಿಕವು ಪೋಯ್ತೆಂದು ಪೇಳಿದಳು
ಭೂತಿಯನು ದ್ವಿಜನವಳ ವದನಕೆ
ಪ್ರೀತಿಯಿಂ ಧರಿಸಲ್ಕೆ ನಾಶಿಕ
ವಾತತಕ್ಷಣದಲ್ಲಿ ಸಂಪಿಗೆಯಂತೆ ಶೋಭಿಸಿತು ೨೧

ಕಡಿದ ಕರನಾಶಿಕ ಭಸಿತದಿಂ
ಪಡೆದು ಕೆಲದಿನದಲ್ಲಿ ರಾಜ್ಯಕೆ
ಸಡಗರದಿ ಬಂದಖಿಳ ಸಂಪದ ಪಡೆದು ಕಡೆಯಲ್ಲಿ
ಮೃಡನ ಲೋಕಕೆ ಪೋಗಿಗಣಪದ
ಮೃಡನ ಕರುಣವ ಸಿಕ್ಕಿತೈ ತಿಳಿ
ದೃಢದಿ ಭಸಿತದ ಮಹತಿಯನು ನುಡಿಯಲಾರಳವಲ್ಲ ೨೨

ಭೂಮಿಪತಿ ಯೋರುವನು ಪಾಪದ
ಷೋಮದಿಂದನುಜತ್ವಮಂ ಪಡೆ
ದೀಮಹೀತಲದಲ್ಲಿರುವ ಮಾನವರ ಪಿಡಿಯುತಲಿ
ನೇಮದಿಂದ ನುದಿನದಿ ಭಕ್ಷಿಸಿ
ಕ್ಷೇಮದಿಂದಿರಲೊಂದು ದಿನ ಮುನಿ
ವಾಮದೇವನ ಭಸಿತದಿಂದಲಿ ಮುಕ್ತಿ ಹೊಂದಿದನು ೨೩

ದುರಿತವಧಿಕದಿ ವಿಪ್ರನೋರುವ
ಪಿರಿಯರೋಗದೊಳಸುವಳಿದು ಬಿ
ದ್ದಿರೆ ಸಮಶಾನದಿ ಶುನಕವದಾಬೂದಿಯೊಳು ನಿಂದು
ಭರದೊಳಾ ಶವವನ್ನು ತುಳಿದುರು
ತರ ಭಸಿತಮಂ ಧರಿಸಿ ಪೋಗ
ಲ್ನರಕದಲ್ಲಿಹ ದ್ವಿಜಗೆ ನಿಜಪದವಾಯಿತೆಲೆ ಕಂದ ೨೪

ಆಲಿಸಿನ್ನೆಲೆ ಮಾಂತಯೋಗಿಯೆ
ಲೀಲೆಯಿಂದನುಗೂಡಿ ನಾನನು
ಕೂಲದಿಂ ಪೇಳಿದೆನಖಿಳ ಶಿವ ಮಹಿಮೆಗಳ ನಿನಗೆ
ಬಾಲನೆನಿಸುವ ಬಸವಲಿಂಗಗೆ
ಕಾಲ ಕಾಲಕೆ ಪೇಳ್ದು ಸಂಶಯ
ಜಾಲಮಂ ಸಂಹರಿಪುದೊಂದೊರೆದ ಸುವಿಮೋಹದಲಿ ೨೫

ವರವೆನತಿ ಮುದದಿಂದೆ ಲಾಲಿಸು
ಮೆರವ ಮೈಸೂರರಸು ಯೆಮ್ಮಗೆ
ಪರಮ ಶಿಷ್ಯನು ತಿಳಿಮನದಿ ಮಿಕ್ಕ ಖಳರಿರುತಿಹರು

ತರುಳ ತೊಂಬತ್ತೇಳ್ಮಠಂಗಳು
ಇರುವವೀ ಸಿಂಹಾಸನಕೆ ಪ
ನ್ನೆರಡು ಸಾಸಿರದವರೆ ನಾವಾಗಿರುವೆವೈಯೆಂದ ೨೬

ಮತ್ತೊರೆವೆನಾಲಿಸು ಮಹಂತನೆ
ಸುತ್ತಿರುವ ಕೆಲವೂರುಗಳ ನಾ
ಲ್ವತ್ತು ಸಾಸಿರ ಹಣವು ನಮ್ಮಗೆ ಬರುತಿರುವದಿದನು
ನಿರುತದಲಿ ಸದ್ವ್ಯಯವ ಮಾಡುತ
ಧರಣಿಯೊಳು ಮರ್ದಡೆಯೊಳಿಹ ಪಾ
ಮರರ ಸತ್ಪಥಕೆಳಿಸುವವೆ ಕರ್ತವ್ಯವೆಮಗೆಂದು ೨೭

ಸುತನೆಯೊಂದಭಿಲಾಷೆಯನಗಿಹು
ದತಿಶಯದಿ ಪೇಳುವೆನು ತಿಳಿ ತಿಳಿ
ಹಿತದೊಳೆಮ್ಮಯ ಮಠದಿ ಮುದ್ರಾ ಖೋಲಿಯನು ರಚಿಸು
ಕ್ಷಿತಿಯೊಳಗೆ ಶಿವ ನಿನ್ನರಿಯದ ಕು
ಮತಿಗಳಿಗೆ ಮುದ್ರೆಯೊಳು ಶಿವನು
ನ್ನತ ಕಲೆಯ ತೋರಿಸಿಸುಗತಿಯನ್ನೀವುದನುದಿನದಿ ೨೮

ಗುರುವಿನಪ್ಪಣೆಯಿಂ ಮಹಂತನು
ಭರದಿ ಮುದ್ರಾಖೋಲಿಯನು ಬಂ
ಧುರದಿ ವಿರಚಿಸಿ ಮಠದೊಳಾಗಮಿಸಿದ ಮನುಜರನ್ನು
ಸರಸದಿಂ ಸಂಕೇತ ತಳಕೊ
ಯ್ದೊರೆದು ಮಂತ್ರವ ಮುದ್ರೆಯೊಳುಗಡ
ಪರ ಶಿವನ ಕಲೆ ತೋರಿಸುತ್ತಿರುತಿರ್ದನುತ್ಸವದಿ ೨೯

ಭೂರಿ ಸಂಪದ ತಾಳ್ದಸೆವ ಮೈ
ಸೂರ ಭೂಪನ ಮಡದಿಯರು ಗಂ
ಭೀರದಿಂ ರಂಭಾಪುರದೊಳಿಹ ಗುರುವರನ ಚರಣ
ವಾರಿಜಂಗಳ ಕಾಂಬುದಕೆ ಶೃಂ
ಗಾರಪೂರಿತರಾಗಿ ರಥಗಳ
ನೇರಿ ಪಾಯ್ದಳ ಸಹಿತ ರಂಭಾಪುರಿಗೆ ಮುಟ್ಟಿದರು ೩೦

ಗುರುವರನ ಪದಕೆರಗಿ ಮಠದೊಳ
ಗಿರುವ ಶಿವಲಿಂಗಗಳ ನೋಡುತ
ಹರಧ್ಯಾನದೊಳ್ಳೈತರಲು ಮುದ್ರಾಸುಮಂದಿರಕೆ
ಬರೆ ಮಹಂತನು ರಾಣಿಯರನೊಳ
ಕರೆದು ಕರಗಳ ಪಿಡಿದು ಕುಳ್ಳಿರಿ
ಸಿರದೆ ಮಂತ್ರವನೂದಿ ಮುದ್ರೆಯನಿಡಿಸಿ ತೋರಿಸಿದ ೩೧

ಮರಕಟಗೆ ಮಣಿಮೆಯ ಸರವ ಮೇಣ್
ಕುರುಡನಿಗೆ ಕನ್ನಡಿಯ ಹೊಲಬವ
ನರಿಯದಗೆ ಸಂಜೀವನವನೊಲಿದಿತ್ತ ಪರಿಯಂತೆ
ಹರನ ಕಲೆಯನು ತೋರಿದರೆ ಭೂ
ವರನ ಮಡದಿಯರಿಂಗೆ ಮೈಕೈ
ಭರದಿ ಮುಟ್ಟಿದನೆಂಬ ವ್ಯಾಕುಲ ವ್ಯಾಪಿಸಿತು ಮನದಿ ೩೨

ಚಕ್ಕನಲ್ಲಿಂದೆದ್ದವರು ಈ
ಠಕ್ಕರಿಗೆ ನಮ್ಮರಸನಿಂತವೆ
ತಕ್ಕಶೀಕ್ಷೆಯನೀಯ್ಯದಿರೆ ಮುಂದೆಷ್ಟು ಇದರಂತೆ
ಬಿಕ್ಕಲದ ಕಾರ್ಯಗಳನೆಸಗುತ
ದಕ್ಕಿಸುವದಿದು ನಿಶ್ಚಯಂ ಘನ
ಸೊಕ್ಕು ಮುರಿಸುವೆವೆಂದು ಮನದೊಳು ಖೇದ ತಾಳಿದರು ೩೩

ಪೋಗಿ ತಮ್ಮಯ ಪುರಿಗೆ ಶಿರವನು
ಬಾಗಿ ತಮ್ಮಯ ಪತಿಗೆ ಭಯವನು
ನೀಗಿ ರಂಭಾಪುರದಿ ನಡೆದುದನೆಲ್ಲ ತಿಳಿಸಲ್ಕೆ
ರೇಗಿ ನೃಪವರ ತನ್ನ ಸೈನ್ಯಕೆ
ಕೂಗಿ ಪೇಳಿದ ಬಾಳಿಹಳ್ಳಿಗೆ
ಪೋಗಿ ಸ್ವಾಮಿಗಳನ್ನು ಶೀಕ್ಷಿಸಿ ಬರುವೆ ನಡಿಯೆಂದ ೩೪

ಸೇನೆಯವರನು ಸಿದ್ಧಗೊಳಿಸುತ
ಆನೆಗಳ ಶೃಂಗರಿಸಿ ರಥದೊಳು
ತಾನೆ ವಾಸಿಸಿ ಬಲ ಸಮೇತದಿ ಪ್ಯೆಣ ಮಾಡಿದನು

ಮಾನವಾಧಿಪ ಸಾಮಿಗಳ ಕಂ
ಡೇನು ಶೀಕ್ಷೆಯ ಮಾಳ್ಪನೋ ಯಂ
ದಾನಗರದ ವಿವೇಕಿಗಳು ಯೋಚಿಸಿದರಂತರದಿ ೩೫

ಭೂರಿ ಕೋಪವನಾಂತು ರಥವನು
ಯೇರಿ ಹಯಗಜ ಸಮುದಯದ ಪರಿ
ವಾರದಿಂ ರಂಭಾಪುರಿಗೆ ಬರುತಿರ್ಪ ಸಂಗತಿಯಂ
ಸಾರತರದ ಚಿದಕ್ಷಿಯಿಂ ಮೈ
ಸೂರು ಬಿಟ್ಟುದನರಿದುಗಡಸುಕು
ಮಾರನೆನಿಪ ಮಹಂತನಿಗೆ ಕರೆದೊರೆದ ಗುರುವರನು ೩೬

ಬಸವಲಿಂಗ ಮಹಂತರೀರ್ವರಿ
ಗೊಸಿದು ಪೇಳಿದ ಭೂಪ ಬಂದಡೆ
ವಸುಧಿ ಜನಕಪಹಾಸ್ಯ ತೋರ್ಪುದು ಸಾಕು ಸಾಕಿನ್ನು
ಎಸವಮಠವಿದನುಳಿದು ಸಕಲರು
ಮಿಸುಪ ಕಾಶೀ ಕ್ಷೇತ್ರ ಕೈದೊಡೆ
ಅಸಮ ನೇತ್ರನು ಮಾನದಿಂ ಪಾಲಿಸುವನೆಮ್ಮನ್ನು ೩೭

ಅಂದ ನುಡಿಗೇಳುತ ಮಹಂತನು
ತಂದೆ ಕೇಳ್ಮನದೊಳಗೆ ಪರಿಪರಿ
ದಂದುಗದಿ ಕುಳ್ಳಿರುವದೇಂ ಬಿಡು ಬಿಡು ನೃಪನಭಯವ
ಹಿಂದೆ ಶಂಕರದಾಸಿಮಯ್ಯನು
ಚಂದದಿಂ ಪರದೈವವನು ಕ
ಣ್ಣಿಂದ ನೋಡುತ್ತಾರಿಸಿದ ತಾಂ ಮಾಡುವೆನು ತಿಳಿಯೈ ೩೮

ಬಾಲ ನಿನ್ನಯ ಮಹಿಮೆ ಬಲ್ಲೆನು
ಕಾಲಮಲ್ಲಿದು ಸುಮ್ಮನಿರುತ
ತ್ಕಾಲದಲಿ ಪೋಗುವದದುತ್ತಮ ನಿನ್ನ ದರುಶನದಿ
ಮೇಲೆಸವ ಭಕ್ತಾದಿಗಳಂ ಭವ
ಮೂಲ ಭೇದಕರಾಗಬೇಕಿದು
ದಾಲಸತ್ಸಮಯದಲಿ ಪೋಗುವದುಚಿತಮಿಹುದೆಂದ ೩೯

ಸುತರು ತಂದೆಯ ನುಡಿಗೆ ಒಪ್ಪಲು
ಪತಿತ ಪಾವನನಾದ ಗುರುವರ
ಖತಿಯೊಳಗೆ ಮಠಬಿಟ್ಟು ಸುತರೀರ್ವರನು ಕರಕೊಂಡು
ಚತುರತನದಿಂ ವಾರಣಸಿಯಸು
ಪಥವನಾಕ್ರಮಿಸುತ್ತ ಧೈರ್ಯದಿ
ಕ್ಷಿತಿರಥನ ನಾಮಸ್ಮರಣೆಯೊಳು ನಡೆದನತಿ ಭರದಿ ೪೦

ಸೇನೆ ಸಹಿತ ನೃಪೋತ್ತಮನು ರಂ
ಭಾನಗರಿಗೈದೆಸವ ಮಠದೊಳು
ತಾನರಸನೋಡಲ್ಕೆ ಸ್ವಾಮಿಗಳಿಲ್ಲದಂತಾಗೆ
ಮೌನದಿಂದವರಖಿಳ ಬಿರುದುಗ
ಳೇನುಳಿಯದಂತಪಹರಿಸಿಯನು
ಮಾನಮಿಲ್ಲದೆ ಧನಕನಕ ಸಂಪದವ ತಕ್ಕೊಂಡ ೪೧

ಆ ಮಠಕೆ ಜಾಗೀರೆನಿಪ ಕೆಲ
ಗ್ರಾಮಗಳ ಹಿಕ್ಕಳಿದು ತಮ್ಮಯ
ನಾಮದೊಳ್ ಸ್ಥಿರಗೊಳಿಸಿ ಬಿರಿದಾವಳಿಯನೆಲ್ಲವನು
ಪ್ರೇಮದಿಂ ಶೃಂಗೇರಿ ಪುರದಾ
ಸ್ವಾಮಿಗಳಿಗಿತ್ತತುಳವಿಭವದಿ
ಭೂಮಿಯೊಳು ಸಾರಿಸಿದನಾಗಳೆ ಸಕಲರರಿವಂತೆ ೪೨

ರಾಯನೀ ಪರಿಯೆಸಗಿ ತನ್ನಯ
ಪಾಯಗಜದಳರಥ ಸುವಾಜಿ ವಿ
ದಾಯದಿಂ ರಂಭಾ ನಗರಿಯನ್ನುಳಿದು ಗರ್ವದೊಳು
ಶ್ರೇಯಸಮಿದಾಯ್ತೆಂದು ಮಂತ್ರಿಗೆ
ಬಾಯ ತೆರೆದುಸುರುತ್ತ ನಡೆದಿರೆ
ಕಾಯದೊಳು ಜ್ವರಮುದಿಸಿ ಸಂಕಟವದಗಿತಾಕ್ಷಣದಿ ೪೩

ನೋವಿನೊಳು ತಳಮಳಿಸುತಂತ
ರ್ಭಾವ ಮಸಳಿಸಿ ದಿಗ್ಭ್ರಮಣೆಯದು
ತೀವಿ ನೃಪ ಸ್ವರಾಜ್ಯ ಮೈಸೂರೆಂಬ ಪಟ್ಟಣಕೆ

ಆವವಿಷಯದ ಭ್ರಾಂತಿಯಿಲ್ಲದೆ
ಸಾವಧಾನದಿ ಸೇರಿ ಯೌಷಧ
ವೀವರನರಸಿ ಕೋವಿದರಿಗೆ ಕರವನು ತೋರಿಸಿದ ೪೪

ನಾಡಿಜ್ಞಾನದ ವೈದ್ಯರ ಗಣಿತ
ಕೂಡಿಭೂಪನ ಕರವಿಡಿದು ಸಲೆ
ನೋಡಿ ಆಯುರ್ವೇದ ಪದ್ಧತಿಯಂತೆ ಯೌಷಧವ
ಮಾಡಿ ಕೊಡಲದಕಿಮ್ಮಡಿಯ ಪರಿ
ಗೂಡಿ ಬೇನೆಯು ಬಾಧಿಸಲ್ಕೊಗ
ಬಾಡಿಕೂತರು ಬಂದ ವೈದ್ಯರು ಹೇಳಲಿನ್ನೇನು ೪೫

ಕಾಯಸಂಕಟ ತಾಳಲಾರದೆ
ರಾಯ ಸಿಡಿಮಿಡಿಸುತ್ತಲಾಕ್ಷಣ
ಸಾಯತಾತನ ಮಡದಿಯರು ಗಡ ಬಂದು ಶವದೆಡೆಗೆ
ತೋಯಜಾಕ್ಷನೆ ನಿನ್ನ ಮುಖ ಯೆರ
ವಾಯಿತೇ ಮದ್ರಮಣ ಭೂವರ
ಹಾಯೆನುತ ದುಃಖಾಬ್ಧಿಯೊಳು ಮೈಮರೆದು ಮುಳುಗಿದರು ೪೬

ಜಾಣನೋರುವ ಬಂದು ಭೂಪನ
ರಾಣಿಗಳ್ಗೆ ಸುಬೋಧಿಸಿದ ಮುಂ
ಗಾಣದಾ ಗುರು ಚಂದ್ರಶೇಖರರನು ಸ್ಥಲ ಬಿಡಿಸಿ
ಊಣೆಯಿತ್ತದರಿಂದ ಭೂಪನು
ಪ್ರಾಣಕೊಟ್ಟನು ನಿಮ್ಮ ನುಡಿಯಿಂ
ಕ್ಷೋಣಿಯೊಳು ನಾರಿಬುದ್ಧಿ ಪ್ರಳಯಮೆಂಬುದು ಸಹಜಂ ೪೭

ಗುರುವರನನರ ಸಿಂದಂಭಾವಿಪ
ಮರುಳರಿಗೆ ಮರಣಾಂತ್ಯದೊಳು ಪಿರಿ
ನರಕ ಲಭಿಸುವುದೆಂದು ಶ್ರುತಿ ಸಾರುವದು ನೀವಿದನು
ಮರೆದು ಗುರುವರನನ್ನು ನಿಂದಿಸು
ತರಸನೊಳು ಪೇಳ್ದಂ ಮಹಾತ್ಮರ
ನಿರದೆ ದೇಶತ್ಯಾಗ ಗೈಸಿದಿರಿದು ಮಹಾಪಾಪಂ ೪೮

ಹರನು ಮುನಿದರೆ ಗುರು ಪೊರೆವನಾ
ಗುರುವು ಮುನಿವರೆ ಪುರಹರನು ಸ
ತ್ಕರುಣದಿ ಪೊರೆಯನೆಂದೊರಲುವದು ಶೃತಿಮೊತ್ತ
ಗುರುವರನ ಪದಕೆರಗಿ ಪರಿಪರಿ
ಸ್ಮರಿಸಿ ಪೂಜಿಸಲಾತ ನಿಮ್ಮನು
ಕರುಣದಿಂ ಪಾಲಿಸುವನಲ್ಲದೆ ಮುಕ್ತಿ ದೊರೆಯುವದು ೪೯

ಆ ವಿವೇಕಿಯು ಪೇಳ್ದ ಮಾತಿಗೆ
ಸಾವಧಾನದಿ ರಾಣಿಯರು ಗುರು
ವಾವಸ್ಥಲದೊಳಗಿಪ್ಪ ನೋಯೆಂದಾತ್ಮದೊಳು ಮರುಗಿ
ಭಾವ ಶುದ್ಧ ಸುಭಕ್ತಿಯಿಂ ಚರ
ರಾವಳಿಯ ಕಳಿಸಿದರು ಶ್ರೀ ಗುರು
ದೇವನಂ ಶೋಧಿಸಿ ತರುವದಕ್ಕಾಗಿ ದಿಶೆದೆಶೆಗೆ ೫೦

ಇಂತು ಕವಿಭೀಮಾಖ್ಯ ಪೇಳ್ದಮ
ಹಾಂತ ಮಾಹೇಶನ ಚರಿತ ಸಲೆ
ಸಂತಸದಿ ಬರದೋದಿ ಕೇಳಿದವರ್ಗೆ ಪೇಳ್ದರ್ಗೆ
ಸಂತತಂ ಘನಭೋಗಭಾಗ್ಯಮ
ನಂತಮಿತ್ತಿಹ ಪರದಿಕೃತಿಕ
ರ್ತಂತವಕದಿಂ ಪಾಲಿಸಲಿ ಆತ್ಯಂತ ಹರುಷದಲಿ ೫೧

ಅಂತು ಸಂಧಿ ಏಳಕ್ಕಂ ಪದ್ಯಗಳು ೫೧+೨೭೫=೩೨೬ಕ್ಕಂ
ಮಂಗಲಂ

೮ನೇ ಸಂಧಿ

ಸೂಚನೆ: ಗುರುವರನು ಸುಕ್ಷೇತ್ರ ನೋಡು
ತ್ತಿರದೆ ದೋರನ ಹಳ್ಳಿಗೈ ತಂ
ದೆರಕದಿಂ ಗೌಡನ ಪೊರೆದು ಮಠವನ್ನು ನಿರ್ಮಿಸಿದ

ಪುರದಹನ ಸ್ಮರಕಾಲ ಸಂಹರ
ಸುರಪನುತ ಪದ ಕಾಲಕಂಧರ
ನರಶರದಿ ಸುಖ ಮೂಲ ಮಂದಿರ ಶೂಲಧರದೇವ
ಶರಣಕುಲ ಪರಿಪಾಲ ದುರ್ಭವ
ಹರಣ ಮಹಿಮೆ ವಿಶಾಲ ಶಿವನಿ
ರ್ಮರಣಸಾಂಬ ಸುಶೀಲಯೆಮ್ಮನು ಪಾಲಿಸನುದಿನದಿ ೧

ಜ್ಞಾನನಿಧಿ ಶಶಿಶೇಖರನು ರಂ
ಭಾ ನಗರಿಯನು ಬಿಟ್ಟು ಪರಮನಿ
ಧಾನದಿಂದಲ್ಲಲ್ಲಿ ಕ್ಷೇತ್ರಗಳೀಕ್ಷಿಸುತ ಮೋಕ್ಷ
ಸ್ಥಾನಮೆನಿಸುವ ಕಾಶೀಕ್ಷೇತ್ರಕೆ
ಸಾನುರಾಗದಿ ಬಂದು ಶಿವನಂ
ಮಾನಸದಿ ನೆನೆಯುತ್ತ ಪುರವೈಭವ ನಿರೀಕ್ಷಿಸಿದ ೨

ಗುರುವರೇಣ್ಯನು ಶಿಷ್ಯರೀರ್ವರ
ವೆರಸಿ ಹರತಾಂ ಕರಿಮುಖಕುಮಾ
ರರನು ಕೂಡ್ಡಿಳೆಯನ್ನು ಪೊರೆವುದಕೆ ಅನುನಯದಿಂದ
ಭರದಿ ನರರೂಪದೊಳಿಳಿದನೆಂ
ದೆರಕದಿಂದವರನ್ನು ನೋಡುತ
ಪುರಜನರು ತಂತಮ್ಮೊಳಗೆ ತರ್ಕಿಸುತ ನುತಿಸಿದರು ೩

ವಾರಣಸಿಪುರದಾದಿ ವೈಭವ
ತಾರತಮ್ಯದಿ ಶಿಷ್ಯರಿಗೆ ತಾಂ
ತೋರಿಸುತ ಗುರುಚಂದ್ರಶೇಖರ ಕಣ್ಗೆರಂಜಿಸುವ
ಸಾರವಿಶ್ವೇಶ್ವರನ ಗುಡಿಯ
ದ್ವಾರವ ಪೊಕ್ಕ ದೇವ ದೇವನ
ಭೂರಿವಿಭವದಿ ನೋಡಿ ಪರಮಾನಂದಮಯನಾದ ೪

ಆ ದಿವಸಮಲ್ಲಿರ್ದುರಂಜಿಪ
ನಾದಿಯಖಿಳ ಸುಲಿಂಗಗಳ ಕಾ
ಣಾದರದಿ ಗಂಗಾಜಲದಿ ತಾ ಮಿನಿದು ಲಿಂಗಾಂಗಂ
ಭೇದಮಿಲ್ಲದೆ ಯಿಷ್ಟಲಿಂಗವಿ
ದಾದಿ ಮುಕ್ತಿಂಗೆಂದು ಮಂತ್ರವ
ಘಾಲಿಸಿ ಸದ್ಭಕ್ತಿಯೊಳು ಪೂಜೆಯಗೈದನುತ್ಸವದಿ ೫

ಕಾಶಿಪುರವನುಬಿಟ್ಟು ಪಂಚ
ಕ್ಲೇಶ ವಿರಹಿತನಾಗಿ ಶ್ರೀ ವಿ
ಶ್ವೇಶನನು ಸ್ಮರಿಸುತವರಕಲ್ಯಾಣಪುರ ಪೊಕ್ಕು
ಈಶನಪ್ಪಣೆಯಂ ಪಡೆದು ಧರ
ಣೀಶ ಬಿಜ್ಜಳನಂವಧಿಸಿ ಬಸ
ವಾ ಶಿವನಮತ ಬೆಳಸಿದ ಸ್ಥಲಮೆಂದು ಕೊಂಡಾಡ್ದ ೬

ಆಲಸನ್ನಗರದೊಳಿರುವ ಲಿಂ
ಗಾಲಯಗಳ ನಿರೀಕ್ಷಿಸುತ ಸ
ಲ್ಲೀಲೆಯಿಂ ಶ್ರೀ ರುದ್ರಮುನಿಯ ಗುಹಾಂತರವಕಂಡು
ಮೇಳದಿಂದೊಳ ಪೊಕ್ಕು ವಾಸಿಸಿ
ಮೂಲ ಮಂತ್ರ ಪುರಶ್ಚರಣವನು
ವೈಲದಿಂ ಗೈದಾಗಯೋಗಾಭ್ಯಾಸ ಮಾಡಿದರು ೭

ಬಸವ ಮಹಿಮಸ್ಥಲ ತೊರೆದು ಗಡ
ಮಿಸುಪ ಭೀಮಾನದಿಯ ದಾಂಟುತ
ಅಸಮಶಿರಿವಾಳೆಂಬ ಊರಿಗೆ ಬಂದು ಬೇಗದಲಿ

ಎಸೆವಸಿದ್ಧ ಸುಲಿಂಗ ದೇವನ
ಒಸೆದು ದರ್ಶನಗೊಂಡು ಸಲೆ ರಂ
ಜಿಸುವ ದೇವಾಲಯದಿ ನಿಂದನು ಒಂದೆರಡು ದಿವಸ ೮

ಆಗಲಾ ಶಿವಸಿದ್ಧಲಿಂಗನು
ಬೇಗದಿಂ ತವ ಶಿಷ್ಯರನು ಅನು
ರಾಗದಿಂದೊಪ್ಪಿಸುತ ಗುಣ ತೃಪ್ತಿಯನುಗ್ಗೈಸಿದನು
ಯೋಗಿನುತ ಶಶಿಶೇಖರನು ಶಿರ
ದೂಗಿ ಭಕ್ತಾದಿಗಳಿಗನಿಮಿತ
ಮಾಗಿ ಪೋಷಿಸಿ ತನ್ನುಭಯ ಪುತ್ರರವೆರಸಿ ತಾನು ೯

ಮೆಲ್ಲನಲ್ಲಿಂ ಬೇವಿನಾಳಿಗೆ
ನಿಲ್ಲದೈತಂದದನು ಬಿಟ್ಟ
ತ್ಯುಲ್ಲಸಿತ ವರದೋರನಳ್ಳಿಯ ಪಥವಿಡಿದು ನಡೆದು
ಅಲ್ಲಿರುವದಕ್ಕಾಗಿ ಬೇಸರ
ದಲ್ಲಿ ತರುನೆರಳಿಂಗೆ ವಾಸಿಸಿ
ಸಲ್ಲಲಿತ ಸುವಿಚಾರ ಗೋಷ್ಠಿಯ ಶಿಷ್ಯರಿಗೆ ಪೇಳ್ದ ೧೦

ದೋರನಳ್ಳಿಯ ಗೌಡನೆಂಬುವ
ಡೋರ ಕುಲದವನಿರಲು ರೋಗವು
ಸೇರಿ ಕುಷ್ಟದಿಯಂಗ ಕೆಟ್ಟಿಹುದಕ್ಕೆ ಭಕ್ತಿಯೊಳು
ಸಾರತರ ಮಂದಾಕಿನಿಯ ಜಲ
ನೋರುವ ಸುಜಂಗಮನ ಕರದಿಂ
ಭೂರಿದಿನದಿಂ ತರಿಸಿ ಮಿನಿಯುವ ನೇಮದಿಂದಿರ್ದ ೧೧

ಜಲತರುವ ಜಂಗಮನು ವಂದಿನ
ಮಲಿನ ಬುದ್ಧಿಯನಾಂತು ಸ್ವಾರ್ಥ
ಕ್ಕೊಲಿದು ಬೇವಿನಹಾಳು ಗ್ರಾಮಕೆ ಪೋಗಿ ಬರುಬರುತಂ
ಜಲ ಮೊದಗಿಸುವ ಸಮಯವಾಯ್ತೆಂ
ದೊಳಗೊಳಗೆ ಯೋಚಿಸುತ ಬಲು ಕಳ
ವಳದಿ ಬಂದನು ಚಂದ್ರಶೇಖರ ನಿಳಿದ ತರುವಿಂಗೆ ೧೨

ಚನ್ನೆಸವ ಶಶಿಶೇಖರನ ನೋ
ಡ್ದುನ್ನತ ಸುಭಕ್ತಿಯೊಳು ವಂದಿಸಿ
ತನ್ನ ನೇಮಿತ ಕಾರ್ಯವನು ತಾ ತಿಳಿಸಲಾಗವರು।
ಬಣ್ಣ ಬಿಡುವದಿದೇಕೆ ಬಿಡು ಮ
ತ್ತಿನ್ನು ಯೋಚಿಸದೆನ್ನ ನುಡಿಯನು
ಮನ್ನಿಸುತ ನೀ ನೀ ಸಮೀಪದ ನೀರು ತಾರೆಂದ ೧೩

ಚರನು ಬೇಗನೆ ಕೊಡದಿ ಜಲವನು
ತರಲು ಗುರುವರ ಕರುಣದಿಂ ತವ
ಚರಣದಂಗುಷ್ಟಗಳ ನಾನೀರೊಳಗಿರಿಸಿ ತೆಗೆದು
ತರುಳ ಕೇಳೀ ಜಲದಿ ದೋರನ
ಹಿರಿಯ ರೋಗವು ಪೋಪು ದೈ ಮಂ
ದಿರಕೆ ನಡಿ ಮಂದಾಕಿನಿಗೆ ಪೋಗುವೆವು ನಾವೆಂದ ೧೪

ಚರವರನು ಸಂತೋಷದಿಂ ಮನೆ
ಗಿರದೆ ಜಲವನು ತಂದು ಕೊಡಲಾ
ದರದಿ ದೋರನು ಜಳಕ ಮಾಡಲು ರೋಗವಾಕ್ಷಣದಿ
ಪರಿದು ವಿನೂತನಂಗವಾದುದ
ನರಿದವನಿದೇಂಚಿತ್ರವೆಂದಾ
ಚರವರನ ಕರಿಸುತ್ತ ಶುದ್ಧ ತನುವನು ತೋರಿಸಿದ ೧೫

ಜಂಗಮನು ತ್ವರೆತಮ್ಮ ಗೌಡನ
ಮಂಗಲಾಂಗವ ನೋಡಿ ಮನದೊಳು
ತುಂಗಸಿರಿಗುರು ಚಂದ್ರಮೌಳಿಯ ಮಹಿಮೆಗಳನೆನೆದು
ಎಂಗನಂದದಿ ಬಿಟ್ಟಿನವರಪ
ದಂಗಳಿನ್ನೆಂದಿಂಗೆ ಕಾಂಬುವೆ
ನಂಗಜಾರಿಯ ಬಲ್ಲನೆಂದಾತ್ಮದೊಳು ತರ್ಕಿಸಿದ ೧೬

ಏಕಚಿತ್ತದೊಳಾಲಿಸಿಂದುವಿ
ವೇಕಿ ಗೌಡಗೆ ಪೇಳ್ದ ಚರಮಂ
ದಾಕಿನಿಗೆ ನಾಂ ಪೋಗದೀ ದಿನ ಸಾರ್ಥ ಕೆಲಸಕ್ಕೆ

ಜೋಕೆಯಿಂದಲಿ ಬೇವಿನಳ್ಳಿಗೆ
ನಾಕಡು ತವಕದಿಂ ಚರಿಸಿ ಬಹು
ವ್ಯಾಕುಲದಿ ಬರುತಿರಲು ಶಿವಯೋಗಿಯನು ನೋಡಿದೆನು ೧೭

ನೋಡಿಯಾ ಶಿವಯೋಗಿ ಪಾದಕೆ
ನೀಡಿ ತನುವನು ಕರ ಮುಗಿದು ಬಲು
ಬೇಡಿ ಕೊಂಡೆನು ನಿನ್ನ ನೇಮಿತ ಕಾರ್ಯವನು ತಿಳಿಸಿ
ಆಡಲೇತಕೆಮಗನೆ ಬಾವಿಯ
ನೋಡಿ ಜಲತಾರೆಂದುಸುರೆ ತಡ
ಮಾಡದಾಂತರಲದರೊಳಂಗುಷ್ಟಗಳಿರಿಸಿ ತೆಗದ ೧೮

ಈ ಜಲವು ಸೋಂಕಲ್ಕೆ ಗೌಡನ
ರಾಜರೋಗವು ಬೇಗದಿಂ ತಾ
ಮಾಜುವದು ನೀನಳಕ ಬೇಡೆಂದೆನಗಭಯವಿತ್ತು
ರಾಜಿಸುವ ಮಂದಾಕಿನಿಗೆ ಬಿಡ
ದೇ ಜವದಿ ಚರಿಸುವೆನೆನುತ್ತ
ತ್ಯೋಜೆಯಿಂ ಶಿಷ್ಯರ್ವೆರಸಿ ತಾನತ್ತ ಚರಿಸಿದನು ೧೯

ಹರನ ಯೋಗಿಯ ಚರಣ ತೀರ್ಥದ
ಪರಮ ಮಹಿಮದಿ ನಿನ್ನ ಗೊದಗಿದ
ಹಿರಿಯ ರೋಗವು ಪೋಗಿ ಪರಿಶುದ್ಧಾಂಗವಾಗಿಹುದು
ಮರುಳ ನಾನೊಂದೆತ್ನಿಸಲ್ಕೀ
ಶ್ವರನು ನಿನ್ನಯ ಸುಕೃತದಿಂದಾ
ಹರನೆ ಯೋಗಿಯ ಕಳಿಸಿರುವ ಮಮ ತಪ್ಪು ಕ್ಷಮಿಸೆಂದ ೨೦

ಚರಚರಣ ತೀರ್ಥದಲಿ ಭೂತಲ
ದಿರುವ ತೀರ್ಥಗಳ ಮಿತ ಫಲತಾ
ನಿರುವದೆಂಬುದನರಿಯದೇ ನಾನಿನ್ನ ಕಳಿಸಿದೆನು
ಪರಮ ಪಾತಕನಾದೆನೆನ್ನಂ
ಪೊರೆವದೆಂದಾಲ್ಪರಿದು ದೈನ್ಯದಿ
ಕರವ ಮುಗಿಯುತ ದೂರದೋಳ್ಸಾಷ್ಟಾಂಗವನುಗೈದ ೨೧

ಗ್ರಾಮಪತಿಗಾ ಜಂಗಮನು ಸು
ಪ್ರೇಮದಿಂದಪ್ಪಣೆಯನಿತ್ತಭಿ
ರಾಮದಿಂದಾಶೀರ್ವಚಿಸಿ ಯೋಳಿಸುತ ಸಂಭ್ರಮದಿ
ಸ್ವಾಮಿ ಶಿವಯೋಗೀಶ್ವರನ ನಿಜ
ನಾಮವನುನಾನರಿಯೆ ನೀ ಬಿಡ
ದಾ ಮಹಿಮರನು ಕಾಣು ಮಂದಾಕಿನಿಗೆ ಪೋಗೆಂದ ೨೨

ಭಾವಶುದ್ಧದಿ ಗೌಡ ಭಕ್ತಿಯ
ತೀವಿಯಾ ಜಂಗಮನ ಕರ ಕೊಂ
ಡೋವಿನಿಂದ ಶಹಾಪುರದ ಘನಗಿರಿಯನೇರಿದನು
ಸಾವಧಾನದಿ ಚಂದ್ರಶೇಖರ
ದೇವನಿಹ ಮಂದಾಕಿನಿಗೆ ವರ
ಕಾವ ಹರನನು ಸ್ಮರಿಸುತಾ ಸ್ವಾಮಿಯನು ನೋಡಿದನು ೨೩

ಮಂಗಲಮಯನ ಕಂಡು ತನ್ನ
ಷ್ಟಾಂಗಗಳ ನೆಲಸೋಂಕಿಸಿ ನಮಿಸಿ
ಲಂಗಜಾಂತಕ ರೂಪನೋಡ್ದೇಳೆಂದು ನುಡಿಯಲ್ಕೆ
ಅಂಗಕಾವರಿಸಿದ ಕುರೋಗದಿ
ಭಂಗಬಿಟ್ಟಿಂದಿಂಗೆ ತಮ್ಮಯ
ತುಂಗ ಮಹಿಮದೊಳಾನುಪರಿಶುದ್ಧಾದೆನೆಂದೊರೆದ ೨೪

ಎಲವೊ ನೀನಾಪವಗ್ರಾಮವು
ಕುಲಮದೇನೆನ್ನಗೆ ತಿಳಿಸುಬಂ
ದೊಲವಿನಿಂ ಸಾಷ್ಟಾಂಗಗೈದಿಹ ಬಗೆಯ ಪೇಳೆನಲು
ಬಳಿಯೊಳಿರ್ದಾ ಜಂಗಮನುಪದ
ಸಲಿಲ ಜಂಗಳಿಗೆರಗಿ ನುಡಿದನು
ಇಳೆಯೊಳಾತನು ದೋರನಳ್ಳಿಯ ಗೌಡನೆಂದೆನಿಸಿ ೨೫

ಇವನು ಡೋರಕುಲಾಧಮನುಬಹು
ದಿವಸದಿಂ ಹಿರಿರೋಗದಿಂದಿರೆ
ಭುವನದೊಳು ತವಚರಣ ಜಲದಿಂ ಶುದ್ಧನಾದದಕೆ

ತವೆಸುಭಕ್ತಿಯ ತಾಳ್ದು ಮಹದು
ತ್ಸವದಿ ತಮ್ಮನು ದೋರನಳ್ಳಿಗೆ
ಜವದಿ ಕರದೊಯ್ಯುವದಕಾಣೆಯೆ ನಮಿಸಿರುವನೀಗ ೨೬

ಬರುವೆನೆಂಬಭಯವನು ಕೊಟ್ಟೀ
ನರನಯೇಳಿಪುದೆಂದುಸುರಲಾ
ತುರದಿ ಗುರುವಂತಾಗಲೇಳೆಂದೊರೆಯಲಾಗವನು
ಭರದೊಳೆದ್ದುತ್ಸವದಿನಿಲ್ಲ
ಲ್ಚರನು ನುಡಿದನು ಗುರುವೆ ನಿಮ್ಮಯ
ಚರಣ ಶಿಷ್ಯರೆನಿಸುವೆವೆನಲಾ ಸ್ವಾಮಿಮಗುಳೆಂದ ೨೭

ಎನಿತು ಜನದಾಯಾದ್ಯರಿರುವಿರಿ
ಅನಿತು ಯಮ್ಮಗೆ ಶಿಷ್ಯರಹೆವೆಂ
ದೆನಗೆ ನಮಿಸಿನಲವನು ತತ್ಕಾಲದಲಿ ನಮಿಸಲ್ಕೆ
ತನಯ ಪೊಗುಳುವದೇಕೆ ಬಿಡುಹಿಂ
ದನಿಬರಭವನ ಭಕ್ತಿಯಿಂ ಜನ
ಜನಿತ ರೋಗವ ಕಳೆದುಕೊಂಡರು ಪೇಳೆನರಿಯೆಂದ ೨೮

ಭುವನದೊಳು ಮಾದಿಗರ ಜಾತಿಯ
ಶಿವಶರಣದೊಡ್ಡಯ್ಯನತ್ಯು
ತ್ಸವದಿ ಶಂಕರ ಭಕ್ತಿಯಿಂದಿರುತಿರಲು ತತ್ಪುರದಿ
ಪ್ರವಿಮಲಾಂಗದ್ವಿಜಗೆಕುಷ್ಟವು
ಅವತು ಕೊಂಡೌಷಧಿಗೆ ಮಾರ
ಲ್ಕವನು ಭಿಕ್ಷಾವೃತ್ತಿಯಿಂ ಕಳಿತಿರ್ದ ಕಾಲವನು ೨೯

ಒಂದು ದಿನ ಯೋಚಿಸುತ ವಿಪ್ರನು
ಬಂದು ದೊಡ್ಡಯ್ಯನಮನೆಯ ಮೇ
ಲಿಂದ ಪೋಗುತ್ತಿರಲವನ ಬಚ್ಚಲದ ಕುಣಿಯೊಳಗೆ
ಮುಂದುಗಾಣವೆ ಬಿದ್ದು ತನ್ನಯ
ಮಂದಿರಕ್ಕಾಗಮಿಸಿ ಜಲವನು
ತಂದು ಪರಿಪರಿಯಿಂದ ಸಂದಿದಕೆಸರತೊಳಕೊಳಲು ೩೦

ಮಳವಿಡಿದ ಚರಣಗಳು ಕಣ್ಣಿಗೆ
ಥಳಥಳಿಸುತಿರ್ಪುದನು ನೋಡ್ದವ
ಕಳವಳವ ಕಳೆದತಿ ಭರದಿಯಾ ಬಚ್ಚಲಕೆ ಪೋಗಿ
ಮುಳುಗಿ ಸ್ನಾನವ ಮಾಡಲಂಗವು
ಕಳೆತಳೆದು ಬಂಗಾರದಂದದಿ
ಬೆಳಗಲವ ದೊಡ್ಡಯ್ಯನಾಲಯಕೈದ ಸಂಭ್ರಮದಿ ೩೧

ಪೋಗಿ ದೊಡ್ಡಯ್ಯಂಗೆ ಶಿರವನು
ಬಾಗಿ ನಮಿಸುತ ಮಹಿಮೆಗಳನನು
ವಾಗಿ ಪೊಗಳುತ ಅಡಿಗಡಿಗೆ ಕರಯುಗಳ ಮುಗಿಯುತ್ತ
ಭೋಗುಣಾಡ್ಯನೆ ಪರಮಶಂಕರ
ಯೋಗಿ ಶ್ರೇಷ್ಠನೆ ನಿನ್ನ ಕೃಪೆಯಿಂ
ದೀಗನಾಂ ಕೃತಕೃತ್ಯನಾದೆನೆನುತ್ತ ನುತಿಸಿದನು ೩೨

ಎನ್ನನುತಿಸುವದೇಂ ವಿಚಿತ್ರವಿ
ದೆನ್ನು ತಾ ದೊಡ್ಡಯ್ಯ ಕೇಳಲು
ನನ್ನಿಯಿಂ ದ್ವಿಜ ನುಡಿದ ಪೂರ್ವದ ಪಾಪದಿಂದಿಹ ದಿ
ಎನ್ನಕೋಮಲತರ ಸುಕಾಯಕೆ
ಘನ್ನರೋಗ ವ್ಯಾಪಿಸುತ್ತಲೆ
ಬನ್ನಬಟ್ಟಾಂದುಃಖದೊಳು ಮನೆ ಮನೆಯಬೇಡಿದೆನು ೩೩

ಕಾರಿರುಳಿನೊಳು ನಿಮ್ಮ ಬಚ್ಚಲ
ನೀರಿನಲಿ ಬೀಳಲ್ಕೆಯಂಗ ವಿ
ಕಾರರೋಗವುನೀಗಿ ಮಂಗಲಗಾತ್ರನಾಗಿರುವೆ
ಮಾರಹರ ಯೋಗೇಂದ್ರಯನ್ನು
ದ್ಧಾರ ಮಾಡಿದಕಾಗಿನಿಮ್ಮುಪ
ಕಾರನೆನಿಸುತ ವಿಧವಿಧದಿ ನಾ ಧ್ಯಾನಿಸುವೆನೆಂದ ೩೪

ಕೇಳು ವಿಪ್ರನೆ ಯನ್ನ ಮಹಿಮವು
ಜಾಳುಯಂದರಿ ಪೂರ್ವಶರಣರು
ಯೇಳಿಗೆಯನುಸುರುವೆನು ಭೀಮಸುನಾಮದಾ ಶರಣ

ಬಾಳರೋಗದ ಬಳಲಿಕೆಯೊಳಿಹ
ಯೇಳು ಜನರನು ತನ್ನ ಮೃದುಪದ
ಧೂಳಿಯಿಂ ಶುದ್ಧಾಂಗಗೈದುದ್ಧರಿಸಿದನು ತಾನು ೩೫

ಎನಲು ವಿಪ್ರನು ಸಂತಸದಿ ಪದ
ವನಜಗಳಿಗೆಭಿವಂದಿಸುತ ದಿನ
ದಿನದಿ ದರ್ಶನಗೊಂಡು ಮುಕ್ತಿಯನಾರ್ಜಿಸಿದನವನು
ಇನಿತು ಸಾಹಸವೆಮ್ಮೊಳಿಲ್ಲವು
ಮನಸಿಜಾಂತಕ ಶರಣರೊಳು ನಾ
ಬಿನುಗನಲ್ಲವೆ ಬಳಿಕ ಶಿವಭಕ್ತರ ಕಥೆಯ ಕೇಳು ೩೬

ಪೊಡವಿಯೊಳು ಗುಡ್ಡವ್ವೆ ಮಾದರಿ
ಗೊಡತೆನಿಸಿ ನಾವದಿ ಗ್ರಾಮದಿ
ಮೃಡನ ಭಕ್ತಿಯೊಳಿರಲು ವಿಧಿವಶದಿಂ ಮಹಾರೋಗ
ಬಿಡದೆಯಂಗದಿ ವ್ಯಾಪಿಸುತ ಘುಳ
ವಿಡಿದು ಕರಕಾಲ್ಗಳ ಬೆರಳ್ಗಳು
ಕೆಡೆದು ಬೀಳಲು ಜನರವಶನಾ ಗ್ರಾಮ ಬಿಡಿಸಿದರು ೩೭

ಪರಮ ಸೋಮೇಶ್ವರನ ಪೂಜಿಸಿ
ಪಿರಿಯರೋಗವ ಬೇಗದಿಂ ಪರಿ
ಹರಿಸಿಕೊಂಬುದ ಕಾಗಿಯಲ್ಲಿಗೆ ಪೋಗಿಕೆಲ ಕಾಲ
ವರಭಕುತಿಯಿಂ ಪೂಜಿಸುತ್ತಿರೆ
ಕರಚರಣ ಕತ್ತರಿಸಿದರು ತಾ
ಹೊರಳುತಲ್ಲಿಗೆ ಪೋಗಿ ನಿತ್ಯದಿ ಅರ್ಚಿಸಿದಳವಳು ೩೮

ಆಗ ಗುಡ್ಡವೆಯ ಸುಭಕ್ತಿಗೆ
ನಾಗ ಭೂಷಣನಿರದೆ ಪ್ರತ್ಯ
ಕ್ಷಾಗಿ ವ್ರಣಮಯದಂಗವನು ಪರಿಶುದ್ಧ ಮಾಡುತ್ತ
ಸೋಗೆಗಂಗಳೆ ನಿನಗಿಹದಿ ಬೇ
ಕಾಗಿರುವ ವರ ಕೊಡುವೆ ಬೇಡೆನ
ಲಾಗವಳು ಭಕ್ತಿಯನೆ ಬೇಡ್ದು ಪವಿತ್ರಳೆನಿಸಿದಳು ೩೯

ಭಕ್ತಿ ಜ್ಞಾನ ವಿಹೀನ ಪುಣ್ಯ ವಿ
ರಕ್ತಗಾದರು ಪಾಪವೈಸ
ದ್ಭಕ್ತಿ ಜ್ಞಾನನ್ವಿತ ಕುಕರ್ಮವು ಪುಣ್ಯಮೆನಿಸುವದು
ಭಕ್ತಿ ಜ್ಞಾನಗಳಿಲ್ಲವನೆ ಸ
ನ್ಮುಕ್ತಿಯಂಗನೆಯನ್ನೊರಿಸುವಾ
ಭಕ್ತಿ ಜ್ಞಾನಗಳಿಲ್ಲದಧಮನು ನರಕ ಸೇರುವನು ೪೦

ಚರನೆ ಕೇಳ್ಶಿವ ಭಕ್ತಿಯಿಂದಾ
ಚರಿಸಿದಘಕೀಡಾಗದಭವನ
ಪುರಕೆ ಪೋದರು ಅಖಿಳ ಭಕ್ತಾದಿಗಳೆನಲ್ ನಿಮ್ಮ
ಪುರದ ಗೌಡನು ಭಕ್ತಿಯಿಂ ಬಂ
ದಿರುವ ರೋಗವ ಕಳೆದುಕೊಂಡನು
ಅರಿಯಲದರೊಳು ಎನ್ನ ಮಹಿಮವದೇನು ಬಿಡುಯೆಂದ ೪೧

ದೇವ ಚಿತ್ತೈಸಿ ನಿಮ್ಮ ನುಡಿಸಂ
ಭಾವಿಸುತ್ತೈತರುವದೈಮಿ
ಕ್ಕಾವ ಸಂಶಯಮಿಲ್ಲೆನುತ ಪರಿಪರಿ ವಿನಂತಿಸುತೆ
ಭಾವಶುದ್ಧದಿ ಸ್ವಾಮಿಯನು ಮಮ
ತಾವರಿಸಿ ಸದ್ಭಕ್ತಿಯಿಂತವೆ
ಸೇವಿಸುತ ಡೋರನಪುರಕೆ ತ್ವರದಿಂದೆ ಕರತಂದ ೪೨

ದಿಟ್ಟಗೌಡನು ಗುರುವಿಗೆ ಸ್ಥಲ
ಕೊಟ್ಟು ಗ್ರಾಮದಿಲಿಂಗ ಮುದ್ರೆಯ
ನಿಟ್ಟು ಶಿಲೆಗಳ ಸ್ಥಾಪಿಸುತ ವಿಸ್ತೀರ್ಣಮಠವನ್ನು
ಕಟ್ಟಿಸುತ ಗುರು ಪೇಳ್ದತೆರ ಧನ
ಕೊಟ್ಟು ಸೇವಿಸುತಿರಲು ನಿತ್ಯದಿ
ಪಟ್ಟದಾರ್ಯರು ಕ್ರಿಯಗಳನು ನಡಿಸುತ್ತ ಸಾಗಿದರು ೪೩

ಇಂದುಶೇಖರ ಗುರುವರನು ತಾ
ನೊಂದುದಿನ ಶುಭಯೋಗದೊಳು ನಲು
ಮಿಂದ ಗೌಡಗೆ ಭಸಿತ ರುದ್ರಾಕ್ಷಿಗಳ ವಿದ್ಯುಕ್ತ

ಚಂದದಿಂದತ್ತಂಗದೊಳುಧರಿ
ಸೆಂದೊರೆಯಲವನೊಪ್ಪ ನಿತ್ಯದಿ
ಒಂದೆ ಮನದಿಂ ಧರಿಸುತಿರ್ದನು ಗುರುವರನ ನೆನೆದು ೪೪

ಗ್ರಾಮಪತಿ ಶ್ರೀ ಗುರುವಿನ ಪಾದ
ತಾಮರಸಗಳಿಗೆರಗಿ ಶಿವನ
ಕ್ಷೀಮಣಿಯ ಭಸಿತವನು ಧರಿಸಿದಡೇನು ಫಲವೆಂದು
ಪ್ರೇಮದಿಂ ಕೇಳ್ದಾಸುಮತಿವ್ರತ
ನೇಮಕನಿಗೆರಡರ ಮಹಿಮವನು
ಸೋಮಶೇಖರ ಗುರುವರೇಣ್ಯನು ಪೇಳಲನುವಾದ ೪೫

ಮುದದಿ ಕೇಳೆಲೊಮಗನೆ ವರ ಭಸಿ
ತದ ಮಹಿಮವನು ಪೇಳುವೆನು ತಿಳಿ
ದಿದನು ಕೇಳಿದವರ್ಗೆ ಸಕಲೇಷ್ಟಾರ್ಥಸಿದ್ಧಿಪವು
ಪದಪಿನಿಂದೀ ಭಸಿತವನು ಫಾ
ಲದಿ ತ್ರಿಪುಂಡವ ಧರಿಸಿದಾತನು
ಮದನವೈರಿಯ ಪ್ರೀತಿ ಪಾತ್ರನೆನಿಸುವನಿಹಪರದಿ ೪೬

ಓತಿದನು ಧರಿಸಲ್ಕೆ ಭುವನದಿ
ಭೂತ ಪ್ರೇತ ಪಿಶಾಚರಾಕ್ಷಸ
ವ್ರಾತ ಮುಟ್ಟವು ಕಷ್ಟ ಮುಂತಾದಖಿಳ ರೋಗಗಳು
ಪಾತ ಮಾಗುವ ವಿಹದಿ ಧನಕನ
ಕಾತಿಶಯವಹುದಿದನು ಜರಿಯುವ
ಪಾತಕಿಗಳಿಗೆ ಯಮನನಿರಯವು ಪ್ರಾಪ್ತಯಾಗುವದು ೪೭

ಭೂರಿಪಾತಕದಿಂದೆವರ್ತಿಪ
ಕ್ರೂರದಾನವರಿಂದೆ ಸುರಪರಿ
ವಾರ ಮಡಿದಿರೆ ಸುರಪ ಶಿವನಂ ಸ್ಮರಿಸಲಾಕ್ಷಣದಿ
ವೀರಭದ್ರನು ಬಂದು ಬೇಗದಿ
ಸಾರಭಸಿತವ ಧರಿಸಿ ಬಿಡದು
ದ್ಧಾರ ಮಾಡಿದನಿದರ ಮಹಿಮೆಮವ ಪೊಗಳಲಾರಳವು ೪೮

ಭೂತಿಯೆ ಜ್ಞಾನಾಂಗವೆಂದು ಪು
ನೀತು ಗಾರ್ಗ್ಯವ ಶಿಷ್ಟ ಗೌತಮ
ಸೂತಶೌನಕವಾಮದೇವಾದ್ಯಗಳ ಮುನಿವರರು
ಪ್ರೀತಿಯಿಂದುದ್ಧೂಳನವಗೈ
ದಾತು ಮನರಿದು ಜನನ ಮರಣಾ
ತೀತರಾದರು ತಿಳಿಮಗನೆ ವೇದೋಕ್ತ ಮಾಗಿಹುದು ೪೯

ಇತ್ತ ನೀನಾಲಿಸು ಮಗನೆ ದೃಢ
ಚಿತ್ತದಿಂ ರುದ್ರಾಕ್ಷಿ ಮಹಿಮವ
ಬಿತ್ತರಿಸಿ ಪೇಳುವೆನು ಕೇಳ್ದೊಡೆ ಪಾಪಪರಿಹರವು
ಮತ್ತಮೀ ಭೂಮಿಯೊಳಿವುಗಳಂ
ಪೊತ್ತು ಸಂಚರಿಸುತ್ತಿರುವ ಮುದೆ
ಕತ್ತೆಗಳಿಗಹುದೊಳ್ಳೆ ಜನ್ಮವು ಸತ್ಯವೆಂದರಿಯೊ ೫೦

ಆವನೀ ರುದ್ರಾಕ್ಷಿ ಮಾಲಿಕೆ
ಭಾವಶುದ್ಧದಿ ಕರದೊಳಾಂತು ಉ
ಮಾವರನ ಜಪಿಸುವನೊ ಜೀವನ್ಮುಕ್ತನಾಗುವನು
ಆವನರನಿದನುಳಿದು ಭುವನದಿ
ದೇವದೇವನ ಪಠಿಸಲವಗಿ
ನ್ನಾವ ಫಲ ಮಿಲ್ಲೆಂದು ಸಾರುವದಾಗಮಾವಳಿಯು ೫೧

ಇಂದು ನಿನಗೆ ಶಿವಾಕ್ಷಿ ಮಹಿಮನ
ಒಂದು ಕಥೆಯನು ಪೇಳುವೆನು ನಾ
ಚಂದದಿಂದಾಲಿಸು ಮಗನೆ ಅಪ್ರತಿಮಮಾಗಿಹುದು
ನಂದಿಗ್ರಾಮದಿ ಗಣಿಕೆಯರೊಳತಿ
ಸುಂದರಾಂಗದಿ ಶೋಭಿಸುವ ಮಾ
ನಂದಿಯೆಂಬುವಳಿರ್ದಳಭವನ ನಾಮಸ್ಮರಣೆಯೊಳು ೫೨

ನಿಟಿಲನೇತ್ರನ ಭಕ್ತಿಯೊಳು ಕು
ಕ್ಕುಟ ಕಪಿಗಳ ಕೊರಳ್ಗೆ ಕರ್ಣಕೆ
ಕಟಿಗೆ ರುದ್ರಾಕ್ಷಿಯ ಧರಿಸಿ ನಿಜ ಮಂದಿರದಿ ಸತತಂ

ಚಟುಲತನದಿಂ ನರ್ತನವಗಡ
ನಟಿಸುತೆರಡೂ ಪ್ರಾಣಿಗಳ ನಿ
ಷ್ಕುಟಿಲದಿಂ ಪಾಲಿಸುತಿರಲ್ಕವು ಮರಣ ಪೊಂದಿದವು ೫೩

ಕಪಿಯು ಕಾಶ್ಮೀರೆಂಬ ದೇಶದ
ನೃಪ ಕುಮಾರಕನಾಗಿ ಜನಿಸಿ ನಿ
ರುಪಮಶಕ್ತಿಯೊಳೆಸದ ಕುಕ್ಕುಟ ಮಂತ್ರಿಸುತನಾಗಿ
ವಿಪುಲ ಕೀರ್ತಿಯನಾಂತು ಭಸಿತದ
ಅಪರಮಿತ ಮಹಿಮವನು ಪೇಳಿದೆ
ಕಪಟವಿಲ್ಲದೆ ಧರಿಸು ನೀರುದ್ರಾಕ್ಷಿ ಭಸಿತಗಳಂ ೫೪

ಇಂತು ಕವಿಭೀಮಾಖ್ಯ ಪೇಳ್ದಮ
ಹಾಂತ ಮಾಹೇಶನ ಚರಿತ ಸಲೆ
ಸಂತಸದಿ ಬರೆದೋದಿ ಕೇಳಿದವರ್ಗೆ ಪೇಳ್ದರ್ಗೆ
ಸಂತತಂ ಘನಭೋಗಭಾಗ್ಯಮ
ನಂತಮಿತ್ತಿಹ ಪರದಿಕೃತಿಕ
ರ್ತಂತವಕದಿಂ ಪಾಲಿಸಲಿ ಅತ್ಯಂತ ಹರುಷದಲಿ ೫೫

ಅಂತು ಸಂಧಿ ಎಂಟಕ್ಕುಂ ಪದ್ಯಗಳು ೫೫+ಗತ ಪದ್ಯಗಳು
೩೨೬ =ಒಟ್ಟು ಪದ್ಯಗಳು ೩೮೧ಕ್ಕುಂ

ಮಂಗಲಂ

೯ನೇ ಸಂಧಿ

ಸೂಚನೆ: ಗುರು ಮಹಂತನಖಿಳ ಮಹಿಮೆಗಳ
ವಿರಚಿಸುತ ಚರ ತೃಪ್ತಿಗೊಳಿಸುತ
ತುರುಕರನು ಜೈಸುತ್ತ ಲಿಂಗದೊಳೈಕ್ಯ ಮೊಂದಿದನು

ಪುರಹರಣ ಶುಭ ಚರಣಮನು ಮುನಿ
ಸುರನಮಿತ ಪದ ಅಮಿತ ಮಹಿಮಾ
ಕರಭರಿತ ಸಚ್ಚರಿತ ಗುರುಪಿತದಕ್ಷ ಕ್ರತು ಶಿಕ್ಷ
ಮುರಮಥನನುತ ಕಥನ ಗಿರಿಜಾ
ವರ ಪರಮ ಶಶಿಧರ ಮಹೇಶ್ವರ
ಕರುಣ ಸಾಗರ ಶರಣರಕ್ಷಕ ಪಾಲಿಸೆನ್ನ ಸದಾ ೧

ಕ್ಷೋಣಿಯೊಳು ಮೈಸೂರು ಭೂಪನ
ರಾಣಿಯರು ಗುರುಚಂದ್ರ ಮೌಳಿಯ
ತಾಣಮೆನಿಸುವ ಕದಳಿಪುರ ಕಟ್ಟಿದ ಭಟೋತ್ತಮರು
ಮಾಣದಲ್ಲಿಗೆ ಬಂದು ಗುರುವಿನ
ಕಾಣುವಕೆ ಸುತ್ತಲಿರುವ ಕೆಲವು
ಜಾಣರನ್ನು ವಿಚಾರಿಸುತ ಸಂಚರಿಸಿ ಬಳಲಿದರು ೨

ಧರಣಿಯೊಳು ದೋರನ ಪುರದಿ ಗುರು
ವರನಿರುವದಂ ಜನರ ಮುಖದಿಂ
ದರಿದು ಬೇಗನೆ ಬಂದರಲ್ಲಿಗೆ ರಾಣಿಯರ ಭಟರು
ಅರಸಿಯರ ಬಿನ್ನಪದ ಲಿಖಿತವ
ನಿರದೆ ಸ್ವಾಮಿಗೆ ವಪ್ಪಿಸುತಮು
ತ್ಸರವಳಿದು ಚರಣಾಂಬುರುಹಗಳಿಗೆರಗಿದರು ಮುದದಿ ೩

ಕೊಟ್ಟಲೇಖನವನ್ನು ಗುರುವರ
ನಿಟ್ಟಿಸುತ ಮನದೊಳಗೆ ವಿಸ್ಮಯ
ಬಿಟ್ಟು ಸುತ ಮಾಂತೇಶನಂ ಸಮ್ಮುಖದಿ ಕುಳ್ಳಿರಿಸಿ
ಪಟ್ಟದವನಿಪತೀರ್ದುದಂ ಚರ
ರೊಟ್ಟವಿಸಿ ಕರೆ ಬಂದುದಂ ಬಿಡ
ದಟ್ಟಹಾಸದಿ ಪೇಳಿ ಮಂದಸ್ಮಿತದಿ ಕೂಡಿದನು ೪

ಮೊಡವಿಯೊಳು ಗುರುದ್ರೋಹ ಭೂಪಗೆ
ಸಿಡಿಲು ಬಡಿದಂತಾಯ್ತೆನುತ ಘನ
ಸಡಗರದಿ ಕೂಡಿರ್ದಭಕ್ತವ್ರಜಕೆ ತಿಳಿಸಿದನು
ಗಡನೆ ಬಂದಿಹ ಭಟರು ನಯದಿಂ
ನುಡಿದರಾಗಳೆ ಕರಕಮಲ ಮುಗಿ
ದಡಿಗಡಿಗೆ ಗುರುಮಹಿಮ ಪೊಗಳುತ ಪೇಳತೊಡಗಿದರು ೫।

ಅರಸಿಯರ ನುಡಿಗೇಳಿ ಭರದಿಂ
ದರಸು ಮಾರ್ಬಲದೊಡನೆ ರಂಭಾ
ಪುರಿಗೆ ತಾನಾಗಮಿಸಿ ನೀವಲ್ಲಿರದ ಕಾರಣದಿ
ಪರಿಪರಿಯೊಳು ಕಿ ಜರಿದು ಧನವಪ
ಹರಿಸಿಬಿರ್ದಾವಳಿಗಳನು ಬಂ
ಧುರದಿ ಶೃಂಗೇರಿಯ ಮಠಕ್ಕಿತ್ತನು ತತಕ್ಷಣದಿ ೬

ನಿಮ್ಮನುರೆ ನೋಯಿಸಿದ ಪಾತಕ
ದಿಮ್ಮಹೀಪತಿ ಮರಣ ಹೊಂದ
ಲ್ಕೆಮ್ಮನಿಲ್ಲಿಗೆ ಕಳಿಸಿದರು ಕರತರುವದಕ್ಕಾಗಿ
ಒಮ್ಮನದಿ ಬಂದಿರ್ಪವ್ಯೆ ನುಡಿ
ನೆಮ್ಮಿ ನೀವ್ಯೆತರಲು ಶಳೆದವ
ಕಿಮ್ಮಡಿಯ ಧನಕನಕ ಬಹುಮಾನಂಗಳೀಯುವರು ೭

ಅಂದ ಮಾತಿಗೆ ಕಿವಿಗೊಡುತ್ತಾ
ಇಂದು ಶೇಖರಸ್ವಾಮಿ ಮಹದಾ
ನಂದದಿಂದ ಮಹಂತನಿಗೆ ಚರಪಟ್ಟದಧಿಕಾರ

ಚಂದದಿಂ ಕೊಡಲಾ ಮಹಂತನು
ತಂದೆ ನೀ ಲಾಲಿಸು ವಿಲಾಸದೊ
ಳಿಂದೆನಗೆ ಷಟ್ಸ್ಥಲದ ವಿವರವ ತಿಳಿಸಿ ಪೋಗೆಂದ ೮

ಈಗ ನೀ ಕೇಳಿದ ಷಟಸ್ಥಲ
ಶ್ರೀಗುರುವಿನಿಂದರಿದರಿದು ಶಿವ
ಯೋಗಿಗಳು ಲಿಂಗಾಂಗ ಸಂಗಿಗಳಾದರೆಂದೆನುತ
ಆ ಗಣೋತ್ತಮನಾದ ಮಾಂತನಿ
ಗಾಗಿ ಷಟಸ್ಥಲ ಮಾರ್ಗವನು ಗುರು
ಜಾಗು ಮಾಡದೆ ತಿಳಿಸಲುದ್ಯೋಗಿಸಿದನತಿ ಮುದದಿ ೯

ಆರು ಸ್ಥಲಗಳನಾರು ಫಲಗಳ
ನಾರುಹಸ್ತಗಳಾರು ಅಂಗಗ
ಳಾರುಲಿಂಗಗಳಾರು ಭಕ್ತಿಗಳ ಆರು ಮುಖಗಳ
ನಾರು ಕಲೆಗಳ ನಾರು ಸಾದಾ
ಖ್ಯಾರು ಪರಸಾದಾರು ಲಿಂಗಕೆ
ಮೂರು ಮೂರುಷ್ಟಾದಶಗಳಾದ................ ೧೦

ಸಾರಲಿಂಗಗಳನ್ನು ಮತ್ತಾ
ಧೀರ ಭಕ್ತನೆ ಭೂವನದೊಳಗಾ
ಚಾರ ಮೊದಲಾದಾರುಲಿಂಗದಿ ಭೇದವರ್ತನದಿ
ಆರು ಆರಾಗುತ್ತ ಮೂವ
ತ್ತಾರೆನಿಸಿದ ಸುರೀತಿಯನು ವಿ
ಸ್ತಾರವಹ ಏಕೋತ್ತರದ ಶತಸ್ಥಲಮಿವುಗಳಲ್ಲಿ ೧೧

ಅಂಗಸ್ಥಲನಾಲ್ವತ್ತು ನಾಲ್ಕು ಸು
ಲಿಂಗ ಸ್ಥಲವ್ವೆವತ್ತು ಯೇಳನು
ಮಂಗಲಾತ್ಮಕ ಚಂದ್ರಶೇಖರ ಕರುಣದಿಂ ತಾನು
ಪಿಂಗದಾ ಮಾಂತೇಶ್ವರಗೆ ಬಹು
ಸಾಂಗ ಮಾಗಿ ಷಟಸ್ಥಲದ ಮಾ
ರ್ಗಂಗಳಂ ತಿಳಿಸಲ್ಕೆ ಮಾಂತನು ಕರಯುಗಳ ಮುಗಿದು ೧೨

ಗುರುವರನೆ ಲಿಂಗಾಂಗ ಸಂಗದಿ
ಪರಿಯನೆಲ್ಲವ ತಿಳಿಸಿ ನಲ್ಸ
ತ್ಕರುಣದಿಂದಾಚಾರ್ಯನಾತಗೆ ತಿಳಿಸಲೆತ್ನಿಸಿದ
ತರುಳ ಕೇಳ್ ನೀ ಪ್ರಶ್ನಿಸಿದಕು
ತ್ತರವ ನೀವೆನು ತತ್ವಮಸಿಯನು
ಸರಿಪಡಿಸಿ ತೋರುವೆನು ವಿಸ್ಮೃಗೊಳದೆ ನೀ ಕೇಳು ೧೩

ಎಸೆವಲಿಂಗಸ್ಥಲದಿ ಶಿವತಾ
ನೊಸಿದುಪಾಸ್ಯಮೆನಿಪುದು ಶಕ್ತಿಯು
ಮಿಸಗುವಂಗಸ್ಥಲದಿ ಜೀವವೆನಿಸುತು ಪಾಸಕದಿ
ಎಸೆವ ಭಕ್ತಿಯದಾಯ್ತು ನೋಡಲು
ಪಸರಿಸುವ ಲಿಂಗಾಂಗಸ್ಥಲ ಸಂ
ಧಿಸಲುಭಯ ಸಂಗವೆ ಶಿವೈಕ್ಯವುರೆವನೆ ಮೂರಾದ ೧೪

ವೇದಮಂತ್ರಕ್ರಿಯೆಗಳಿಂ ವರ
ನಾದ ಬಿಂದು ಕಲಾ ತ್ರಿವಿಧ ದುರು
ಭೇದದಿಂ ದಿಕ್ಷಾದಿಲಿಂಗ ಪ್ರಾಣಭಾವಗಳ
ದಿತ್ಯೈಸದ್ರೂಪಭಾವಂ
ಆದಿತ್ಯೈಚಿದ್ರೂಪ ಪ್ರಾಣಂ
ಆದಿತ್ಯೈಯಾನಂದಮಿಷ್ಟಸುಲಿಂಗ ತ್ರಿವಿಧಗಳು ೧೫

ತಿಳಿಯ ತತ್ವದ ವಿಷ್ಟ ಬಿಡದು
ಜ್ವಲಪಸಂ ಪದಪ್ರಾಣವ ಸಪದ
ತೊಳಪ ಭಾವಸುಲಿಂಗಗಳು ಮೂರಾಗಿ ತೋರಿದವು
ಇಳೆಯೊಳಗೆ ಕಾರಣವೆ ಭಾವಂ
ಕಳೆವಿಡಿದ ಸೂಕ್ಷ್ಮಂ ಪರಣಕಂ
ಗೊಳಿಪ ಸೂಲವೆ ಇಷ್ಟಲಿಂಗತ್ರಯಗಳೆನಿಸಿದವು ೧೬

ಅಂಗತ್ರಯಗಳ ವಿವರ ಕೇಳ್ ಯೋ
ಗಾಂಗವೇ ಕಾರಣ ತನುಂ ಭೋ
ಗಾಂಗವೇ ಸೂಕ್ಷ್ಮದ ತನುಂ ತ್ಯಾಗಾಂಗಸ್ಥೂಲ ತನುಂ

ಪಿಂಗದಾ ಯೋಗಾಂಗ ಪ್ರಾಜ್ಞಂ
ಮಂಗಲದ ಭೋಗಾಂಗ ತೈಜಸ
ಕಂಗೆಸವ ತ್ಯಾಗಾಂಗವೇ ವಿಶ್ವಂ ತಿಳಿಯೊ ನೀನು ೧೭

ಯೋಗ ತನು ನಿದ್ರಿಯೊಳಗಿರ್ಪುದು
ಭೋಗತನು ಸ್ವಪ್ನದೊಳಗಿರ್ಪುದು
ತ್ಯಾಗತನು ಜಾಗ್ರದೊಳಿಹುದುವ ಸ್ಥಿತ್ರಯಗಳಲ್ಲಿ
ಯೋಗತನು ಪರಮಾತ್ಮ ಮಿರಗುವ
ಭೋಗತನುವದು ಅಂತರಾತ್ಮಂ
ತ್ಯಾಗತನು ಜೀವಾತ್ಮನೆನಿಸಿದನಂಗ ತ್ರಿವಿಧಗಳು ೧೮

ಲಿಂಗವೆನಿಪುದೆ ತತ್ವದಂ ಮ
ತ್ತಂಗಮೆನಿ ಪುದೆತತ್ವದಂ ಲಿಂ
ಗಾಂಗ ಸಂಯೋಗವದೆಯಸಿ ಪದ ಮತ್ತೊರೆವೆ ಕೇಳು
ಲಿಂಗಹೆನಿಸಿರ್ಪುದೆ ಸುನಾದಂ
ಅಂಗಮೆನಿಪುದೆ ಬಿಂದುವೈಲಿಂ
ಗಾಂಗ ಸಂಯೋಗವದೆ ಚಿತ್ಕಳೆಯೆನಿಸಿ ರಂಜಿಪವು ೧೯

ಲಿಂಗವೇ ಪರಬೊಮ್ಮವೈಯಾ
ಅಂಗವೆ ಚಿದಾತ್ಮಂ ಮಿಸುಪ ಲಿಂ
ಗಾಂಗ ಸಂಗವೆ ತಿಳಿಯಲಿದು ಸಂಯೋಗವಾಯ್ತು ಕಣ
ಲಿಂಗವೇ ಸನ್ಮಾತ್ರ ತೋರುವ
ಅಂಗವೇ ಚಿನ್ಮಾತ್ರ ಬಳಿಕಂ
ಸಂಗವೇಯಾನಂದ ಮನದೊಳಗರಿದು ಕೊಳ್ಳೆಂದ ೨೦

ಮಿನಗುತಿಹ ಲಿಂಗವೆ ಸುಮಂತ್ರಂ
ತನುವೆ ಕ್ರಿಯಸಂಗವದು ಸಂಯೋ
ಗೆನಿಪುದದರಿಂಲಿಂಗವಂಗ ಸುಸಂಗಮೆಂದಾಯ್ತು
ತನಯ ಕೇಳ್ಸರ್ವಂಗದೊಳಗಾ
ಚಿನುಮಯನು ತಾ ಲಿಂಗ ರೂಪದಿ
ತನುವಿನೊಳು ಸೇರಿರ್ಪನಾ ಸ್ಥಲಗಳ ನೊರೆವೆ ಕೇಳು ೨೧

ಹೃದಯದೊಳು ಮಾಲಿಂಗವದು ಶ್ರೋ
ತ್ರದಿ ಪ್ರಸಾದದಲಿಂಗ ತೊಕ್ಕಿನೊ
ಳುದಿತ ಜಂಗಮಲಿಂಗ ನಯನಂಗಳಲಿ ಶಿವಲಿಂಗ
ಮೃದುವೆನಿಸಿ ರಂಜಿಸುವ ಜಿಹ್ವಾಂ
ಗದೊಳು ಗುರುಲಿಂಗಂ ಬಳಿಕ್ಕುಂ
ವಿದಿತವಹ ನಾಶಿಕದೊಳಾಚಾರದ ಸುಲಿಂಗವದುಂ ೨೨

ಧರೆಯೊಳಿದುವೆ ಪ್ರವೃತ್ತಿ ಮಾರ್ಗಂ
ಪರಿಕಿಸಿ ನಿವೃತ್ತಿಯ ಸುಮಾರ್ಗದ
ಪರಿಷಟಚಕ್ರಗಳಾ ಭೇದವನಾದರದಿ ಪೇಳ್ವೆ
ನಿರುತದಿಂ ಗುದಗುಂಹ್ಯ ನಾಭಿಯು
ವರಹೃದಯ ಮೇಲೆಸವ ತಾಲುಂ
ಉರುತರದ ಭ್ರೂಮಧ್ಯಮಿವು ಷಟ್ಚಕ್ರಸ್ಥಾನಗಳು ೨೩

ಮಿರುಗುವಾಧಾರದಿ ನಕಾರಂ
ಪರಮ ಸ್ವಾಧಿಷ್ಟದಿ ಮಕಾರಂ
ಮೆರವ ಮಣಿಪೂರ್ವಕದೊಳು ಶಿಕಾರಂ ಅನಾಹತದಿ
ವರವಕಾರವಿಶುದ್ಧಿ ಮಧ್ಯದೊ
ಳುಕಿಯ ಕಾರಾಗ್ನೇಯದಲಿ ಬಂ
ಧುರ ಪ್ರಣವ ಷಡ್ಲಿಂಗಮೆನಿಸೀ ಚಕ್ರದೊಳಗಿಹವು ೨೪

ಚರಮದಲಿ ಪ್ರಣವದ ನಕಾರರು
ಧಿರದಿ ಮತ್ತ ಮಕಾರ ಮಾಂಸದಿ
ವರಶಿಕಾರವಕಾರ ಮೇಧಸ್ಸಿನಲಿ ಅಸ್ತಿಯಲಿ
ಉರುಯಕಾರವು ಮಜ್ಜೆಯಲಿ ಷಡು
ವರಣಗಳು ಶುಕ್ರದೊಳಿರುವವೆಲೆ
ಮರಿಯದಿರು ನೀನೆಂದು ವಾಚಿಸಿ ಮಗುಳಿ ಇಂತೆಂದ ೨೫

ಏಕಕಣಿಕೆಯ ನಾಗಬೆತ್ತವ
ನೇಕ ಮುಖದ ಶಿವಾಕ್ಷಿಯನು ಪರಿ
ಪಾಕ ಮಾದೆಡ ಬಲ ಮುರಿಯ ಶಂಖು ದ್ವಯಗಳನ್ನು

ಲೋಕದೊಳು ಶಿವಯೋಗಿ ವೃಂದಕೆ
ಬೇಕೆನಿಪ ಪರುಷದ ಸುಬಟ್ಟಲ
ಜೋಕೆಯಿಂ ಪಿಡಿಯೆಂದು ಪ್ರೇಮದೊಳೊಪ್ಪಿಸಿದನಾಗ ೨೬

ಬಸವಲಿಂಗನ ಕರೆದು ಪದುಳದೊ
ಳುಸುರಿದನು ನಿನ್ನಾಶ್ರಯ ದೊಳಿಹ
ಹಸುಗಳಂ ಹಿರಿಯೊಡೆಯನಿಂ ಪೋಷಣೆಯಗೈಸುತ್ತ
ವಸುಧಿಯೊಳು ನಿನ್ನಿಷ್ಟಲಿಂಗವ
ನೊಸೆದು ಪೂಜಿಸುಮಾಂತ ಮುನಿವರ
ನಸಮ ಮಹಿಮಾಂಕಿತ ನೆನಿಪನೆನ್ನಂತೆ ಭಾವಿಸು ನೀಂ ೨೭

ಕ್ರೂರಕುಹಕರನಾಶ್ರಯಿಸದಿರು
ಧೀರಗುರು ಚರಲಿಂಗಭಕ್ತಿಯು
ತಾರತಮ್ಯವ ತಿಳಿದು ವರ್ತಿಸುಭಕ್ತ ಸಂತತಿಯ
ಭೂರಿದಯದಿಂ ಪೊರಿಯನುತ ತಾ
ಸಾರಿಸಂಭ್ರಮದಿಂದೆ ಮತ್ತಾ
ದೋರಗೌಡನ ಕರಿಸುತವನನು ಕುಳ್ಳಿರಿಸಿಕೊಂಡು ೨೮

ಈಗ ಮೈಸೂರಿಂಗೆ ಭರದಿಂ
ಪೋಗುವೆನು ಶಿವಭಕ್ತಿಯುತ ನೀ
ನಾಗಿಬಾಳು ಮಹಂತನಿಗೆ ಅಧಿಕಾರ ಕೊಟ್ಟಿರುವೆ
ಶ್ರೀ ಗುರುವೆ ಇವನೆಂದರಿದು ಅನು
ರಾಗದಿಂ ನಡೆದಡೆ ನಿನಗೆ ಭವ
ರೋಗ ಕಡಿದಪವರ್ಗ ಕೊಡುವನು ಮಾಂತ ಮುನಿವರನು ೨೯

ನೆರೆದಭಕ್ತ ವ್ರಜಕೆ ಪೇಳ್ದ ಕು
ವರ ಮಹಂತ ಮುನೀಂದ್ರ ಮಹಿಮಾ
ಕರನೆನಿಸಿ ರಂಜಿಪನಿಹದಿ ಸಾಮಾನ್ಯನಲ್ಲನಿವಂ
ಧರೆಯೊಳು ಧ್ಯಾನಿಸುವಸದ್ಭ
ಕ್ತರಿಗೆ ಘನಸುರಧೇನು ಚಿಂತಿಸು
ವರಿಗೆ ಚಿಂತಾರತ್ನನೆನಿಸುವ ತಿಳಿದುವರ್ತಿಸರಿ ೩೦

ಎಂದು ಸರ್ವರಿಗೊರೆದು ವೈಭವ
ದಿಂದೆ ಮೈಸೂರಿಗೆ ತೆರಳ್ದು ಪು
ರಂದರನ ನಿಜ ಭವನದಂತೆಸದಿರ್ವ ಭೂವರನ
ಮಂದಿರವನೊಳ ಪೊಕ್ಕು ಮೆಲ್ಲನೆ
ಮುಂದಡಿಯ ನಿಟ್ಟಲ್ಲಿರುವ ಬುಧ
ವೃಂದ ನೋಡುತ್ತೈತರುವದಂ ನೋಡ್ದ ಭೂವರನು ೩೧

ಎದ್ದು ಬಂದಾ ಸ್ವಾಮಿ ಪಾದಕೆ
ಬಿದ್ದು ಕರಪಿಡಿದೊಯ್ದು ಮಣಿಮಯ
ಗದ್ದುಗೆಯ ಮೇಲ್ಕುಳ್ಳಿರಿಸಿ ಕೃತಕೃತ್ಯನಾಗುತಲಿ
ಸದ್ದು ಮಾಡದೆ ರಾಣಿಯವರಿರು
ತಿದ್ದಯೇಕಾಂತದ ಗೃಹಕೆ ತಾಂ
ಬದ್ಧದಿಂ ಕರದೊಯ್ಯಲವರಾನಂದಮಯರಾಗಿ ೩೨

ಭೇಕ ಬಲ್ಲುದೆ ಪಾಲ್ಗಡಲವನು
ಘೂಕ ಬಲ್ಲುದೆ ರವಿಕಿರಣವನು
ಕಾಕರಿಬಲ್ಲುದೆವರಸಾಲದ ಪಕ್ವ ಫಲವನ್ನು
ಮೇಕೆ ಬಲ್ಲುದೆ ಇಕ್ಷು ರಸವನು
ಮೂಕ ಬಲ್ಲನೆ ಜಾಣ್ನುಡಿಯನವಿ
ವೇಕಿಬಲ್ಲನೆ ಸತ್ಪುರುಷರನುಯಂಬ ಪರಿಯಂತೆ ೩೩

ತವ ಮಹತ್ವವ ಮೂರ್ಖತನದಿಂ
ಭುವನದೊಳು ನಾವರಿಯದೆಮ್ಮಯ
ಧವನಿಗಿಲ್ಲದ ಸಂಗತಿಯ ಪೇಳ್ದಾತನಿಂ ನಿಮಗೆ
ತವೆ ವಿರೋಧದಿ ಕಷ್ಟವಿತ್ತದ
ಕವನಿಪತಿ ಹೃದ್ರೋಗದಿಂ ಮರ
ಣವನು ಪೊಂದಿದ ಈಗಳೆಮ್ಮವಗುಣವೆಣಿಸದೆ ಪೊರಿ ೩೪

ಎನುತ ಬಾಯ್ಬಿಡಲಾಗುರೂತ್ತಮ
ನನುಮನವ ಕಳಿರೆಂದರಸಿಯರ
ನನುನಯದಿ ಪೊರೆಯುತ್ತಳ ಬಿರ್ದಾವಳಿಯ ಮರಳಿ

ಧನ ಕನಕವಾಹನಗಳಿಮ್ಮಡಿ
ಯನು ಪಡೆದು ರಂಭಾನಗರಿಗೈ
ದನುಪಮದ ಸಿಂಹಾಸನಕ್ಕಧಿಕಾರಿಯೆನಿಸಿದನು ೩೫

ದೋರನ ಪುರದಿ ಮಾಂತ ಮುನಿ ಗಂ
ಭೀರದಿಂ ಸತ್ಕ್ರಿಯವನಡಿಸುತ
ಪಾರ ಮಹಿಮದೊಳೊಂದು ಸೇರನ್ನವನಖಿಳರಿಂಗೆ
ತಾರತಮ್ಯದಿ ತೃಪ್ತಿಗೊಳಿಸುತ
ಸಾರ ಗೋವಿಂಡಗಳನೆಲ್ಲವ
ಧೀರ ದೈವತ ಹಿರಿಯೊಡಿಯನಿಂ ರಕ್ಷಿಸುತ್ತಿರ್ದ ೩೬

ಧರೆಯೊಳಗಿ ಪ್ರಾಚೀನ ಕಾಲದಿ
ಶರಣಜನರೊಂದೊಂದು ಕಾಯಕ
ವಿರಚಿಸುತ ಚರವೃಂದಕುಣಬಡಿಸಿದಱದೆಂಬುವದಂ
ಹಿರಿಯರಿಂದರಿದಿರ್ದೆ ವೀ ಭಾ
ಸುರ ಮಹಂತನು ಕಾಯಕವನುಳಿ
ದಿರದೆ ಗಣತೃಪ್ತಿಯನು ಗೊಳಿಪುದು ಸೋಜಿಗಮಿದಸ್ತಿ ೩೭

ಪುತ್ರರಿಲ್ಲದ ಮಾನವರು ಈ
ಧಾತ್ರಿಯಲಿ ಶೋಭಿಸುವ ಪುಣ್ಯಾ
ಕ್ಷೇತ್ರಯಾತ್ರೆಯಗೈದರಿಚ್ಛಿತ ಫಲವು ಪ್ರಾಪ್ತಿಸದೆ
ಗಾತ್ರದಂಡಿಸಿ ಮರುಗಲೇಸು ಪ
ವಿತ್ರರಡಿಗಾಗಮಿಸಿ ನುತಿಸಲು
ಪುತ್ರಸಂಪದವಿತ್ತು ಪಾಲಿಸುತಿರ್ದಪದುಳೆದೊಳು ೩೮

ದುರಿತ ಹೇರಳದಿಂದೆ ನಾನಾ
ತರದ ರೋಗಗಳುದಿಸಿ ಕಷ್ಟದಿ
ಮರಮರನೆ ಮರಗುತ ಕೆಲರು ಬಂದಡಿ ಸರೋಜಗಳಂ
ಪರಮಭಕ್ತಿಲಿ ಪೂಜಿಸಿಸ
ತ್ಕರುಣದೀಕ್ಷಿಸಿ ಪಾದ ತೀರ್ಥವ
ಭರದೊಳಿತ್ತೊದಗಿರ್ದ ರೋಗಗಳನ್ನು ಕಳಿತಿರ್ದ ೩೯

ಭೂತ ಪೀಡಿತರಾಗಿ ಮರಣದ
ಭೀತಿಯಿಂ ಬೆಂಡಾಗಿ ಕೆಲವರು
ಘಾತ ಪರದೊಳಾಗಮಿಸಿ ನಮಿಸಲ್ಕಾಕ್ಷಣದಿ ತಾನು
ಭೂತಿ ಮಂತ್ರಿಸಿಕೊಡಲದಂ ಸಂ
ಪ್ರೀತಿಯಿಂ ಸೇವಿಸಲು ಸೋಂಕಿದ
ಭೂತಗಳು ಬಿಟ್ಟೋಡುತಿರ್ದವು ರೋದನೆಯ ಮಾಡ್ದು ೪೦

ಹಸು ತೃಷಿಗಳಿಂ ಬಳಬಳಲಿ ಕಸಿ
ವಿಸಿಗೊಳುತ ಬಂದತಿಥಿಗಳ ನೋ
ಡ್ದೊಸಿದವರಿಗನ್ನೋದಕದಿ ಸಂತೃಪ್ತಿ ಸಲ್ಕವರು
ರಸಿಯೊಳೀ ಪರಿ ವಂಚಿಸದೆ ತೃ
ಪ್ತಿಸುವದಾತೃಗಳಿಲ್ಲೆನುತವಂ
ಪೊಗಳಿ ಕೈಮುಗಿದು ಚರಿಸುತ್ತಿರ್ದರರ್ತಿಯಲಿ ೪೧

ಮಹಿಮರೆಂಬುವ ಕೀರ್ತಿಯದು ಈ
ಮಹಿಯೊಳಗೆ ಪಸರಿಸಲು ಕೇಳಿದ
ಮಹಿಳೆಯರು ಬಂದರ್ಚಿಸುತ ಸತ್ಪುತ್ರರನು ಪಡೆದು
ವಹಿಲದಿಂ ತಚ್ಛಿಶುಗಳಿಗೆ ಯಾ
ಮಹಿಮನಾಹ್ವಯವಿಟ್ಟು ತಮ್ಮಯ
ಗೃಹದಿ ಜಂಗಮಕಿಷ್ಟ ಭೋಜನದಿಂದ ತೃಪ್ತಿಪರು ೪೨

ಧಾರುಣಿಯ ವಲಯದೊಳಿವರು ಸಲೆ
ತೋರಿರುವ ಘನತರ ಮಹಿಮೆಗಳ
ಪಾರಮೆಂಬುವ ಸಂಗತಿಯ ಜನ ಕೇಳಿ ಬೆರಗಾಗಿ
ಸಾರಸ ಭ್ರಮದಿಂದೆ ಬಂದು ಪ
ದಾರವಿಂದಕೆ ಬಾಗಿತಮ್ಮ ಮ
ನೋರಥವ ಪಡಕೊಂಡು ಪೋಗುತಿರ್ದರುತ್ಸುಕದಿ ೪೩

ದುರಿತ ತಿಮಿರ ಪ್ರಭಾಕರಂಶ
ಕರ ಮತಾಬ್ಧಿ ಸುಧಾಕರಂ ಸ
ಚ್ಚರಣವೃಂದ ದಯಾಕರಂ ಸದ್ವೃತ್ತಿ ಪೂರಿತನು

ಸ್ಮರಿಪರಘ ದರ್ಶನದೊಳಳಿದು
ದ್ಧರಿಸಿ ಹತಭಾಗ್ಯರಿಗೆ ಸಂಪದ
ಕರುಣಿಸುತ ಲೋಕದೊಳು ಮೆರದಿರ್ದನು ಸುಕೀರ್ತಿಯೊಳು ೪೪

ನಡೆದುದೇ ಸನ್ಮಾರ್ಗವೆನಿಸುತ
ನುಡಿದುದೇ ಶಿವಮಂತ್ರಮೆನಿಸುತ
ಪಿಡಿದುದೇ ಘನವ್ರತ ಮದೆನಿಸುತ್ತ ಖಿಳ ಭಕ್ತರನು
ಸಡಗರದಿ ಪಾಲಿಸುವದಕ್ಕಾ
ಮೃಡನೆ ಜಂಗಮ ರೂಪದಿಂ ತಾ
ಪೊಡವಿಗಿಳಿದಿಹನೆಂಬ ಕೀರ್ತಿಯ ಪಡೆದು ರಂಜಿಸಿದ ೪೫

ನಾಡನಾಡಿಯೊಳಿಹ ಜನಾಂಗವು
ಕೂಡಿಕೊಂಡೈ ತಂದು ಮಹಿಮನ
ನೋಡಿ ನಯಭಯ ಭಕ್ತಿಯಿಂ ನಮಿಸುತ್ತಭೀಷ್ಟಗಳಂ
ಬೇಡಿಪಡೆದು ವಿನೋದದಿಂ ನುತಿ
ಮಾಡಿ ನಡೆದ ಮಹತ್ವಗಳ ಕೊಂ
ಡಾಡಿಹರು ಘೋನ್ನತದಿ ಪೋಗುತ್ತಿರ್ದರ್ರೈ ಸತತ ೪೬

ಮೋದದಿಂ ದೇಳ್ಣೂರಯೆಪ್ಪ
ತ್ತೈದು ಮಠದಧಿಕಾರಿಗಳು ಬಂ
ದಾದಯಾಂಬುಧಿ ಮಾಂತಯೋಗಿಯ ಸನ್ನಿಧಿಗೆ ಬಂದು
ಭೇದಬುದ್ಧಿಯನುಳಿದು ಮಹಿಮನ
ಪಾದಯುಗ್ಮಕ್ಕೆರಗಿಯರ್ಚನೆ
ಗೈದು ನುತಸುತ ಶಿಷ್ಯರಾದರು ಸರ್ವರರಿವಂತೆ ೪೭

ತುರುಗಳಿವರಲ್ಲಿ ರ್ಪುದಂತಾ
ನರಿದು ಕೆಲರಿಂ ತ್ವರಿತದಿ ವಿಜಾ
ಪುರದ ಬಾದಷಹನಾಗಾಗೋವುಗಳ ತರುವುದಕೆ
ಚರನಿಕರ ಸೇನಾಪತಿಯ ಸಹಿ
ತರದೆ ಕಳಿಸಲ್ಕವರು ದೋರನ
ಪುರದಸೀಮೆಗೆ ಬಂದು ಗೋವುಗಳಿರುವದನ್ನರಿತು ೪೮

ತುರುಕರುಗಳನು ತಿರುತಿರುವಿ ಯಾ
ತುರುಕರುಗಳುರೆ ಬಳಲಿ ಬಾಯಾ
ದುರ್ಗರುತರಾಲೋಚನೆಯೊಳಗೆ ಮನಮಗ್ನರಾಗುತಲಿ
ಇರುತಿರುತ ಮತ್ತೋರ್ವನನು ಪಿಡಿ
ದುರವಣಿಸಿ ಉದ್ರೇಕದಿಂ ತುರು
ಕರುಗಳೆಮ್ಮಗೆ ದೊರೆವ ಸದುಪಾಯವನು ಪೇಳೆಂದ ೪೯

ಕೇಳಲವ ಭಯಗೊಂಡು ಕಂಪಿಸಿ
ಪೇಳಿದನು ಮಾಂತೇಶ ಪ್ರಾತಃ
ಕಾಲದಲಿ ಲಿಂಗಾರ್ಚನೆಯನೆಸಗುತ್ತ ಮಠದೊಳಗೆ
ಲೀಲೆಯಿಂದಿರುತಿರ್ಪ ಸಮಯದಿ
ಮೇಳದಿಂದ್ಯೆದಾತನಂ ಪಿಡಿ
ದಾಲಯದಿ ಬಂಧಿಸಲು ಸರ್ವವು ಸಾಧ್ಯವಹುದೆಂದ ೫೦

ಪಿಂಗದವನುಡಿದಂತೆ ಉದಯದಿ
ಮಂಗಸೇನಾಧೀಶ ತವಭಟ
ರಿಂಗೆ ಯೆಚ್ಚರಿಸಲ್ಕವರು ಗಡ ಮಠಕೆ ಮುತ್ತುತಲಿ
ಜಂಗಮಕುಪಕಡೋಪಕಡೋಕಿ
ಜಂಗಲ ಶುಲೇಜಾಕೆ ಹಂ ಮಾ
ರುಂಗೆ ಪೀಟೊಂಗೆಂಬುತಲಿತಾವ್ ಪೊಕ್ಕರೊಳ ಮಠವ ೫೧

ಗುರುಮಹಂತ ಮುನೀಂದ್ರ ತರುಕರ
ಬರವ ನೋಡುತ್ತವಸರದೊಳೆ
ದ್ದರಕಿ ಮುಟ್ಟದಿರೆನಲವರು ಬೇಡಿದರಖಿಳ ಹಣವ
ವರ ಮಹಿಮನಂತೆಂದ ಹಣ ಘಳಿ
ಸಿರುವೆನದು ಮಠದಿರಲು ಭಯಮೆಂ
ದರಿದು ಮೊಗಡಿಯೋಳಿಟ್ಟಿರುವೆ ತೋರಿಸುವೆ ನಿಮಗೆಂದ ೫೨

ಹಮಕೊ ಬತ್ಲಾವ ಚಲೊ ಚಲೊ ಅಬ್
ತುಮಕೊ ನಹಿ ಛೋಡ್ತಾ ಕಭೀ ಯೆಂ
ದಮಿತ ಕುತ್ಸಿತನುಡಿಗಳುಚ್ಚರಿಸಲ್ಮಹಂತೇಶ

ಸಮಯ ಮಲ್ಲಿದು ನಾಳಿನುದಯದಿ
ಕ್ರಮದಿ ತೋರಿಸುವೇಂ ಸಕಲ ಧನ
ನಿಮಗೆ ಸಂಶಯಗಂಡರಿಲ್ಲಿರ ಬಹುದು ನೀವೆಂದ ೫೩

ಆಗ ಭಟರಚ್ಚಾ ಯೆನುತ ಚರ
ಮಾಗಮಂ ಮಠದಾಲಯದ ಪೊರ
ಭಾಗದೊಳು ಕಾವಲಿಯನಿಟ್ಟೆಚ್ಚರದಿ ಕಾಯ್ದಿರಲು
ಬೇಗದಿಂ ಸುತಬಸವನಂ ಜತೆ
ಯಾಗಿ ಕರಕೊಂಡಾಮಠದತಲೆ
ಬಾಗಿಲವ ಮುಚ್ಚುತ್ತ ಕೀಲಿಯನೊತ್ತಿ ಬಂಧಿಸಿದ ೫೪

ಸುತ್ತಲುಂ ಬಹುಜಾಗ್ರದೊಳುವರ
ಕತ್ತಿ ಕರದಲಿ ಪಿಡಿದು ನಿಂದ ಭ
ಟೋತ್ತಮರ ಪ್ರತ್ಯಕ್ಷ ಮಹಿಮಾ ಬಲದಿ ಕಾಣ್ದಂತೆ
ಸತ್ವರದೊಳುಭಯರು ಪಥವ ನಿಡಿ
ಯುತ್ತ ದೇವಿಯ ಮಂದಿರವನರ
ಸುತ್ತ ಮೆಲ್ಲನೆ ತಲ್ಪಿದರು ಗಾಢಾಂಧಕಾರದಲಿ ೫೫

ಕುವರ ಬಸವನ ಹೊರಗೆ ನಿಲ್ಲಿಸಿ
ಜವದಿಗರ್ಭಾಲಯಕೆ ನಡೆದು
ತ್ಸವದಿ ಪದ್ಮಾಸನವನಳವಡಿಸುತ ಭಕ್ತಿಯಲಿ
ತವೆ ನೆನೆಯಲಾಕ್ಷಣದಿ ವರ ಶಾಂ
ಭವಿ ಯುನಿಜರೂಪದೊಳು ನಿಲ್ಲಲು
ತವಕದಿಂದಿಷ್ಟಾರ್ಥವಿತ್ತೆನ್ನನ್ನು ಪೊರೆಯಂದಾ ೫೬

ವರವದೇಂ ಬೇಡಿತ್ತಪೆನೆನ
ಲ್ಕರವ ಮುಗಿಯುತ ಮಾತೆ ಯೀನ
ಶ್ವರಮೆನಿಪ ಭೂಲೋಕ ಸುಖ ಸಾಕೀಗ ನೀನೆನಗೆ
ಭರದೊಳೈಕ್ಯದ ಸ್ಥಾನವನು ಸ
ತ್ಕರುಣದಿಂ ತೋರೆಂದು ನುಡಿಯ
ಲ್ಕಿರದೆ ನಡಿ ಶಿವಗಿರಿಗೆನುತ ಬೈಲಾದಳಾದೇವಿ ೫೭

ಆಗಲಿತ್ತ ಭಟರು ಮಠದ ತಲ
ಬಾಗಿಲವ ಮುಚ್ಚುತ್ತ ಕೀಲಿಯ
ಬೇಗದಿಂ ದೊತ್ತಿಟ್ಟುದಂ ನೋಡುತ್ತ ತೆರದಿರ್ಪ
ಬಾಗಿಲಿಯ ಬಂಧಿಸಿದ ನೀಚನ
ನೀಗ ಶೋಧಿಸಿರೆಂದೆನುತ ವಳಿ
ತಾಗಿ ತಂತಮ್ಮೊಳಗೆ ಯೋಚನೆ ಮಾಡಹತ್ತಿದರು ೫೮

ಕೀಲಿ ಮುರಿದೊಳ ನುಗ್ಗಿ ಕೋಪ
ಜ್ವಾಲೆಯಿಂ ಗಡಬಡಿಸಿ ಮಹಿಮನೆ
ಕೋಲಿಮೂಲಿಗಳಲ್ಲಿ ಶೋಧಿಸಲಿಲ್ಲದಂತಾಗೆ
ಮೇಳದಿಂ ಕಾದಿರಲವ ನೂತ
ನಾಲಯ ಬಿಟ್ಟೈದನೆಂತು ವಿ
ಶಾಲ ಮತಿಯಿಂ ಹುಡುಕಿ ಕಾಣದೆ ವೆಸನದಿಂದಿರಲು ೫೯

ಸುತನ ಕೂಡ್ದು ಮಹಂತ ಮುನಿಪಾ
ರ್ವತಿಯ ಮಂದಿರವನ್ನುಳಿದು ನಡೆ
ದತಿ ನಿಕಟದಿಂ ಕಾದಿರುವ ತುರುಕರ ಸಮಕ್ಷಮವೆ
ಚತುರತನದಿಂ ಸ್ವಮಠ ಪೊಕ್ಕಾ
ಸುತ ಬಸವನಂ ಕುಳ್ಳಿರಿಸಿ ವಿಲ
ಸಿತ ಮನದಿ ಚರಪಟ್ಟದಧಿಕಾರವನು ತಾನಿತ್ತಂ ೬೦

ಏಕ ಗಣಿಕೆಯ ನಾಗಬೆತ್ತವ
ನೇಕ ಮುಖದ ಶಿವಾಕ್ಷಿಯನು ಪರಿ
ಪಾಕ ಮಾದೆಡ ಬಲದ ಮುರಿಶಂಖುದ್ವಯವ ಬಳಿಕಂ
ಲೋಕದೊಳು ಶಿವಯೋಗಿ ವೃಂದಕೆ
ಬೇಕೆನಿಪ ಪರುಷದ ಸುಬಟ್ಟಲ
ಜೋಕೆಯಿಂ ಮಾಂತೇಶ ಬಸವನಿಗಿತ್ತು ಇಂತೆಂದ ೬೧

ಬಸವಕೇಳು ತ್ರಿಸಂಧ್ಯೆಯೊಳು ಕರ
ಜಿಸುವ ಲಿಂಗವನರ್ಚಿಸಿದರಿಂ
ವ ಸುಮತಿಹೊಳಿಷ್ಟಾರ್ಥ ಫಲಗಳು ಸಿದ್ಧಿಸುವವೆನಲು

ಅಸಮ ಗುರುವಿನ ಪದಕವನು ವಂ
ದಿಸುತ ಲಿಂಗ ಮಹತ್ವವನು ನೀ
ನುಸುರಿಯೆನ್ನ ಕೃತಾರ್ಥನಂ ಮಾಡೆಂದು ಕರಮುಗಿದ ೬೨

ಮತ್ತೊರೆವೆನಾಲಿಸು ಮಗನೆ ಝುಸ
ವೆತ್ತೆಸವ ಕಲ್ಯಾಣಮೆಂಬುವ
ಪತ್ತನದಿ ಮಾಯಕ್ಕ ವೇಶ್ಯಾಂಗನೆ ಜನತ ಕಣ್ಗೆ
ಚಿತ್ತರದ ಬೊಂಬೆಯ ತೆರದಿ ಮರೆ
ಯುತ್ತ ವರಪಿಕನಂತೆ ಸುಸ್ವರ
ವೆತ್ತಿ ಗಾನವಗೈದು ತನ್ನಾಲಯದೊಳಿರುತಿರಲು ೬೩

ಅವಳ ರೂಪಕ್ಕೊಲಿದು ಬಿಜ್ಜಳ
ಭುವನಪ್ಪತಿ ಧನವಿತ್ತು ರತಿಸುಖ
ಸವಿದು ಪಾಲಿಸುತಿರ್ದನೈ ಮಾಯಕ್ಕನಾ ನೃಪನ
ಭವನಕೈದುತಿರಲಾ ಸುಪಥದಿ
ಶಿವನಿಲಯ ಮಿರೆ ನಮಿಸಬೇಕೆಂ
ಬುವ ಬಯಕೆಯಿಂದಾ ಗುಡಿಯ ನೊಳ ಪೊಕ್ಕಳವಸರದಿ ೬೪

ಗುಡಿಯೊಳಗೆ ಪೌರಾಣ ಶ್ರವಣವು
ನಡೆದಿರಲು ಕೇಳುತ್ತ ಸಂತಸ
ವಡೆದು ವಾಸಿಸಲಾಗ ಪೌರಾಣಿಕನು ಉತ್ಸುಕದಿ
ಪೊಡವಿಯೊಳು ದಶ ದುಷ್ಟರೆಸಗಿದ
ಕಡು ದುರಿತವದು ಚಕ್ರಿಯೋರ್ವಗೆ
ಬಿಡದೆ ಬರ್ಪುದು ಮರಳಿ ದಶ ಚಕ್ರಿಯರ ದೋಷವದು ೬೫

ಧರೆಯೊಳೋರುವ ಗಣಿಕೆಗೊದಗುವ
ದರಿಯಲಾದಶವೇಸಿಯರ ಆಘ
ಮರುಳತನದಿಂ ಮತ್ತನಾದ ನೃಪಂಗೆ ಪ್ರಾಪ್ತಿಪುದು
ಪರದಿ ಸದ್ಗತಿ ದೊರೆಯದಂತ್ಕದಿ
ನಿರಯ ತಪ್ಪದಿವರ್ಗೆ ಸತ್ಯವು
ಹರನ ನಾಮಸ್ಮರಣೆಯಿಂದ ಘನಾಶವಾಗುವದು ೬೬

ಅರಿಯಲಿದ ನುಳಿದನ್ಯಯೆತ್ನವು
ಪರಿಕಿಸಲ್ಕಿಲ್ಲೆಂದು ಪಂಡಿತ
ನೊರೆದನುಡಿಗೇಳ್ದಾ ಗಣಿಕೆ ಘನ ದುಗುಡವನು ತಾಳ್ದು
ಧರಣಿಯಲಿ ಬಹುಪಾತಕದ ಮಂ
ದಿರವೆನಿಪ ವೇಸ್ಯಾಕುಲದಿ ನಾ
ನಿರದುದಿಸಿದುದು ಪೂರ್ವಜನ್ಮದ ದುಷ್ಕೃತದ ಫಲವು ೬೭

ಭೂತಲದಿ ನಾನುದಿಸಿ ಲೌಕಿಕ
ನೀತಿ ಮಾರ್ಗವನುಳಿದು ದುಡ್ಡಿನ
ಪ್ರೀತಿಯಿಂ ದುಷ್ಕುಲಜ ಸತ್ಕುಲಜಾತರೆಂತೆಂಬ
ರೀತಿಯರಿಯದೆ ಬಂದ ವಿಟರೊಳು
ಕಾತುರದೊಳೊಡವೆರೆದನಕ್ಕಟ
ಯಾತಕೀ ಕುಲದಲ್ಲಿ ಪುಟ್ಟಿದೆನೆಂದು ಹಲುಬಿದಳು ೬೮

ಆ ಪುರಾಣಿಕನುಕ್ತಿಯೇ ಗಿರಿ
ಜಾಪತಿಯ ನಿಜ ಮಂತ್ರಮೆಂದರಿ
ದಾಪಯೋಧರಿಯಂದಿನಿಂ ಫಾಲದೊಳು ಭಸಿತವನು
ಲೇಪಿಸುತ ರುದ್ರಾಕ್ಷಿ ಸರಗಳ
ತಾ ಪಮಳದಿಂ ಗಳದ ತಳ್ಳಿಸಿ
ಸೈಪಿನಿಂದಂಗಕೆ ಶ್ವೇತಾಂಬರವ ಧರಿಸಿದಳು ೬೯

ಅಂದಿನಿಂ ಕುಲಪದ್ಧತಿಯ ಬಿ
ಟ್ಟಿಂದುಶೇಖರನನು ಸ್ಮರಿಸುತ
ಮಂದಿರಕೆ ಮಾಹೇಶ್ವರನು ಬರಲರ್ತಿಯಿಂದವಳು
ವಂದಿಸುತ ಕೆಲಕಾಲ ಕಳಿಯ
ಲ್ಕೊಂದು ದಿನದಿರುಳಲ್ಲಿ ಜಂಗಮ
ವೃಂದವಗಲಲು ಮಿಂಡ ನಾಗಯ್ಯನು ಕುತೂಹಲದಿ ೭೦

ದುರುಳನೀತಿಯ ಮಾರ್ಗವನು ತಾ
ಭೂರಿ ಕಾಮಾತುರದ ಮದದಿಂ
ವಾರಗೇರಿಯ ಪೊಕ್ಕು ನಡೆಯುತ್ತಿರಲು ತಂತಮ್ಮ

ದ್ವಾರದಲಿ ನಿಂದಿರ್ದ ಚಪಲದ
ನಾರಿಯರ ನವ ಯೌವ್ವನದ ಶೃಂ
ಗಾರಿಯರ ನೋಡಚ್ಚರದಿ ಬಣ್ಣಿಸಿದ ವಿಧವಿಧದಿ ೭೧

ನಡೆಗಳಿಂ ಹಂಸಂಗಳಿಂ ಬಿಡು
ನುಡಿಗಳಿಂ ಗಿಳಿಬಳಗಮಂ ಸೋ
ರ್ಮುಡಿಗಳಂದಿನಿಗೋಲ ಸೋಗೆಗಳಂ ಸುಮುದದಿಂದೆ
ಉಡುಪನಂ ಮುಂಗುರುಳ್ಗಳಿಂಕ
....
ಪ್ಪಿಡಿದಳಗಳಂ ಜೈಸಿದಬಲೆಯರನ್ನು ನಿಟ್ಟಿಸಿದ ೭೨

ವೇಸಿಮಯ ಬೇಕಾದ ಪುರುಷೋ
ಲ್ಲಾಸಿಯರು ಧನಕನಕದಲಿ ಅ
ತ್ರಾಶಿಯರು ಮೃದು ಮಧುರ ಮಿಶ್ರಿತ ಭಾಷಿಯರು ವಿಟರ
ವಾಸಿಯರು ನಿರ್ಧನಿಕರೊಳು ಬಹು
ದೂಷಯರು ಘನ ಧನಿಕರೊಳು ಸುವಿ
ಲಾಸಿಯರು ಸಂತೋಷದಿಂ ಮೆರದಿರ್ವ್ವರೆಡಬಲದಿ ೭೩

ಮಿಂಡೆಯರೊಳತಿ ಮಿಗಿಲೆನಿಪ ವಿಧು
ಮಂಡಲಾನ್ನೃಪ ಮಾಯದೇವಿಯ
ಕಂಡು ಮನದೋಳ್ತರ್ಕಿಸಿದ ಭೂತಲದಿ ವಾಸಿಸಿದ
ಹಿಂಡು ಯತಿಗಳ ಕೆಡಿಪ್ಪುದಕ್ಕೀ
ಪುಂಡರೀಕಾಕ್ಷಿಯನಜಂತ
ನ್ನಂಡದಲಿ ಪುಟ್ಟಿಸಿದನೋ ನಾನರಿಯನಕಟಕಟ ೭೪

ಇಂತು ವರ್ಣಿಸುತಾ ಚರಂ ಬಹು
ಭ್ರಾಂತಿಯಿಂ ದೊಳಮಂದಿರಕೆ ನಡೆ
ಸಂತಸದಿ ಮಾಯಕ್ಕನಾತನ ಚರಣಕಭಿನಮಿಸಿ
ಕಂತು ಹರನನು ಸ್ಮರಿಸುತಲಿ ತಾ
ನಿಂತು ನುಡಿದಳು ಇಂದು ನೀನ
ತ್ಯಂತ ಸರಸದೊಳೊಂದು ಲಿಂಗವ ನೀವುದೀಗೆನಗೆ ೭೫

ಎಂದು ಪ್ರಾರ್ಥಿಸಲಾ ಚರನು ನಲು
ವಿಂದ ನಿಂಬಿಯ ಫಲವನೊಂದನು
ಇಂದುಮುಖಿಗಿದೆ ಲಿಂಗವೆಂದಿತ್ತಿಂತು ಬೋಧಿಸಿದ
ಸುಂದರಿಯೆ ನೀನಿದನು ಸದ್ವಿಧಿ
ಯಿಂದ ಪೂಜಿಸಲಿಹದಿ ಭೋಗದ
ಮುಂದೆ ಪರದೊಳು ಸುಖ ಪ್ರಾಪ್ತಿಪುದೆಂದು ಕರಕಿತ್ತ ೭೬

ಜಂಗಮನು ಕೊಟ್ಟಾಫಲವೆ ಶಿವ
ಲಿಂಗವೆಂದರೆ ಭಾವಿಸುತ ಉ
ತ್ತುಂಗ ಭಕ್ತಿಯೊಳರ್ಚಿಸುತ ಕಂಠದಿ ಧರಿಸಿಕೊಂಡು
ಅಂಗನಾಮಣಿ ಚರವರನ ಪಾ
ದಂಗಳಿಗೆ ಬಾಗುತ್ತ ಶಿವನಾ
ಮಂಗಳಂಪರಿಸುತ್ತ ಮಹದುತ್ಸವದಿ ಕೂಡಿದಳು ೭೭

ಅಂಗಜನ ಶರತಾಪ ತಾಳದೆ
ಜಂಗಮನು ನಿರ್ಲಜ್ಜೆಯಿಂ ಪು
ಣ್ಯಾಂಗನೆಯ ಕೂರ್ತಂದ ನೆಲೆ ಭಾಮಾಮಣಿಯೆ ನಿನ್ನ
ತುಂಗ ಬಲದಿಂ ಪಂಚಬಾಣನ
ಸಂಗರದಿ ನೀನಿಂದಿನಿರುಳೆ
ನ್ನಂಗೆಲ ವುದೆನಲವಳು ಮತ್ತಿಂತೆಂದಳಾತನಿಗೆ ೭೮

ಚರನು ಸುಗುಣಾಕರನು ಭುವನದ
ಹರನು ವಿಧಿತತ್ಪರನು ಪ್ರೇಮಾ
ಗರನು ಮೇಣ್ ಗುರುವರನು ನೀನಿರ್ದೀಗ ಮರುಳ ನೊಲು
ಮರವೆಯಿಂ ಮಗಳೆಂಬ ಮೋಹವ
ಮರೆದು ಮದನನ ಕೇಳಿಗೆನ್ನನು
ಕರಿವದಿದು ಸರಿಯಲ್ಲ ಸನ್ನೀತಿಯ ಸುಪಥವಲ್ಲ ೭೯

ಪ್ರೇಮದಿಂ ಲಿಂಗವನು ಧರಿಸಿದ
ಸ್ವಾಮಿಯೇ ನೀನಿಂದು ಯೆನ್ನಂ
ಕಾಮನಾಟಕೆ ಕರೆವದನುಚಿತ ಮತ್ತಿ ತಿಳಿ ನೀನು

ತಾಮಸದಿ ಕೂಡ್ದಿವಳು ಗಣಿಕಾ
ಕಾಮಿನಿಯಳೆಂಬುದನುಳಿದು ಮಮ
ತಾವರಿಸಿ ಸುತೆಯಂದರಿದು ಪರಿಪಾಲಿಸನುದಿನದಿ ೮೦

ಎಂದವಳು ದೃಢ ಭಕ್ತಿ ಭಾವದೊ
ಳೊಂದು ಸಾವಿರ ಧನವನಾಗಳೆ
ತಂದು ಕೊಟ್ಯಂತರದಿ ಪ್ರತಿ ಶಿವನೆಂಬ ಭಾವನೆಯಿಂ
ವಂದಿಸಲ್ಕಾ ಚರನು ಪೂಶರ
ನಿಂದೊಗೆದ ದುರ್ಗುಣಗಳೆಲ್ಲವು
ಬೆಂದು ಪೋಗಲ್ಪುತ್ರಿಯಂದಾತ್ಮದೊಳು ಭಾವಿಸಿದ ೮೧

ಸುತೆಯ ಕೇಳ್ವಿಷಯಾಶೆಯಿಂದು
ಷ್ಕೃತಮಿದೆಂದರಿಯದೆ ಸ್ಮರನ ಶರ
ಹತಿಗೆ ಸೈರಿಸದೀಗ ನಿನ್ನನು ಕಾಮ ಕೇಳಿಂಗೆ
ಹಿತದಿ ಕರೆದಪರಾಧ ಕ್ಷಮಿಸಾ
ಕ್ಷಿತಿಯೊಳಗೆ ನಿನ್ನನ್ನು ಪೋಲುವ
ಸತಿಯರೀಗಣಿಕಾ ಕುಲದಿ ಪುಟ್ಟುವದು ದುರ್ಲಭವು ೮೨

ಈ ತೆರದಿ ಬಣ್ಣಿಸಿ ಗುರೂತ್ತಮ
ತಾತೆರಳಲಿತ್ತಾಗಣಿಕೆಯ
ತ್ಯಾತುರದಿ ಸದುಭಕುತಿಯಲಿ ತ್ರಿಸಂಧ್ಯದೊಳು ನಿತ್ಯ
ಓತು ಲಿಂಗಾರ್ಚನೆಯನೆಸಗಿ ಸು
ನೀತಿಯಿಂದಿರುತಿರ್ದಳೈತವ
ಜಾತಿ ಕರ್ಮಗಳೆಲ್ಲ ತೊರೆದು ಪವಿತ್ರವರ್ತನದಿ ೮೩

ಅತ್ತಲಾ ಮಂಚಣ್ಣ ಬುಧ ಭೂ
ಪೋತ್ತಮನ ಸನ್ನಿಧಿಗೆ ನಡೆವತಿ
ಕೃತ್ರಿಮ ದೊಳಿಂತೆಂದ ನಿನಗಾನಂದವನು ಮಾಳ್ಪ
ಮತ್ತಮಾ ಮಾಯಕ್ಕನಿಂ ಬಹು
ವಿತ್ತವನು ನಾಗಯ್ಯನೆಂಬುವ
ವೃತ್ತಿಹೀನನು ಕಳೆದುಕೊಂಡು ಯತಾರ್ಥ ಮಾನಿನಿಗೆ ೮೪

ಕಪಟ ವೃತ್ತಿಯನಾಂತು ಮನದೊಳು
ಚಪಲತನದಿಂ ಬಿಡದೆ ಬೋಧಿಸಿ
ಅಪರಿಮಿತ ಸಾಹಸದಿ ಲಿಂಗವಿದೆಂದೊರೆದು ಮತ್ತಂ
ಗುಪಿತದಿಂ ನಿಂಬಿಯ ಫಲವ ಬಿನ
ದಿಪ ಗಣಿಕೆಯ ಕೊರಳ್ಗೆ ಬಂಧಿಸಿ
ಅಪಕೃತಿಯಗೈದಿರುವನಿದಕಿನ್ನೇನು ಗತಿಯೆಂದು ೮೫

ಅಂದಿನಿಂ ನಿಮ್ಮನ್ನು ಮರೆದಾ
ಸುಂದರಿಯು ಬೂದಿಯ ಧರಿಸಿ ಪರ
ಮಂದಿರಕ್ಕಡಿಯಿಡದೆ ಮೌನದಿ ಕುಳಿತು ಪಣ್ಣನ್ನು
ಒಂದೆ ಭಾವದಿ ಪೂಜಿಸುತ್ತಿಹ
ಳೆಂದೊರೆಯಲಾ ಬಿಜ್ಜಳ ನೃಪನ
ಮಂದ ಕೋಪದಿ ಬಸವ ಮಂತ್ರಿಯ ಕರಿಸುತಿಂತೆಂಬ ೮೬

ಮಿಂಡ ನಾಗಯ್ಯನು ಗಣಿಕೆಯಿಂ
ಕೊಂಡು ಹಣ ನಿಂಬಿಯ ಫಲವನು
ದ್ದಂಡತೆಯೊಳವಳಿಗೆ ಧರಿಸುತಿದೆ ಲಿಂಗವೆಂದುಸುರಿ
ಮಿಂಡೆ ಮಾಯಾದೇವಿಗೊಲಿದವ
ಭಂಡತನಗೈದಿರುವನಿದರಿಂ
ಮುಂದೆಗೇಂ ಫಲಬಪ್ಪುದ್ಯೆ ಪೇಳೆನಲು ಬಸವಯ್ಯ ೮೭

ಸರಸದಿಂದಿಂತೆಂದ ನಮ್ಮಯ
ಚರರು ಧನದಾಪೇಕ್ಷೆಯಿಂ ಸ್ತ್ರೀ
ಯರಿಗೊಲಿದು ಮನಮಿಲ್ಲದಧಮರಿಗಮಲ ಲಿಂಗವನು
ಧರಿಸುವವರಲ್ಲಲ್ಲ ಸನ್ಮನ
ವಿರಲವರ ಕುಲಗೋತ್ರವೆಣಿಸದೆ
ಧರಿಸಿ ಲಿಂಗವನತುಲ ಶಿವಮಂತ್ರವನು ಬೋಧಿಪರು ೮೮

ಆವ ಕುಲದವರಾದೊಡೇಂ ಗಿರಿ
ಜಾವರನ ಸದ್ಭಕ್ತಿಯಿರಲವ
ರೀವ ಸುಂದರಿಯೊಳು ಕೃತಾರ್ಥರು ಮಗುಳಿ ಕೇಳಿನ್ನು

ಜೀವ ಹಿಂಸಕನಾಗಿರಲಿ ಮ
ತ್ತಾವ ಪಾತಕ ಮಾಡಿರಲಿ ಗೌ
ರೀವರನ ಸ್ಮರಿಸಲ್ಕಿವರುನಿಷ್ಕಲುಷರೆನಿಸುವರು ೮೯

ಭೂಪ ಕೇಳ್ನಿನ್ನೊಡಲೊಳಡಸಿದ
ಕೋಪ ಬಿಡು ಮಾಯಕ್ಕನಿಲ್ಲಿಗೆ
ನೀ ಪದುಳದಿಂ ಕರೆಸೆನಲು ತಕ್ಷಣದಿ ಕರೆಸಿದನು
ಆ ಪಯೋಧರಿ ಬರೆ ನಿರೀಕ್ಷಿಸಿ
ತಾಪದಿಂದೆಲೆ ಜಾರಿಣಿಯೆ ನಿ
ನ್ನೋಪಚರ ಧರಿಸಿರ್ಪ ಲಿಂಗವ ತೋರಿಸೆನಗೆಂದ ೯೦

ಮೊಡವಿಪನನುಡಿಗಳ್ಗೆ ಬೆದರದೆ
ಮೃಡನ ಸ್ಮರಿಸುತ ಗಣಿಕೆ ತಾಬಿ
ಚ್ಚಿಡಲು ಪಣ್ಣದು ಪೊಳೆವ ಸ್ಫಟಿಕದ ಲಿಂಗವಾಯ್ತಾಗ
ಬಿಡದೆ ಭೂಪನು ನೋಡುತಚ್ಚರಿ
ಬಿಡುತ ಮಹಿಮಕೆ ತಲೆಯದೂಗುತ
ಒಡಲೊಳಡಸಿದ ಮತ್ಸರವನಳಿದಾದನಾನಂದ ೯೧

ಚಿತ್ತ ಶುದ್ಧದಿ ಕೇಳ್ ಬಸವ ಚರ
ನಿತ್ತ ಪಣ್ಣನು ಲಿಂಗವೆಂದರಿ
ಯುತ್ತ ಪೂಜಿಸಿ ಬಿಜ್ಜಳ ನೃಪಾಲಕನ ಸಮ್ಮುಖದಿ
ಚಿತ್ತ ಜಾಂತಕನಂ ಸ್ಮರಿಸಿ ಕಳೆ
ವೆತ್ತ ಸ್ಫಟಿಕದ ಲಿಂಗಮೆನಿಸಿ ಮ
ಹತ್ವ ತೋರ್ದಾ ಭೂಪನಂ ಸಂತೋಷ ಪಡಿಸಿದಳು ೯೨

ಧರಣಿಯೊಳು ಲಿಂಗಾರ್ಚನೆಯ ಫಲ
ವರಿಯಲಗಣಿತಮಿಹುದು ಮತ್ತಾ
ತರುಣಿ ಮಾಯಕ್ಕನು ಕಡೆಗೆ ಬಸವಾದಿ ಪ್ರಮಥರೊಳು
ಹರನಪುರಿಗೈದಿದಳು ತಿಳಿದ್ಧೃಢ
ತರಮನದಿ ಲಿಂಗಾರ್ಚನೆಯನೀ
ವಿರಚಿಸುತ್ತಿರುನಿನಗೆ ಇಹಪರದಲ್ಲಿ ಸುಖವಹುದು ೯೩

ಗುರುವರನ ನುಡಿಗೇಳಿ ಬಸವನು
ಕರಮುಗಿದು ಮಗುಳೆಂದ ಲಿಂಗದ
ವರ ಮಹತ್ವದ ಕೇಳ್ದು ಹರುಷೋತ್ಕಂಠ ನಾನಾದೆ
ಪರಮ ಸದ್ಭಕ್ತಿಯೊಳು ಸಂತತ
ವಿರಚಿಸುವೆ ಲಿಂಗಾರ್ಚನೆಯ ನೆಂ
ದಿರಗಲಾತಗೆ ಮರಳಿ ಗುರು ಮಾಂತೇಶನಿಂತೆಂದ ೯೪

ದೇಹಮಂ ದಂಡಿಸಿ ಸತತ ದಾ
ಸೋಹಮಂ ನಡಿಸುತ್ತ ಚರ ಸಂ
ದೋಹಮಂ ತೃಪ್ತಿಸುವದಲ್ಲದೆ ಅತಿಥಿವೃಂದಕ್ಕೆ
ಸಾಹಸದಿ ಅನ್ನೋದಕಂಗಳ
ಮೋಹದಿಂದುಣಬಡಿಸಿಯತ್ಯು
ತ್ಸಾಹಗೊಳಿಸುತ ಬಂದಿರುವೆ ನಿದರಂತೆ ನೀ ನಡಿಸು ೯೫

ಭೂತ ಹರನಕ್ಷಿಯ ಧರಿಸಿ ಪರಿ
ಪೂತ ಕಾವಿಯ ಲಾಂಚನದಿ ಬಿಡ
ದೈತರಲ್ಕವನಾರಿರಲಿ ಸಂಕಲ್ಪವನು ಬಿಟ್ಟು
ಜಾತಿಯಣಿಸದಿರಂಬಿಕಾಪತಿ
ತಾತವಕದಿಂ ಬಂದಿರುವನೆಂ
ದಾತುಮದಿ ತಿಳಿದಾತನನ್ನುಣಬಡಿಸು ವಂಚಿಸದೆ ೯೬

ಮಂದಮತಿಯಿಂ ಕುಲವನೆಣಿಪ
ಲ್ಕಿಂದುಶೇಖರ ಮೆಚ್ಚ ಭಕ್ತಿಗೆ
ಕುಂದು ಬರ್ಪುದು ದುಡಿತದಿಂ ದುಂಟಾದ ಪುಣ್ಯವದು
ಬೆಂದು ಪೋಪುದು ತಿಳಿಯಧಿಕ ನಾ
ನಿಂದು ನಿನಗೇನೊತ್ತಿ ಪೇಳಲಿ
ಚಂದದಿಂ ಬೂದಿಯೊಳು ಮಾಡಿದ ಹೋಮದಂತಹುದು ೯೭

ನೋಡೆಲವೋ ಶಿವ ಭಕ್ತಿಯ ಸಲೆ
ಮಾಡಿದಘವದು ಪುಣ್ಯವಹುದಿದು
ನಾಡನುಡಿಯಲ್ಲಾಗಮೋಕ್ತಿಯು ಭಕ್ತಿ ಇಲ್ಲದಲೆ

ಮಾಡಿದಗಣಿತ ಪುಣ್ಯಫಲ ಕೈ
ಗೂಡದದು ನಿಷ್ಫಲವಹುದು ಮರಿ
ಬೇಡ ನಾನುಸುರಿದ ತೆರದಿ ಶಿವಭಕ್ತಿ ದೃಢವಿರಲಿ ೯೮

ಹರನ ಭಕ್ತಿಯದಿಲ್ಲದಾ ರಘು
ವರನಘಗ ಮೃಗ ಬೇಟೆಯಿಂ ತಾ
ಪಿರಿದು ಕಷ್ಟವನಾಂತ ತದ್ಭಕ್ತಿಯನು ದೃಢವಿಡಿದು
ನಿರುತ ಬೇಂಟಿಯನಾಡಿ ಪಾತಕ
ವಿರಚಿಸಿದ ಕಣ್ಣಪ್ಪನಿಗೆ ಶಂ
ಕರನು ಮೆಚ್ಚುತ ಗಣಪದವನಿತ್ತೋವಿದನು ಮುದದಿ ೯೯

ನಂಬಿಗೆಯು ಸಾಮಾನ್ಯ ಮಲ್ಲಿದು
ಅಂಬಿಕಾವಲ್ಲಭನ ಅರಮನೆ
ಯೆಂಬ ನಾಣ್ನುಡಿ ಮಿಥ್ಯಮಲ್ಲಿದು ತಥ್ಯಮೆಂದರಿದು
ನಂಬಿಗೆಯ ದೃಢವಿಡಿದು ಸುಂದರ
ನಂಬಿ ವಿಟತನಕೆಳಿಸಲಾವರ
ಶಂಭು ತಾದೂದಟ್ಟ ಕಾರ್ಯವ ಮಾಡಿದನು ಮುದದಿ ೧೦೦

ಕಲಿಧನಂಜಯನಿಂದ ಗಡಬಿ
ಲ್ಲಿಲಿ ಪೊಡಿಸಿಗೊಂಡನು ಬಿಡದೆಕ
ಲ್ಲಿಲಿ ಪೊಡಿಸಿಕೊಂಡನು ಸುಸಾಂಖ್ಯನ ಕರದಿ ಕೆಲದಿನವು
ನಿಲದೆ ಬಾಣಾಸುರನ ಮನೆ ಬಾ
ಗಿಲವ ಕಾಯ್ದನು ಮತ್ತ ಕೇಳ್ ಕಾ
ಲಿಲಿ ಒದಿಸಿಕೊಂಡನು ನಿಕೃಷ್ಟಕಿರಾತ ನಿಂ ಶಿವನು ೧೦೧

ಇಂತಖಿಳ ಭಕ್ತಾದಿಗಳ ಹೃದ
ಯಾಂತರದ ದೃಢಭಕ್ತಿಗೊಲಿದಾ
ಕಂತುಮರ್ದನ ಮಾಡಬಾರದ ಹೀನ ಕೃತ್ಯಗಳಂ
ಸಂತಸದಿ ಮಾಡ್ದಿಹದಿ ಪೋಷಿಸಿ
ಅಂತ್ಯದಲಿ ಗಣಪದವನಿತ್ತ
ತ್ಯಂತ ಹರುಷದಿ ಪಾಲಿಸಿದನರಿಯೆಂದು ಬೋಧಿಸಿದ ೧೦೨

ಕೆಲವು ದಿನದೊಳು ಶಹಾಪುರದಿಂ
ಚಲುವ ಶಿವಪೂಜಾಸುನಾಮದ
ಪೊಳೆವ ವಟುವಾಗಮಿಸುವನು ಮೇಣವನ ಸಲೆನಿಲಿಸಿ
ವಲಿದು ಅಯ್ಯಾಚಾರವನು ಮಾ
ಡಲಸದಿರು ಅಂತ್ಯದೊಳವಗೆ ನಿ
ರ್ಮಲ ಮನದಿ ಚರ ಪಟ್ಟದಧಿಕಾರವನು ಕೊಡುಯೆಂದ ೧೦೩

ಸ್ಥೂಲವಾದೀ ತನುವಿನಿಂ ಕಲಿ
ಕಾಲದೊಳು ಮಹಿಮವನು ತೋರ್ಪಡೆ
ಕಾಲಹರನಿಗಸಾಧ್ಯವದರಿಂ ಬೇಗದಿಂ ನಾನು
ಮೇಲು ಮಾತಿನ್ನೇನು ತುರುಕರ
ಜಾಲ ವಿಸ್ಮಯ ಪಡುವ ತೆರ ಸ
ಲ್ಲೀಲೆಯಿಂ ಲಿಂಗೈಕ್ಯನಾಗುವೆ ಸರ್ವರರಿವಂತೆ ೧೦೪

ಬೆದರದಿರು ಮನದೊಳಗೆ ನಿನಗೊದ
ವಿದ ಮಹಾ ವಿಘ್ನಗಳನೆಲ್ಲವ
ಸದಯದಿಂ ಪ್ರತ್ಯಕ್ಷ ಬಂದಾಂ ಪರಿಹರಿಸುತಿಹೆನು
ಹೃದಯದೊಳು ಧೃತಿಗುಂದದಿರು ನಿರು
ತದಿ ಪಶುಗಳಂ ಹಿರಿಯೊಡೆಯನಿಂ
ಮುದದಿ ಪಾಲನೆ ಮಾಡಿಸುವದೆಂದೊತ್ತಿ ಪೇಳಿದನು ೧೦೫

ಇಂತು ಘನ ಮಹಿಮಾಗಣಿತದ ಮ
ಹಂತ ಸುತ ಬಸವಂಗೆ ಬೋಧಿಸಿ
ಶಾಂತಿಗೊಳಲಾ ಸಮಯದಲಿ ಕುಕ್ಕುಟಗಳಲ್ಲಲ್ಲಿ
ಕಂತುಹರನ ಸರೂಪನಾದ ಮ
ಹಂತನಂ ನೋಳ್ಪದರೆ ದಿನಕರ
ತಾಂ ತಡಿಯದ್ಯೆ ತಪ್ಪನೆಂಬಂತೆದ್ದು ಕೂಗಿದವು ೧೦೬

ಶ್ರೀ ಮಹಂತೇಶನ ಮಹಿಮ ಪ್ರಭೆ
ಭೂಮಿಯಲಿ ಪಸರಿಸುವದಾ ಘನ
ಸ್ವಾಮಿ ಮುಂದೆಮ್ಮಲ್ಪ ಪ್ರಭೆಯದು ಸಲ್ಲದೆಂದರಿದು

ಮತ್ತ ಮಾ ಗುರು ಮಾಂತನಾಗಳೆ
ಉತ್ತರೀಯವ ಪೊದ್ದು ಗುಪ್ತದಿ
ಚಿತ್ತ ಶುದ್ಧದೊಳಿಷ್ಟಲಿಂಗಾರ್ಚನೆಯನೆಸಗುತ್ತ
ಉತ್ತಮೋತ್ತಮ ಲಿಂಗದಲಿ ಮನ
ವಿತ್ತು ಲಕ್ಷವ ಬಲಿಸಿ ಮುಳುಗಿಸ
ಲೆತ್ತರದ ಸಿಲೆಯೊಂದುಗಡಬಾಯ್ದೆರೆದು ನಿಲ್ಲಲ್ಕೆ ೧೧೨

ಲಿಂಗದಲಿ ಬಯಲಾಗಿ ಭೂಜನ
ರಿಂಗೆ ಯುರುಸಿಲೆ ಕುರುಹು ತೋರ್ದು
ತ್ತುಂಗ ಮಹಿಮೆನೆಗಳ್ಚಿ ಕಣ್ಣಿಗೆ ಕಾಣದಂತಾಗೆ
ಕಂಗೊಳಿಪ ಸೇನಾನಿ ಬಿಡಗಡ
ಪಿಂಗದೈಕ್ಯದ ಸಿಲೆಯ ನೋಡ್ದತಿ
ಕಂಗೆಡುತ ಸುತ್ತೆಡ ಬಲವನರಸಿದರು ಭ್ರಮೆಯಿಂದ ೧೧೩

ಕ್ಯಾತಮಾಷಾ ಕರ್ಗಯಾ ಯೆಂ
ದಾತುರದಿ ಮೊರಡಿಯ ಬಳಿಸಿದನ
ರಾತರಿಯ ಬಿಡದೇಳು ದಿನವರಿಗಲ್ಲಿ ಕಾದಿರಲು
ಆತಪೋನಿಧಿ ಮರಳಿ ಮಹಿಮವ
ನಾತುರುಕರಿಗೆ ತೋರಬೇಕೆಂ
ದೋತುಗಡ ಪ್ರತ್ಯಕ್ಷ ರೂಪದಿ ಮೊರಡಿ ಮೇಲೆಸೆವ ೧೧೪

ನಡಿನಡಿರಿ ಅಲ್ಲಿರುವ ಬೇಗನೆ
ಪಿಡಿಪಿಡಿರಿ ನೀವೆಲ್ಲರಾತನ
ಬಡಿಬಡಿರಿ ಬಿಡಬೇಡಿರೆಮ್ಮಗೆ ಮೋಸ ಮಾಡಿರುವ
ಝುಡಿಝುಡಿರಿ ಮುಂಕೊಂಡು ಶಿರವನು
ಕಡಿಕಡಿರಿ ಕರದಾಯುಧದಿ ಎಸ
ಪಡಿಪಡಿರಿಯೊಂದೋರ್ವರೋರ್ವರಿಗೊರೆದು ಅಡರಿದರು ೧೧೫

ಆಗಲಾ ಮಾಂತೇಶ್ವರನು ಬಯ
ಲಾಗೆ ಕೆಲರಧಿಕರ್ಭರದಿ ಸಾ
ಲಾಗಿ ನಿಂದುರೆ ಶೋಧಿಸುತ್ತೊಳನೊಂದು ನಿಲ್ಲಲ್ಕೆ

ಆ ಗುರುವರನ ಗುಪ್ತ ಶರಗಳು
ಬೇಗ ಬಂದಾತುರುಕರೆದೆಯೊಳು
ತಾಗಿಧರೆಗುರುಳಿದರು ರಕ್ತವಕಾರಿ ಅಸುವಳಿದು ೧೧೬

ಅಸುವಳಿದ ಪೆಣ ನೋಡ್ದು ಸೇನಾ
ವಿಸರ ವಿಸ್ಮಯಗೊಂಡು ಪರಿಪರಿ
ವ್ಯಸನದಿಂ ಮೃತದೇಹಗಳ ಹುಗಿದಿಟ್ಟರಾಕ್ಷಣದಿ
ಹಸುಗಳಾಶೆಯ ಬಿಟ್ಟು ಬಲುಕಸಿ
ವಿಸಿಯೊಳಾ ಸ್ಥಳ ಬಿಟ್ಟು ವ್ಯಸನದಿ
ಮಸಗಿ ಮೌನದಿ ವರ ವಿಜಾಪುರಕ್ಕೈದರಾತುರದಿ ೧೧೭

ಶ್ರೀ ಗುರುವರ ಮಹಂತ ಗುಡ್ಡಕೆ
ಪೋಗಿ ಗಡಲಿಂಗದೊಳು ತಾಬಯ
ಲಾಗಿರುವ ತಾಣಕ್ಕೆ ಊರ್ಜನರೊಂದುಗೂಡುತಲಿ
ಸಾಗಿ ಸಿಲೆ ಬಿರಿದುದನು ನೋಡುತ
ಬಾಗಿ ವಂದಿಸಿ ಕರ ಮುಗಿದು ಮಹಿ
ಮಾಗಣಿತವನು ನೆನೆದು ದುಃಖಾರ್ಣವದಿ ಮುಳುಗಿದರು ೧೧೮

ಗುರುವೆ ಬಾ ನಿಜ ಭಕ್ತಜನ ಸುರ
ತರುವೆ ಬಾ ಕಾರುಣ್ಯದ ಸುಸಾ
ಗರವೆ ಚತುರ್ವಿಧ ಮುಕುತಿ ಮಂದಿರನೆ ಬಾ ದ್ವಿತಿಯ
ಹರನೆ ಬಾಶುಭಕರನೆ ಬಾ ಬಂ
ಧುರನೆ ಬಾ ಅಜ್ಞಾನ ತಮ ಭಾ
ಸ್ಕರನೆ ಬಾ ಅಣಿಮಾದಿ ಸಿದ್ಧಿಯ ಮೂರ್ತಿ ಬಾ ಬಾರೊ ೧೧೯

ತಂದೆ ನೀನೇ ತಾಯಿ ನೀನೇ
ಬಂಧು ನೀನೇಯೆಂದು ನಂಬಿ ನಿ
ರಂತರದಿ ಸೇವಿಸುತ ಭಕ್ತರಿಗೆ ಹೇಳದೆ ಗುಪ್ತ
ದಿಂದ ನೀನೇ ಬಂದು ಗುಡ್ಡದ
ಲಿಂಗದಲಿ ನಿಂದು ಬಯಲಾಗುವ
ದಿಂದೊಳಿತವೇ ನೋಡು ದಯಮಾಡು ೧೨೦

ಬಾಯೆನುತ ಕೈ ಮುಗಿದು ಕರೆದರೆ
ಹಾಯೆನುತ ಬೇಳಾಗಿ ನಿಂದರೆ
ಓಯೆನುತ ಧ್ವನಿ ತೋರದಿರ್ಪುದು ನಿನಗಿದು ಒಳ್ಳೇ
ನ್ಯಾಯವೇ ನೀನರಿದು ಯೋಚಿಸು
ಬಾಯಿ ಬಿಡುವ ನಿರಾಶ್ರಿತರ ನೀ
ಕಾಯದೀಪರಿ. ಗೌಪ್ಯನಾದರೆ ಪೊರೆವರಾರಿನ್ನು ೧೨೧

ತುರುಕರುಪಟಳಕಾಗಿಯೆಮ್ಮನು
ಮರೆದು ಮೊರಡಿಗೆ ಬಂದು ಲಿಂಗದಿ
ಬೆರೆದು ಮಹಿಮದಿ ಮರಳಿಯಾಯವನರಿಗೆ ಪ್ರತ್ಯಕ್ಷ
ಪರಮ ತನುವನು ತೋರ್ದು ಗುಪ್ತದಿ
ಕರಗಳಂ ಕೆಲವರನು ಕೊಂದುಳಿ
ದಿರುವರನ್ನೋಡಿಸಿದನೆಂಬುದು ಕೇಳೆವೈ ದೇವ ೧೨೨

ವೈರಿಗಳ ಸಮ್ಮುಖದಿ ರೂಪವ
ದೋರಿ ಮೆರೆದಂತೀಗೆ ಮಗೆ ಮೈ
ದೋರದಿರ್ದರೆ ಭಕ್ತವತ್ಸಲನೆಂಬ ನಾಮಕ್ಕೆ
ಭೂರಿ ಕೊರತೆಯು ಬಾರದಿಹುದೆ ವಿ
ಚಾರದಿಂ ತಿಳಿ ಗುರುವರದಯಾ
ಕಾರನೆಂಬುದು ನೆನಿಸುಯೆಮ್ಮನು ಪಾಲಿಸೈ ಬೇಗ ೧೨೩

ಇನಿತು ಭಕ್ತರ ದೀನ ನುಡಿಗೇ
ಳ್ದನುಪಮಚರಿತ್ರನು ತವಕದಿಂ
ತನು ಸಹಿತ ಪ್ರತ್ಯಕ್ಷ ತೋರಿಸಿ ದೂರದೊಳ್ನಿಂದು
ಜನಸಮೂಹಕ್ಕಂದನ್ಯೆ ನಿ
ಮ್ಮನು ಪೊರೆವೆ ನಾ ಗುಪ್ತದಿಂದನು
ಮಾನವಳಿದು ಸ್ವಗೃಹಕೆ ಚರಿಸರೆಂದು ಬೈಲಾದ ೧೨೪

ತೋರದವರಿಗೆ ಕೂಗಿ ಹೇಳಿದ
ನಾರು ಪ್ರತಿಯಮವಾಸಿಯೊಳು ಮೈ
ದೋರಿ ಬೈಲಾಗಿರ್ಪ ಗುಹಕಾಗಮಿಸಿ ಪೂಜಿಸಲು

ಸಾರ ಕರುಣದೊಳವರ ವಿಘ್ನವ
ದೂರ ಮಾಡುವೆ ಶ್ರಾವಣದ ಶಶಿ
ವಾರಗಳೊಳರ್ಚಿಸಿದವರಿಗಿಷ್ಟಾರ್ಥಗಳ ಕೊಡುವೆ ೧೨೫

ಎಂದು ಗೌಪ್ಯದಿ ಪೇಳ್ದ ನುಡಿ ಜನ
ವೃಂದಕೇಳ್ದಿಂಥಾ ಗುರುವರನು
ಮುಂದೆ ಭೂಮಂಡಲದಿ ಜನಿಪುದು ದುರ್ಲಭಮ್ಮೆನುತ
ಒಂದೆ ಮನದಿಂದಾ ಗುಹೆಗೆ ಅಭಿ
ವಂದಿಸುತ್ತಾ ಜನರು ತಮ್ಮಯ
ಮಂದಿರಕೆ ತೆರಳಿದರು ಮಾನಸದಲಿ ಸ್ಮರಿಸುತ್ತ ೧೨೬

ಆಗಮನೆಗೈದುವ ಜನಕ್ಕೊಳಿ
ತಾಗಿ ಕೇಳಿಸುವಂತ ದೃಶದಿಂ
ಕೂಗಿದನು ಗುರುವರನು ಶ್ರೀ ಮದ್ರೇವಣಾರಾಧ್ಯ
ಮಾಗನಾಗೇಳ್ನೂರು ವತ್ಸರ
ಹೇಗೆ ತಾನಿಲ್ಲಿರ್ದನದರಂ
ತೀಗ ನಾ ಮುನ್ನೂರು ಮೇಲೈವತ್ತು ವರುಷಗಳ ೧೨೭

ವರಿಗೆ ಮರೆಯಾಗಿರ್ದು ಭಕ್ತರ
ಪೊರೆವೆನೆನಲಾ ನುಡಿಗಳನು ಕಿವಿ
ತೆರೆದು ಕೇಳುತ್ತಾಗಸಕೆ ಮುಖವೆತ್ತಿ ದ್ವೆನ್ಯದೊಳು
ಕರಮುಗಿದು ಸಿರಿ ಗುರುವೆ ಪೊರೆ ಸುರ
ತರುವೆ ಪೊರೆ ಲೋಕವನೆನುತ ಸಂ
ಚರಿಸಿತಂತಮ್ಮಾಲಯಕೆ ಮುಟ್ಟಿದರು ಸೋಜಿಗದಿ ೧೨೮

ಅತ್ತಲಾ ದಳಪತಿ ವಿಜಾಪುರ
ಪತ್ತನಕೆ ನಡೆದರಸನನು ಕಾ
ಣುತ್ತ ಮುಜುರಿಯಗೈದು ದೋರನ ಪುರದ ಸಂಗತಿಯ
ಬಿತ್ತರಿಸಿಯಾದ್ಯಂತುಸುರಲು ನೃ
ಪೋತ್ತಮಂ ಗುರುವರ ಮಹಂತನ
ಉತ್ತಮೋತ್ತಮ ಮಹಿಮಕೇಳ್ದಚ್ಚರಿ ಪಡುತ್ತಾಗ ೧೨೯

ಧರಣಿ ಮಂಡಲದಲ್ಲಿ ಮಾಂತನ
ಸರಿಮಹಿಮರಿಲ್ಲೆನುತ ದೋರನ
ಪುರಕೆ ತಾ ಚರಿಸುತ ಮಡಿದವರ ಗೋರಿಗಳ ಗೈಸಿ
ವರ ಮಠಕೆ ಶತಬಿಘೆ ಸುಭೂಮಿಯ
ನಿರದೆ ಕಾಣಿಕೆಯಿತ್ತು ನಿನ ಶಶಿ
ಯಿರುವನಕ್ಕಿಳೆಯಲ್ಲಿ ರಂಜಿಸಲೆಂದು ಬಂಧುರದಿ ೧೩೦

ಮೆರೆವ ದೋರನಹಳ್ಳಿಯಾ ಹಿರಿ
ಗುರು ಮಠಕೆ ನಡೆದಲ್ಲಿ ಪವಡಿಸಿ
ಬರುವ ನೇಮದೊಳಿರಲು ಒಂದಿನ ಗುರು ಮಹಂತೇಶ
ತರುಣಿ ಶಿವನಿಯ ಸ್ವಪ್ನದೊಳು ಬಂ
ದೊರೆವ ನೀನಿದರಂತೆ ಪ್ರತಿವ
ತ್ಸರದೊಳಸುವಿರುವನಕ ಒರ್ವ ಸುನೇಮವನು ಪಿಡಿಯೊ ೧೩೧

ನಡಿಸಿದರೆ ನಿನ್ನಿಳೆಯೊಳನುದಿನ
ಸಡಗರದಿ ರಕ್ಷಿಸುವೆ ಒದಗಿದ
ಬಡತನದ ಬಾಧೆಯ ತವಿಸಿ ಧನಧಾನ್ಯಸುತರನ್ನು
ತಡೆಯದಿತ್ತುಪ ನೇಮತಪ್ಪೀ
ನುಡಿಯನನ್ಯರೊಳುಸುರಿದರೆ ಯಾ
ಬಡತನಸ್ಥಿರಮಾಗಿನಿರ್ವಂಶೀಲಳೆನಿಸಿಕೊಳ್ಳುವಿ ೧೩೨

ಇಂತು ಸ್ವಪ್ನದಿ ಬಂದು ಪೇಳ್ದ ಮ
ಹಂತ ಗುರುವಿನ ನುಡಿಯ ಕೇಳ್ದ
ತ್ಯಂತ ಹರುಷಿತಳಾಗಿ ಕೆಲದಿನದಲ್ಲಿ ಧನಧಾನ್ಯ
ವಂತಳೆದು ಸುತನನ್ನು ಪಡೆದೋ
ರಂತೆ ಸುಖಿಸುತ್ತಾ ಮಹಂತನ
ಅಂತರದಿ ಸಾರಿಸುತ ನೇಮವ ಬಿಡದೆ ನಡಿಸಿದಳು ೧೩೩

ನೆರೆತೆರೆಗಳಿಂ ಕೂಡ್ದು ಮುಪ್ಪಾ
ವರಿಸಿ ಶಿರನಲುಗಿಸುತ ಕೋಲದು
ಕರದಿ ಬಂದರು ನೇಮವನು ತಾ ಬಿಡದೆ ಕಷ್ಟದೊಳು

ಚರಿಸಿ ಗುರುಮಠಕ್ಕೈದು ಪವಡಿಸಿ
ಬರುವ ವ್ರತವನು ನಡಿಸುತಿರೆಸ
ತ್ಪುರುಷರಿವಳನು ನೋಡ್ದು ಬಣ್ಣಿಸುತಿರ್ದರಚ್ಚರದಿ ೧೩೪

ಚರಣ ಸತ್ವ ಮಡಂಗಿ ನೇತ್ರದ
ವರಪ್ರಕಾಶವುನಂದಿ ಶ್ರೋತ್ರಗ
ಳೊರೆದ ನುಡಿಯನು ಕೇಳದಂತಾಗಲ್ಕೆ ಧೃತಿಗುಂದಿ
ಧರಣಿ ಮೇಲೊರಗಿರ್ದು ತನ್ನಯ
ಪರಮ ನೇಮವೆಂತು ನಡಿಸಲೆಂ
ದುತರಾಲೋಚನೆಯಲಿ ಗುರುವರನ ಸ್ಮರಿಸಿದಳು ೧೩೫

ಆಗಲಾ ಗುರುವರನವಳ ಭ
ಕ್ತಿಗುಣಕೆ ಮೆಚ್ಚುತ್ತ ಸಮ್ಮುದ
ಮಾಗಿ ತಾನೇಯವಳ ಹೃತ್ಸರಸಿಜದಿ ನೆಲೆಗೊಂಡು
ಬೇಗದಿಂ ಪ್ರತಿ ವರುಷ ನೇಮವ
ಸಾಗಿಸಿದ ನಾಪುತ್ರಿ ಶಿವನಿಯ
ಮೇಗಣದಿ ಸಂಪ್ರೀತಿಯಂ ಕೆಲಕಾಲ ಮೀರದಲೆ ೧೩೬

ಗುರುವೆರೆದ ಗುಪ್ತದ ನುಡಿಗಳಂ
ಮರಣ ಸಮಯವು ಪ್ರಾಪ್ತಿಸಿತು ಪೇ
ಳ್ದರೆಯದಕ್ಕೇನಹುದೆನುತ ಅನ್ಯರಿಗೆ ತಿಳಿಸುತ್ತ
ಮರಣವಾಗಲು ಸ್ವಲ್ಪಕಾಲದಿ
ಸರಿಯು ನೀಗಿತು ಪುತ್ರನೋರುವ
ಮರಣ ಪೊಂದಿದ ಗುರುವರನ ನುಡಿ ಮಿಥ್ಯವಾಗುವದೆ ೧೩೭

ಕ್ಷೋಣಿಯೊಳು ದೋರನಪುರದೊಳಿಹ
ಗಾಣಿಗರ ಹೇಳಿಕೆಗೆ ಒಪ್ಪುವ
ಗಾಣದೊರಳನು ಗುರುಮಹಂತನು ಐಕ್ಯವಾಗಿರ್ಪ
ತಾಣದೊಳು ಕಾಸೀಮನೆಂಬ ಪ್ರ
ವೇಣನೈತಂದಿವರ ಮಹಿಮವ
ಕಾಣದಾ ಸ್ಥಲದಲ್ಲಿ ರಚಿಸುತ್ತಿರಲು ಗುರುವರನು ೧೩೮

ಒಂದು ದಿನದೊಳವನ ಕನಸಿನೊಳು
ಬಂದು ಪೇಳಿದನೆಲವೊ ಬಿಡು ನಿ
ನ್ನಿಂದಯೆನಗತಿ ತ್ರಾಸಮಾಗಿಹುದೆಂದು ನುಡಿಯಲ್ಕೆ
ಮಂಧಮತಿಯಾದಾ ತುರುಕನವ
ರಂದ ನುಡಿಯು ಮನಕೆ ತರದೆ ಬ
ಲ್ಪಿಂದ ರಚಿಸುತ್ತಿರಲು ನೋಡ್ದು ಮಹಾಂತ ಗುರುವರನು ೧೩೯

ಕುಲ್ಲ ನೀನಿಲ್ಲಿರುವದದೊಳಿತ
ಮಲ್ಲಮೆಂದಾಗ ಸದವಾಣಿಯೊ
ಳುಲ್ಲಿಸಿತದಿಂದುಸುರಲವ ಕೇಳ್ದೆಡಬಲವ ನೋಡಿ
ನಿಲ್ಲದವರಚಿಸುತ್ತಿರಲ್ಕದು
ಮೆಲ್ಲ ಮೆಲ್ಲನೆ ಬರಿಯಲಾಗಳೆ
ಕಲ್ಲಕುಟಿಗನು ತಲ್ಲಣಿಸಿ ಆಗಸದ ನುಡಿ ನೆನಿಸಿ ೧೪೦

ತಟ್ಟನೇ ಸ್ಥಲ ಬಿಟ್ಟು ಬದುಕೆಂ
ದಟ್ಟ ಹಾಸದಿ ಶ್ರೇಷ್ಟ ಗುರು ಗುರು
ತಿಟ್ಟುಸುರೆ ಕಿವಿಗೊಟ್ಟು ಕೇಳದೆ ಭ್ರಷ್ಟನಾನಾಗಿ
ಕೆಟ್ಟೆ ನೆನ್ನಯ ಹೊಟ್ಟೆಗನ್ನವ
ನಿಟ್ಟು ಪೋಷಿಪ ದಿಟ್ಟರಾರೈ
ಕಷ್ಟದಿಂ ಮಾಡ್ದಷ್ಟು ಕೆಲಸವು ನಷ್ಟವಾಯ್ತಕಟ ೧೪೧

ಎಂದು ಪರಿಪರಿ ಮನದೊಳಗೆ ಬಲು
ನೊಂದು ಮೂರನೆ ದಿನದೊಳವನಲು
ವಿಂದ ತದ್ಗುರುವರ ಮಹಂತನ ಐಕ್ಯ ಸ್ಥಾನದಲಿ
ಒಂದೆ ಭಾವದಿ ನೆನೆಸಿ ನಿದ್ರಿಸೆ
ಚಂದದಿಂದಾ ಯೋಗಿ ಸ್ವಪ್ನದಿ
ಬಂದು ಪೇಳಿದ ನೀ ಮೊರಡಿ ದಕ್ಷಿಣ ಭಾಗದೊಳು ೧೪೨

ಕೆಲಸಕೊಪ್ಪಿತವಾಗಿ ತೋರುವ
ಸಿಲೆಯು ಇರ್ಪುದಿದಂತೆಗೆದು ನಿ
ಶ್ಚಲ ಮನದೊಳೊರಳನ್ನು ರಚಿಸೆನಲಾಕ್ಷಣದೊಳವನು

ನಿಲಯದೆಚ್ಚತ್ತೆದ್ದುದಯದೊಳು
ಅಲಸದವನರಸುತ್ತ ಪೋಗಲು
ಸಿಲೆಯು ಸಿದ್ಧಮದಿರ್ಪುದಂ ನೋಡ್ದಚ್ಚರಿಯ ಗೊಂಡ ೧೪೩

ಅನಬಿ ಜನರಿಗೆ ಸಾಧ್ಯಮಾಗದ
ಘನ ಸಿಲೆಯನವನೊರ್ವನೇ ಪಿಡಿ
ದನುವಿನಿಂ ನೂಕಲ್ಕೆ ಅದು ಸ್ಥಲಬಿಟ್ಟು ಮುಂದೆಶೆಗೆ
ತೊನೆಯುತ್ತೈತರಲವನಿದೇಂ ಗುರು
ವಿನ ಮಹಿಮವೆಂದಚ್ಚರಿಯಗೊಂ
ಡನುಪಮಾನಂದದಿಯೊರಳ ನಿರ್ಮಿಸಿದ ಸೊಗಸಾಗಿ ೧೪೪

ವರಮಹಂತನ ಶಾಪದಿಂ ಮೈ
ಮರೆದು ರಕ್ತವಕಾರಿ ಮೃತಿ ಪೊಂ
ದಿರುವ ಸ್ಥಾನಕೆನಾಮ ಬಂದಿತು ರಕ್ತ ಮೊರಡೆಂದ
ಹರುಷದಿಂದಾ ಗೌಡದೋರನು
ನೆರಸಿ ಪ್ರಜೆಗಳನುಚಿತಸ್ಥಾನದೊ
ಳಿರಿಸಿ ತಾ ಕುಳ್ಳಿರ್ದಕಟ್ಟೆಯು ಬೇರಿಹುದು ತಿಳಿರಿ ೧೪೫

ಗುರು ಮಹಂತನ ವಂಶದೊಳು ಪ್ರತಿ
ಗುರುವೆನಿಸಿ ಚರಪಟ್ಟವನು ತಾ
ಧರಿಸಿರುವ ಅನ್ನದಾನಸ್ವಾಮಿ ಕೌತುಕದಿಂದ
ಕರಿಸುತಲೆ ಭೀಮಾಖ್ಯ ಮಾಂತೇ
ಶ್ವರನ ಚಾರಿತ್ರವನು ರಚಿಸೆಂ
ದೊರೆದು ಆಜ್ಞಾಪಿಸಲಿದನು ರಚಿಸಿದೆನು ಕನ್ನಡದಿ ೧೪೬

ಪೊಡವಿಯೊಳು ಗೀರ್ವಾಣ ಭಾಷೆಯ
ತೊಡಕುಗಳ ನಾನರಿಯೆ ಬಿಡುಗ
ನ್ನಡದ ಪ್ರೌಢೋಕ್ತಿಗಳ ಸೇರಿಸಿ ಕೃತಿಯ ರಚಿಸಿರ್ಪೆ
ಪಡೆದ ಪಿತ ತನ್ನ ಸುತನ ತೊದ
ಲ್ನುಡಿಗಳಿಂ ಮುದಗೊಳುವ ತೆರದೀ
ಮೃಡ ಮಹಂತನ ಮಹಿಮೆಗಳ ಕೇಳ್ದಿಷ್ಟ ಫಲಪಡಿರಿ ।೧೪೭

ಮಿರಗುವಷ್ಟಾದಶಶತದ ಮೇ
ಲ್ಮೆರೆವ ಪಂಚತ್ರಿಂಶತಿಯವ
ತ್ಸರದ ಚೈತ್ರದೊಳ ಪೂರ್ವದ ಪಕ್ಷ ಪ್ರತಿ ಪದದಿ
ಗುರುಭಕುತಿ ಭೀಮಾಖ್ಯ ಕವಿತಾ
ಗುರುವರನ ಸ್ಮರಿಸುತ ಸಿರಿ ಗುರು
ವರ ಮಹಂತನ ಚರಿತ ಗುರುವಾರದೊಳು ತೀರ್ಚಿದೆ ೧೪೮

ಜಯ ಶಿವ ಮತಾಂಬುಧಿ ಸುಧಾಕರ
ಜಯ ಭಕುತ ಹೃದ್ವನಜ ಭಾಸ್ಕರ
ಜಯ ಲಸದ್ಗುಣ ಮಣಿ ಸುಖಾಕರ ಸಾರ ಮೋಕ್ಷಕರಂ
ಜಯ ಮಹತ್ವ ಸುಕೋಶ ಜಯಜಯ
ಜಯ ಮಹಂತಮಹೇಶ ಜಯಜಯ
ಜಯ ದುರಿತ ತತಿನಾಶ ಜಯಜಯ ಗುರುವೆ ಜಯಜಯತು ೧೪೯

ಇಂತು ಕವಿ ಭೀಮಾಖ್ಯ ಪೇಳ್ದ ಮ
ಹಂತ ಮಾಹೇಶನ ಚರಿತ್ರವ
ಸಂತಸದಿ ಬರದೋದಿ ಕೇಳಿದವರ್ಗೆ ಪೇಳ್ದರ್ಗೆ
ಸಂತತಂ ಮನದಿಷ್ಟ ಫಲಗಳ
ನಂತ ಮಿತ್ತಿಹ ಪರದಿ ಕೃತಿಕ
ರ್ತಂತವಕದಿಂ ಪಾಲಿಸಲತ್ಯಂತ ಹರುಷದಲಿ ೧೫೦

ಅಂತು ಸಂಧಿ ೯ ಕ್ಕಂ ಪದ್ಯಗಳು ೧೫೦+ಗತಪದ್ಯಗಳು
೩೮೧ ವಟ್ಟು ಪದ್ಯಗಳು ೫೩೧ ಕ್ಕಂ ಮಂಗಲಂ

ಕಳೆದ ಮೂರು ದಶಕಗಳಿಂದ ಗುಲಬರ್ಗಾ ವಿಶ್ವವಿದ್ಯಾಲಯವು ಬೋಧನೆ, ಸಂಶೋಧನೆಯ ಜೊತೆಗೆ ಪ್ರಕಟಣೆಗಳ ಮೂಲಕ ಜನಮನ್ನಣೆಯನ್ನು ಗಳಿಸಿದೆ. ಕನ್ನಡ ಭಾಷಾಭಿವೃದ್ಧಿ ಯೋಜನೆಯಲ್ಲಿ ಕರ್ನಾಟಕ ಸರಕಾರದ ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯವು ನೀಡಿದ ಅನುದಾನ ಪಡೆದು ನಮ್ಮ ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಸಂಸ್ಥೆಯ ಪ್ರಾಧ್ಯಾಪಕರು ಹಲವಾರು ಯೋಜನೆಗಳನ್ನು ಕೈಗೆತ್ತಿಕೊಂಡು ಅಧ್ಯಯನ ನಡೆಸುತ್ತಿರುವರು.

ಈ ಯೋಜನೆಗಳಲ್ಲಿ ಹಸ್ತಪ್ರತಿಗಳ ಸಂಗ್ರಹ ಸಂರಕ್ಷಣೆ ಹಾಗೂ ಪ್ರಕಟನಾ ಯೋಜನೆ ಭಾಗ-1 ರ ಪ್ರಧಾನ ಸಂಶೋಧಕರು ಹಾಗೂ ಕನ್ನಡ ಅಧ್ಯಯನ ಸಂಸ್ಥೆಯ ಮುಖ್ಯಸ್ಥರಾದ ಡಾ. ನಾಗಾಬಾಯಿ ಬಿ. ಬುಳ್ಳಾ ಅವರು ಈ ಯೋಜನೆಯಲ್ಲಿ ಹಲವಾರು ಅಪ್ರಕಟಿತ ಹಸ್ತಪ್ರತಿಗಳನ್ನು ಪ್ರಕಟಿಸಿದ್ದಾರೆ. ನಾಡಿನ ಪ್ರಮುಖ ಹಸ್ತಪ್ರತಿಗಳನ್ನು ಪ್ರಕಟಿಸಿ ಜನಸಾಮಾನ್ಯರಿಗೆ ತಲುಪುವಂತೆ ಮಾಡಿದ್ದಾರೆ. ಈ ಯೋಜನೆಯ ಸಂಪುಟಗಳು ಅಪೂರ್ವ ದಾಖಲೆಗಳೆನಿಸಿವೆ. ಹಸ್ತಪ್ರತಿಗಳನ್ನು ಸಂಪಾದನೆ ಮಾಡಿಕೊಟ್ಟಿರುವ ಸಂಪಾದಕರಿಗೂ, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಕಾರ್ಯದರ್ಶಿಗಳಾದ ಶ್ರೀ ಬಿ. ಬಸವರಾಜು ಅವರಿಗೂ, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಆಯುಕ್ತರಾದ ಶ್ರೀ ಮನು ಬಳಿಗಾರ ಅವರಿಗೂ ಹಾಗೂ ಇತರ ಅಧಿಕಾರಿ ವರ್ಗದವರಿಗೂ ವಿಶೇಷ ಕೃತಜ್ಞತೆಗಳು ಸಲ್ಲುತ್ತವೆ.

ಪ್ರೊ. ಈ. ಟಿ. ಪುಟ್ಟಯ್ಯ
ಕುಲಪತಿಗಳು

₹.200/-

ISBN 978-81-920449-6-5